expected that normally only one language from Appendix - I will be the compulsory subject of study.

Form III Standard onwards Kannada will be the optional subject for non-Kannada speaking students. This will not be taught on a purely voluntary basis and it will not be at the cost of any other instruction imparted in the school or any other school activity in which all school children participate. There will be no examination at the end of the year in Kannada language.

ii) From the V Standard onwards, where, in the normal course IInd language is introduced, the child has to study a second language selected from Appendix-I which will be other than the First language, subject to the condition that the child who has not taken Kannada as the First language will have to take Kannada as the Second language.

From V Standard onwards the provision will be made for the study of the third language which will be other than languages studied by the students as First and Second language. This has to be chosen from the list given in Appendix II.

Attendance in the third language class will be compulsory, writing of the examination in the third language will also be compulsory, but from V to VII Standard it will not be obligatory to pass the third language examination. No extra credit will be given in rank, division, class etc. on account of the marks obtained in the third language examination from 5th to 7th standard.

iii) At the secondary stage, i.e., from VIII to X Standards, three languages will be compulsory. First language carrying 125 marks, Second language carrying 100 marks and the third language carrying 100 marks. It will be obligatory to pass the examinations conducted in all these 3 languages, and one of them shall be Kannada.

iv) The standard expected in Second and Third language at the end of X Standard will be what would have been achieved at the end of 6 years of study, if the language subject had been chosen as first language.

v) As contemplated in Govt. Order No. ED 113 SOH 79 dated 20.7.1982, grace marks shall be given in Kannada language examination for non-Kannada speaking students ; and in Hindi for students whose mother tongue is not Hindi. Award of grace marks will be upto a maximum extent of 15 marks to enable the students to pass that language examination.

vi) Exemption from studying Kannada as a compulsory language can be given to the students whose parents have come to the state on temporary transfer.

Appendix - I

1. Kannada	5.	Marathi
2. Tamil	6.	Hindi
3. Telugu	7.	Urdu
4. Malayalam	8.	English

Appendix - II

1. Kannada	7.	Urdu
2. Tamil	8.	English
3. Telugu	9.	Sanskrit
4. Malayalam	10.	Arabic
5. Marathi	11.	Persian
6. Hindi		

11. The validity of the G.O. is questioned in the writ petition

on the ground that it is violative of Articles 29 and 30 of the Constitution of India. Further, it is violative of Article 14 of the Constitution of India in so far as equal opportunity is not provided, in that, students belonging to minority communities are discriminated against. The infringement of right guaranteed under Article 350 - A of the Constitution of India is apparent on the face of the impugned order as it prevents linguistic minority group to avail the opportunity of choices of languages.

12. In so far as Kannada is made a compulsory language in spite of the clear direction in the judgment of the Full Bench of the Karnataka High Court it is bad. The impugned order throws an undue burden on the students since the children are obliged to study three languages from the primary school stage itself. Accordingly, a writ of mandamus is prayed for directing not to enforce the order in question.

13. In support of the grounds urged in the writ petition learned counsel for the petitioner would contend that articles 29 and 30 must be read along with Article 39 (f) because as on today that directive principle has assumed significance. if, therefore, the children are to be given proper opportunities in relation to education no language should be imposed It is the choice of the parents to select the language for the child. Under the impugned order from 5th Standard onwards Kannada is made compulsory. That cannot be done vis - a-vis linguistic minorities. In support of this reliance is placed on D.A.V. College etc. vs. State of Punjab & Ors. (1971 Supp. SCR 688). Again when Punjabi was made the sole medium of instruction this Court struck down such a provision as seen from D.A.V. College Bathinda. etc. vs. State of Punjabi & Ors. 1971 Supp. SCR 677). If as laid down in the Ahmedabad St. Xaviers college society & Anr.etc. vs. State of Gujarat & Anr. (1975 (1) SCR 173) the linguistic minorities have a fundamental right to conserve its language or culture. That cannot be interfered with and there cannot be an element of force obliging the student to study another language. By forcing to study Kannada there is a violation of article 14. In so far as there is no equal opportunity an arbitary act is liable to be struck down as held in Maneka Gandhi vs. Union of India (1978 (2) SCR page 621 at 686).

14. The learned Advocate General of Karnataka submits that the impugned Government order is consistent with the judgement of the Full Bench. The State of Karnataka has accepted the judgement and has passed the impugned order. The G.O. is only a regulatory measure to bring about academic discipline. Having regard to the fact that the minority institutions exist in the state of Karnataka it is obligatory on the part of these institutions to impart knowledge of Kannada. This is the regional language of the state. The G.O. removes the compulsory element during the primary stage as is required to be provided under Article 350 - A of the Constitution. The arguments of the petitioner proceed

on a wrong basis as though minorities are deprived of its right to preserve its language or culture. That is not so. There is no violation of either Articles 29 or 30 nor even Article 14 of the constitution.

15. In order to appreciate the respective contentions it is necessary to find out the purport of the Full Bench decision of the Karnataka High court reported in AIR 1989 Karnataka 226, General Secretary, Linguistic Minorities Protection Committee vs. State of Karnataka. At page 265 it is inter alia stated thus :

"In W.P. Nox. 18848/1987 and 1097/1988 :

i. The writ petitions are allowed.

ii. The impugned Government Order dated 20.7.82 as also the Circular dated 11.8.1992 issued by the Director of Public Instructions pursuant to the aforesaid Govemment Order are declared void as offending Arts. 14, 29 (1) and 30 (1) of the Constitution of India.

iii. The Government shall, however, be at liberty :

(a) to introduce Kannada as one of the two languages from that primary school class from which study of another language in addition to mother - tongue is made obligatory as part of the general pattern of primary education ; and

(b) to make study of Kannada compulsory as one of the three languages for study in secondary schools, by making appropriate order of rules and make it applicable to all those whose mother-tongue is Kannada and also to linguistic minorities who are and who become permanent residents of this State, in all primary and secondary schools respectively, whether they are Government or Government recognised, including those established by any of the Linguistic minorities.

16. The above ruling is based on the fact that Kannada was made Compulsory even in the primary stage. That was the gravamen of the charge by the minority institutions (the writ petitioners). This was the reason why the Full Bench expressed its opinion on the three questions quoted above, in those terms.

17. In view of the liberty given to the State of Karnataka the present G.O. bearing No. 87 Prou Se Bha 88, Bangalore dated 19.6.89 (quoted above) has come to be passed. A corrigendum also came to be issued on 22.6.89 which reads as under :-

"For para (i) of Order portion of the above said Govt. Order dated 19.6.1989 i.e., from the words "From 1st standard..... subject to study" the following para shall be substituted :-

"From Ist Standard to IVth Standard, where it is expected that normally mother tongue will be the medium of instruction, only one language from Appendix - 1 will be compulsory subject of study."

18. A careful reading of the above G.O. would clearly indicate that the element of compulsion at the primary stage is no longer there because the G.O. is unequivocal when it says from 1st to 4th standards mother tongue will be the medium of instruction, only one

language from Appendix-I will be compulsory subject of study. From 3rd standard onwards Kannada will be an optional subject for non-Kannada speaking students. It is to be taught on a Voluntary basis there being no examination at the end of the year in kannada language. This part of the G.O. is clearly in consonance with Article 350-A of the Constitution of India which reads as follows :

"Facilities for instruction in mother-tongue at primary stage - It shall be the endeavour of every State and of every local authority within the state to provide adequate facilities for instruction in the mother - tongue at the primary stage of education to children belonging to linquistic minority groups ; and the President may issue such directions to any State as he considers necessary or proper for securing the provision of such facilities."

19. This Article is designed to implement one of the States Organisation Commission's important recommendations regarding safeguards for linguistic minorities in the States after cordinisation.

20. Mahatma Ganghi, the Father of the Nation, on more than one occasions emphasised on the mother - tongue being the medium of instruction. He forcefully said :

"The babe takes its first lesson from its mother. I, therefore, regard it as a sin against the motherland to inflict upon her children a tongue other than their mother's for their mental development."

"I hold it be as necessary for the urban child as for the rural to have the foundation of his development laid on the solid rock of the mother tongue."

"Who can calculate the immeasurable loss sustained by the nation owing to thousands of its young men having been obliged to waste years in mastering a foreign language and its medium, of which in their daily life they have the least use and in learning which they had to neglect their own mother-tongue and their own literature."

21. All educational experts are uniformly of the opinion that pupils should begin their schooling through the medium of their mother tongue. There is great reason and justice behind this. Where the tender mind of the children are subject to an alien medium the learning process becomes unnatural. It inflicts a cruel strain on the children which makes the entire transaction mechanical. Besides, the educational process become artificial and torturous. The basic knowledge can easily be garnered through the mother-tongue. The introduction of a foreign language tends to threaten to atrophy the development of mother-tongue. When the pupil comes of age and reaches the 5th standard level, the second language is introduced. The child who has not taken Kannada as a first language is required to take it as a second language. At the secondary stage the three-language formula is introduced. However, in cases of non-Kannada speaking students grace marks upto 15 are awarded. Certainly, it cannot be contended that a student studying in a school from Karnataka need not know the regional lan-

guage. It should be the endeavour of every State to promote the regional language of that State. In fact, the Government of Karnataka has done commendably well in passion this G.O. Therefore, to contend that the imposition of study of Kannada throws an undue burden on the students is untenable. Again to quote Mahatma Gandhi :

"The medium of instruction should be altered at once and at any cost, the provincial languages being given their rightful place. I would prefer temporary chaos in higher education to the criminal waste that is daily accumulating."

22. In view of this analysis, it is clear that there is no violation of Article 29 or 30 of the Constitution infringing the right of the minorities. In D.A.V. College Bathinda vs. State of Punjab (1971 Supp. SCR 677) this Court held at page 687 as under :

"The University by adopting Punjabi as the sole or exclusive medium for the Colleges affiliated to the University, not with standing the concessions granted, acted in excess of the power conferred on it. While the University can prescribe Punjabi as a medium of instruction it cannot prescribe it as the exclusive medium nor compel affiliated Colleges established and administered by linguistic or religious minorities or by a Section of the citizens who wish to conserve their language script and culture, to teach in Punbaji or take examination in that language with Gurmukhi script. The University Act having compulsorily affiliated these Colleges must of necessity cater to their needs and allow them to administer their institutions in their own way and impart instructions in the medium and write examination in their own script."

23. Therefore, this ruling has no application to the facts of the present case.

24. Reliance placed on this decision by learned counsel for the petitioner is misconceived. In D.A.V. College vs. State of Punjab (1971 Supp 688) at pages 703-704 it was held thus :

"Sub-section (3) of Section 4 also does not in our view transgress the guarantee under Article 29 (1). Whether one may like it or not, linguistic States in this country have come to stay. The purpose and object of these linguistic states is to provide with greater facility the development of the people of that area educationally, socially and culturally, in the language of that region but while the State or the University has every right to provide for the education of the majority in the regional medium, it is subject to the restrictions contained in Articles 25 to 30. Neither the University nor the State can provide for imparting education in a medium of instruction in a language and script which stifles the language and script of any Section of the citizens. Such a course will trespass on the rights of those Sections of the citizens which have a distinct language or script and which they have right to conserve through educational institutions of their own. In our view Section 4 (3) does not lend itself to the interpretation that the medium of instruction of all affiliated Colleges has to be Punjabi. The provision, as we construe it, is for the promotion of Punjabi studies and research in and in the

development of the Punjabi language, literature and culture which is far from saying that the University can under that provision compel the affiliated Colleges particularly those of the minority to give instruction in the Punjabi language or in any way impede the right to conserve their language script and culture.

It is again contended that while provision is made in Section 4 (2) and 4 (3) for the study and research of the life and teaching of Guru Nanak and for the study of Punjabi language, script and literature. No similar provision is made for the study, of religious Heads of Hindus or for the study of Hindi and Devnagri script though Hindus form a substantial portion of the population of the State. These provisions therefore are discriminatory and violative of Article 14 of the Constitution. This argument in our view is devoid of merit. The State of Punjab is created as a unilingual State with Punjabi as its language and if provision is made for study of Punjabi language that does not furnish a ground for discrimination nor can the provision for study of the life and teaching of Guru Nanak afford any cause for complaint as in neither case we have noticed, is there any compulsion on any person to undertake such studies nor is any of the communities prohibited from pursuing studies in respect of either Hindi or of the life and teachings of any Hindu saint. The facts of the case in our view do not attract Article 14."

25. The directive principle contained in Article 39(f) does not advance the case of the petitioner.

26. As rightly contended by the learned Advocate General where the State by means of the impinged G.O. desires to bring about academic discipline as a regulatory measure it is a matter of policy. The State knows how best to implement the language policy. It is not for the Court to interfere. In Hindi Hitrakshak Samiti and other vs. Union of India (1990 (1) SCR 588) this lays down at page 592 as under :

It may be that Hindi or other regional languages are more appropriate medium of imparting education to very many and it may be appropriate and proper to hold the examination, entrance or otherwise, in any particular regional or Hindi language, or it may be than Hindi or other regional language because of development of that language, is not yet appropriate medium to transmute or test the knowledge or capacity that could be had in medical and dental disciplines. It is a matter of formulation of policy by the State or educational authorities in charge-of any particular situation. Where the existence of a fundamental right has to be established by acceptance of a particular policy or a course of action for which there is no legal compulsion or statutory imperative, and on which there are divergent view, the same cannot be sought to be enforced by Article 32 of the Constitution. Article 32 of the Constitution cannot be a means to indicate policy preference."


27. In a matter relating to policy this Court should decline to interfere. In the result, we conclude the writ petition is devoid of merit and is accordingly dismissed.

28. As regards civil appeals we find the majority opinion of the

High Court has approached the matter in a proper perspective. We have already extracted the relevant portions of the judgment. The sting of the earlier G.Os. and orders was the element of compulsion especially the children beloging to linguistic minorities from the first year of the primary school making Kannada as the sole first language in the secondary schools. Such a provision is violative of Articles 29 and 30 of the Constitution. We have no difficulty in upholding the well-considered judgment of the High Court. In fact, the State has accepted the position and issued G.O. dated 19.6.89 which is impugned in W.P. No. 536 of 1991. Therefore, the civil appeals will also stand dismissed. However, in the circumstances of the case, there shall be no order as to costs.

I would never read a book if it were possible to talk half an hour with the man who wrote it

Woodrow Wilson



Where the Mind is Without Fear

Where the mind is without fear and the head is held high;

Where Knowledge is free;

Where the world has not been broken up into fragments by narrow domestic walls;

Where words come out from the depth of truth;


Where tireless striving stretches its arms towards perfection;

Where the clear stream of reason has not lost its way in to the dreary desert sand of dead habit;

Where the mind is led forward by Thee into ever-widening thought and action —

Into that heaven of freedom, my Father, let my country awake.

Rabindranath Tagore
Gitanjali



COLLEGE CULTURAL TEAM



COLLEGE BASKET BALL TEAM



COLLEGE CRICKET TEAM



BASKET BALL TEAM (WOMEN)

CHRIST COLLEGE FOOTBALL TOURNAMENT




TEAM: CHRIST COLLEGE, INRINJALKULA, KERALA




HOCKEY TEAM

OUT-GOING STUDENTS



III PME



III CMS



III CBZ



III B.COM. 'A'




III B.COM. 'B'




III B.A.



III B.A.



III B.B.M.



III B.H.M.




II PCMB 'A'




II PCMB 'B'




II PCMB 'C'




II CAMS



II HECA



II HESP



MSc PHYSICS



M.A. SOCIOLOGY

ನಮ್ಮ ಶಿಕ್ಷಣದ ಪದ್ಧತಿಗೆ ಒಂದು ಗುರಿ ಇದೆಯೇ?

ಎಂ. ಗೋಪಾಲಕೃಷ್ಣ ಅಡಿಗ

ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ನಾವು ವಿಫಲರಾಗುವುದಕ್ಕೆ ಏನು ಕಾರಣ ಎಂದು ನಾವು ಯೋಚಿಸಬೇಕು. ನಮ್ಮ ವಿಚಾರಗಳು, ಯೋಜನೆಗಳು, ಭಾಷಣಗಳು ಇವುಗಳಿಗೂ ನಮ್ಮ ಆಚಾರಕ್ಕೂ ವಾಸ್ತವ ಲೋಕದಲ್ಲಿನ ನಮ್ಮ ಕ್ರಿಯೆಗಳಿಗೂ ಸಂಬಂಧ ಏರ್ಪಡುತ್ತಿಲ್ಲ. ಆಚಾರವಾಗಿ ಅವತಾರಗೊಳ್ಳಲು ಅಸಾಧ್ಯವಾದ ವಿಚಾರಗಳು, ವ್ಯವಹಾರದಲ್ಲಿ ರೂಪುಗೊಳಲಾರದ ಯೋಜನೆಗಳು ಇವು ವಿಚಾರಗಳೂ ಅಲ್ಲ, ಯೋಜನೆಗಳೂ ಅಲ್ಲ ಎಂದು ನಮಗೆ ಏಕೆ ತಿಳಿಯಬಾರದು? ಇದಕ್ಕೆ ಕಾರಣವಾಗಿ, ನಮಗೆಲ್ಲರಿಗೂ ಸಾಮಾನ್ಯವಾದ, ನಮ್ಮ ಸಂಸ್ಕೃತಿಯ ಒಂದು ಅಂಶವೇ ಆದ, ಪಾರಮಾರ್ಥಿಕವೇ ಬೇರೆ ವ್ಯವಹಾರವೇ ಬೇರೆ ಎಂಬ ಭಾವನೆ ಇರಬಹುದೇ? ನಮ್ಮ ಮನಸ್ಸಿನಲ್ಲಿರುವ ಉತ್ತಮವೂ ಉನ್ನತವೂ ಆದ ಪ್ರವೃತ್ತಿಗಳಿಗೆಲ್ಲ ಮಾತಿನಲ್ಲಿ ತಕ್ಕ ಅಭಿವ್ಯಕ್ತಿ ಪಡೆದು, ನಿಜವಾದ ಬದುಕಿನಲ್ಲಿ ನಮ್ಮಲ್ಲಿರುವ ಕೆಳಮಟ್ಟದ ಪ್ರವೃತ್ತಿಗಳಿಗೆ ತಕ್ಕ ಅಭಿವ್ಯಕ್ತಿಯನ್ನು ಕಷ್ಟಪಟ್ಟು ಸಾಧಿಸುವ ಇಬ್ಬಗೆಯ ಇಬ್ಬಂದಿ ಬದುಕು ನಮ್ಮದಾಗಿದೇಯೋ ಎನ್ನಿಸುತ್ತದೆ. ಜಗತ್ತು ಮಿಥ್ಯೆಯೆಂಬ ತತ್ವವನ್ನು ನಮ್ಮ ಸೋಮಾರಿ ಮನಸ್ಸು ಈ ರೀತಿ ಅರ್ಥಮಾಡಿಕೊಂಡು ತನ್ನ ಬದುಕನ್ನು ಹೋಳು ಹೋಳಾಗಿ ಮಾಡಿಕೊಂಡು ವಿಚಿತ್ರವಾದೊಂದು ಮಾನಸಿಕ ರೋಗಕ್ಕೆ ತುತ್ತಾಗಿರಬೇಕು. ಇಲ್ಲವಾದರೆ ಇಂದಿನ ನಮ್ಮ ರಾಜಕೀಯ, ನೈತಿಕ, ಆರ್ಥಿಕ ಅವನತಿಯನ್ನು, ನಮ್ಮ ಬುದ್ಧಿಯ ಗೊಂದಲವನ್ನು, ನಮ್ಮ ಹತಾಶ ಶರಣಾಗತಿಯನ್ನು ಕಂಡೂ ನಾವು ಏಕೆ ಉದ್ವೇಗಗೊಳ್ಳುವುದಿಲ್ಲ? ಈ ಪರಿಸ್ಥಿತಿ ಬದಲಾಗಬೇಕೆಂದು ಹೊಡೆದಾಡುವ ಬುದ್ಧಿ ನಮ್ಮಲ್ಲಿ ಸಾಮೂಹಿಕವಾಗಿ ಏಕೆ ವ್ಯಕ್ತವಾಗುವುದಿಲ್ಲ?

ಈಗ್ಗೆ ಒಂದು ತಲೆಮಾರಿನಿಂದಲೂ ನಮ್ಮ ಬದುಕು ಬಹು ತೀವ್ರವಾದ ಗತಿಯಲ್ಲಿ ಬದಲಾಗುತ್ತ ಬಂದಿದೆ. ಪ್ರಜಾತಂತ್ರ, ಉದ್ಯಮದ ಯಾಂತ್ರೀಕರಣ, ಅವಿಭಕ್ತ ಕುಟುಂಬಗಳ ವಿಘಟನೆ, ಜಾತಿಪದ್ಧತಿಯ ಶೈಥಿಲ್ಯ, ಬದುಕಿನ ಕೇಂದ್ರ ಬಿಂದು ಹಳ್ಳಿಗಳಿಂದ ನಗರಗಳಿಗೆ ಚಲಿಸುತ್ತಿರುವುದು - ಇವು ನಮಗೆ ಗೊತ್ತಿಲ್ಲದಂತೆಯೇ ನಮ್ಮ ಬದುಕಿನ ರೀತಿಗಳನ್ನು ಮಾರ್ಪಡಿಸುತ್ತ ಬಂದಿವೆ. ಈ ಮಾರ್ಪಾಟುಗಳನ್ನು ಬುದ್ಧಿಪೂರ್ವಕವಾಗಿ ಅರಿತುಕೊಂಡು ವ್ಯಕ್ತಿಗಳನ್ನೂ ಸಮಾಜವನ್ನು ಅದಕ್ಕೆ ಹೊಂದಿಸಲು ತಕ್ಕ ಏರ್ಪಾಟುಗಳನ್ನು ನಾವು ಮಾಡುತ್ತ ಬಂದಿಲ್ಲ. ಪ್ರವಾಹದಲ್ಲಿ ಬಿದ್ದ ಜಡವಸ್ತುಗಳ ಹಾಗೆ ಕೊಚ್ಚಿಕೊಂಡು ಹೋಗುತ್ತಿದ್ದೇವೆ. ಆದರೆ ನಾವು ಜಡವಸ್ತುಗಳಲ್ಲ, ಚೈತನ್ಯ ಉಳ್ಳವರು, ಬುದ್ಧಿಯುಳ್ಳವರು. ಆ ಬುದ್ಧಿಯನ್ನು ನಾವು ಸಾಮಾಜಿಕವಾಗಿ ಉಪಯೋಗಿಸುವುದನ್ನು ಕಲಿಯುವುದು ಅತ್ಯಗತ್ಯ. ಹಾಗೆ ಕಲಿಯಲು ತಕ್ಕ ವ್ಯವಸ್ಥೆ ಇಲ್ಲವಾಗಿ ಹೊಸ ಜಗತ್ತಿನಲ್ಲಿ ಬದುಕಿದ್ದರೂ ಹಳೆಯ ಕಂದಾಚಾರಗಳ ಕಂದಕದಲ್ಲೇ ನಮ್ಮ ಮನಸ್ಸು ಬಿದ್ದು ಒದ್ದಾಡುತ್ತಿದೆ. ಹೀಗಾಗಿ ನಮ್ಮ ಬದುಕು ಉದ್ದಿಷ್ಟ ಗುರಿಯ ಕಡೆಗೆ ಕ್ರಮಬದ್ಧವಾಗಿ ಸಾಗುತ್ತಿಲ್ಲ.

ಪ್ರಜಾಪ್ರಭುತ್ವ ಪದ್ಧತಿ ನಮ್ಮ ಬುದ್ಧಿಗೂ, ಬದುಕಿಗೂ ಒಂದು ದೊಡ್ಡ ಸವಾಲಾಗಬೇಕಾಗಿತ್ತು. ರಾಜತ್ವ ಹೋಗಿ ಪ್ರತಿಯೊಬ್ಬನೂ ರಾಜನಾಗಬೇಕಾದ ಈ ಸವಾಲು ಸಾಮಾನ್ಯವಾದದ್ದೇ? ಇದು ಯುಗಪ್ರವರ್ತಕವಾಗಬೇಕಾಗಿದ್ದ ಒಂದು ಹೊಸ ನಿರ್ಧಾರ. ರಾಜಕೀಯವಾಗಿ ಇನ್ನೊಬ್ಬರ ಒಡೆತನವನ್ನು ಒಪ್ಪಿಕೊಂಡು ಬಂದು ಜನತೆ ತನ್ನ ಬದುಕಿಗೆ ತಾನೇ ಒಡೆಯನಾಗಿ ಆ ಒಡೆತನಕ್ಕೆ ತಕ್ಕ ಗುಣಗಳನ್ನು ಕಲಿತುಕೊಳ್ಳಲೇಬೇಕಾದ, ಇಲ್ಲವಾದರೆ ತನ್ನ ಮತ್ತು ಉಳಿದೆಲ್ಲರ ಬದುಕಿಗೆ ಮಾರಕವಾಗಬೇಕಾದ ಸಂದರ್ಭ. ಈ ಸಂದರ್ಭದಲ್ಲಿ ಇಡೀ ಬದುಕನ್ನೇ ಪ್ರಜಾಪ್ರಭುತ್ವದ ಮೌಲ್ಯಗಳಿಗನುಸಾರವಾಗಿ ಮಾರ್ಪಡಿಸಲು ಸೊಂಟ ಕಟ್ಟಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿತ್ತು. ನಾವು ಅದನ್ನು ಮಾಡಲಿಲ್ಲ. ಬದಲಾಗಿ ಮನುಷ್ಯನೇ ಕಷ್ಟಪಟ್ಟು ಕಲಿತು ಮಾಡಬೇಕಾದ ಈ ಕೆಲಸಗಳು ತಮ್ಮಿಂದ ತಾವೇ ಆಗುತ್ತವೋ ಎಂದು ಭ್ರಮಿಸಿ ಹೆಚ್ಚು ಕಷ್ಟಪಡುವ ಅಗತ್ಯವಿಲ್ಲದ ಕೆಲಸಗಳನ್ನು ಎಂದರೆ ಚುನಾವಣೆಗಳನ್ನು ನಡೆಸುವುದು. ವಿಧಾನಸಭೆ - ಲೋಕಸಭೆಗಳಲ್ಲಿ ಮಾರುದ್ದ ಭಾಷಣ ಬಿಗಿಯುವುದು, ಗೊಂದಲವೆಬ್ಬಿಸುವುದು, ಸಾಲ ತಂದು ಹೊಸ ಕಾರ್ಖಾನೆಗಳನ್ನು ಪರಕೀಯರ ಸಹಾಯದಿಂದ ಸ್ಥಾಪಿಸಿ ಅಸಮರ್ಥರ ಕೈಗೆ ಅವುಗಳ ಹೊಣೆಯನ್ನೊಪ್ಪಿಸುವುದು, ಶಿಕ್ಷಣ ವ್ಯವಸ್ಥೆಯಲ್ಲಿ ನೂರಾರು ತೇಪೆಗಳನ್ನು ಹಾಕಿ ನಮ್ಮ ಮಕ್ಕಳು ಆಧುನಿಕತೆಯನ್ನು ಸಿನಿಮಾ ಮಂದಿರಗಳಲ್ಲೂ ಬಾರುಗಳಲ್ಲೂ ಕಲಿಯುವಂತೆ ಮಾಡುವುದು - ಇವುಗಳನ್ನು ತುಂಬ ಸಮರ್ಥವಾಗಿ ಮಾಡಿಕೊಂಡು ಬಂದೆವು.

ಇಂದಿನ ನಮ್ಮ ಶಿಕ್ಷಣಲೋಕವನ್ನು ಗಮನಿಸಿದರೆ ಅಲ್ಲಿ ಯಾವುದೇ ಒಂದು ಗಣ್ಯವಾದ ಗುರಿ ಇರುವ ಹಾಗೆ ಕಾಣುವುದಿಲ್ಲ. ಹೇಗಾದರೂ ಹುಡುಗ ಪಾಸು ಮಾಡಿ ಒಂದು ಕೆಲಸ ಗಿಟ್ಟಿಸಿಕೊಳ್ಳುವುದೇ ವಿದ್ಯೆಯ ಪರಮ ಉದ್ದೇಶ ಎಂದು ನಾವೆಲ್ಲರೂ ಭಾವಿಸಿದ ಹಾಗೆ ಕಾಣುತ್ತದೆ. ವಿದ್ಯೆಯೆಂದರೆ ಇಷ್ಟು ಪೊಳ್ಳಾದ ಇಷ್ಟು ಅರ್ಥಹೀನವಾದ ಪೀಡೆ ಎಂದು ನಾವು ಭಾವಿಸಿದ್ದಾದರೂ ಹೇಗೆ -

ತಿಳಿಯುವುದಿಲ್ಲ. ವಿದ್ಯೆಯ ಬಗ್ಗೆ ದೊಡ್ಡ ಗೌರವವನ್ನಿಟ್ಟುಕೊಂಡು ಬಂದ ಸಂಪ್ರದಾಯ ಇಷ್ಟು ಬೇಗ ಮಣ್ಣುಗೂಡಿದ್ದು ಹೇಗೆ? ವಿದ್ಯೆ ಸುಲಭವಾಗಬೇಕು; ಎಲ್ಲರೂ, ಓದದೆ ಇದ್ದವರೂ ಕೂಡ, ಪಾಸಾಗಬೇಕು ಎಂಬ ಆಗ್ರಹ ಹುಟ್ಟಿದ್ದು ಹೇಗೆ? ಸಧ್ಯಕ್ಕೆ ಶಿಕ್ಷಣದ ಗುರಿ ಇಷ್ಟೇ ಎಂದು ಕಾಣುತ್ತದೆ; ಅಧಿಕಾರಿಗಳ ದೃಷ್ಟಿಯಿಂದ ಇದು ಮುಖ್ಯರಾಗಿ ಅಂಕಿ-ಅಂಶಗಳ ಬಾಬತ್ತು. ವಿದ್ಯಾರ್ಥಿ ವೃಂದ ಹದ್ದು ಮೀರಿದಾಗ ಶಾಂತಿ ಪಾಲನೆಯ ಕಸರತ್ತು ; ತಂದೆತಾಯಿಗಳ ದೃಷ್ಟಿಯಿಂದ ಹೆಚ್ಚು ಕೆಲಸವಿಲ್ಲದೆ ತುಂಬ ಸಂಬಳ ಗಿಂಬಳ ಪಡೆಯಬಹುದಾದ ಚಾಕರಿ ಪಡೆಯಲು ಅತ್ಯವಶ್ಯಕವಾದ ಒಂದು ಅನುಕೂಲ; ಅಧ್ಯಾಪಕರ ದೃಷ್ಟಿಯಿಂದ ಆಡಳಿತಗಾರರ ವಕ್ರದೃಷ್ಟಿಯಿಂದ ತಪ್ಪಿಸಿಕೊಂಡು ವಿದ್ಯಾರ್ಥಿಗಳ ಸಾಮೂಹಿಕ ನರ್ತನದಿಂದ ಜಖಂ ಆಗದಂತೆ ನೋಡಿಕೊಂಡು ಹಾಗೂ ಹೀಗೂ ಹೊಂದಿಕೊಂಡು ಹೋಗಬೇಕಾದ ಜೀವನೋಪಾಯ ಮಾರ್ಗ. ಈ ಮಾತಿಗೆ ಅಪವಾದವಾಗಿ ಕಾಣುವ ಭಾಷಣಗಳೂ ಉದ್ದೇಶಪೂರ್ಣ ಘೋಷಣೆಗಳೂ ಇರುವುದು ನನಗೆ ತಿಳಿದಿದೆ. ಆದರೆ ನಿಜವಾಗಿ ವಾಸ್ತವಿಕವಾಗಿ ಇರುವ ಪರಿಸ್ಥಿತಿ ಬಹಳಮಟ್ಟಿಗೆ ಇಂಥದೇ.

ಶಿಕ್ಷಣದ ಗುರಿ ನಮ್ಮ ಅಂತರಂಗದ ಸಂಸ್ಕಾರ. ಸಂಸ್ಕಾರ ಎಂದರೆ ವಿಚಾರ ಪೂರ್ವಕವಾಗಿ ಮಾಡುವ ಕೆಲಸ. ಸುಂದರವಾದುದನ್ನೂ ಅತ್ಯಂತ ಕೋಮಲವೂ ಸೂಕ್ಷ್ಮವೂ ಆದ ಭಾವನೆಗಳನ್ನು ಗ್ರಹಿಸುವ ಶಕ್ತಿಯ ಸಂಗ್ರಹ. ಇದು ಅನಾಯಾಸವಾಗಿ ಸಿದ್ಧಿಸುವ ಕೆಲಸವಲ್ಲ ಎಂಬುದು ನಮಗೆ ತಿಳಿದಿದೆ; ಬೆಳಿಗ್ಗೆ ಎದ್ದು ಮುಖ ತೊಳೆಯುವುದು, ಪ್ರತಿನಿತ್ಯವೂ ಸ್ನಾನ ಮಾಡುವುದು, ಚೊಕ್ಕಟವಾಗಿ ಇರುವುದು, ಈ ಮುಂತಾದ ಶಾರೀರಕ ಸಂಸ್ಕಾರಗಳನ್ನು ಮಕ್ಕಳಿಗೆ ಕಲಿಸುವುದೂ ಎಷ್ಟು ಕಷ್ಟವಾಗುತ್ತದೆ ಎನ್ನುವುದು ತಂದೆ ತಾಯಿಗಳಿಗೆ ತಿಳಿದಿದೆ. ಮನಸ್ಸನ್ನು ಸಂಸ್ಕರಿಸುವ ಕೆಲಸ ಇನ್ನೂ ಕಷ್ಟವಾದದ್ದು. ಕಲಿಸಿದ ಶಾರೀರಕ ಸಂಸ್ಕಾರಗಳು ಸ್ಥಿರವಾಗಿಯೂ ಅರ್ಥಪೂರ್ಣವಾಗಿಯೂ ಉಳಿಯಬೇಕಾದರೆ ಅವುಗಳ ಆದರ್ಶದ ಮುದ್ರೆ ಮನಸ್ಸಿನಲ್ಲಿ ಅಚ್ಚೊತ್ತಬೇಕು. ಮೂರು ಹೊತ್ತು ಸ್ನಾನ ಮಾಡಿದರೂ ಮೈ ಕೊಳೆಯಾಗಿಯೇ ಇರುವುದೂ, ಹಲ್ಲು ತಿಕ್ಕಿದ ಮೇಲೂ ಬಾಯಿ ವಾಸನೆ ಹಾಗೇ ಉಳಿದಿರುವುದೂ, ದಿನವೂ ದೇವರ ಪೂಜೆ ಮಾಡಿದರೂ ಮಾನವ ದಾನವನಾಗಿಯೇ ಉಳಿಯುವುದೂ ಅಪರೂಪವಲ್ಲ. ಮನಸ್ಸಿನಲ್ಲಿರುವ ನಮ್ಮ ವಿವಿಧ ಪ್ರವೃತ್ತಿಗಳನ್ನು ಮೂಲದಲ್ಲೇ ಸಂಸ್ಕರಿಸಿ ಒಬ್ಬ ಮನುಷ್ಯ ತನಗೂ ತನ್ನ ನೆರೆಯವರಿಗೂ ಹೊರೆಯಾಗದೆ ಪ್ರಯೋಜನಕಾರಿಯಾಗುವ ಹಾಗೆ ಅವನನ್ನು ತಯಾರು ಮಾಡುವ ಕೆಲಸ ಇನ್ನೂ ಕಷ್ಟದ್ದು. ಈ ಕೆಲಸ ಶಿಕ್ಷಣಕ್ಕೆ ಸೇರಿದ್ದು. ಈ ಶಿಕ್ಷಣ ಮನೆಯಲ್ಲಿ ಆರಂಭವಾಗಿ ಶಾಲೆ-ಕಾಲೇಜುಗಳಲ್ಲಿ ಮುಂದುವರಿದು ವಿದ್ಯಾರ್ಥಿ ಜೀವನ ರಂಗಕ್ಕೆ ಇಳಿಯುವ ಹೊತ್ತಿಗೆ ಸರಿಯಾಗಿ ಬದುಕುವ ರೀತಿಯ ತಾಲೀಮು ಚೆನ್ನಾಗಿ ನಡಿದಿರಬೇಕು. ಈ ಕೆಲಸ ನಮ್ಮಲ್ಲಿ ನಡೆಯುತ್ತಿದೆಯೇ?

ಮನಸ್ಸಿನ ಸಂಸ್ಕಾರವೆಂದರೆ ಕೇವಲ ನಾನಾ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮನಸ್ಸನ್ನು ಒಂದು ಉಗ್ರಾಣವನ್ನಾಗಿ ಮಾಡುವುದಲ್ಲ. ಈಗ ನಮ್ಮ ಅತ್ಯುತ್ತಮ ವಿದ್ಯಾ ಸಂಸ್ಥೆಗಳಲ್ಲೂ ದೊರೆಯುವಂಥ ಶಿಕ್ಷಣ ಇಂಥದೇ. ಇಂಥ ವ್ಯವಸ್ಥೆಯಲ್ಲಿ ಅತ್ಯುತ್ತಮ ವಿದ್ಯಾರ್ಥಿಯೆಂದರೆ ಪರೀಕ್ಷೆಯಾಗುವ ತನಕ ಉರು ಹೊಡೆದದ್ದನ್ನು ನೆನಪಿಟ್ಟುಕೊಳ್ಳುವ ಸ್ಮೃತಿ ವೀರನೇ ಸರಿ. ಇದು ಜೀರ್ಣಶಕ್ತಿಯ ಬಗ್ಗೆ ಸ್ವಲ್ಪವೂ ಚಿಂತಿಸದೆ ಹೊಟ್ಟೆಗೆ ನಿರಂತರವಾಗಿ ಆಹಾರವನ್ನು ತುರುಕುತ್ತ ಅದನ್ನು ಜೀರ್ಣಿಸುವ ಬಗ್ಗೆ ಸ್ವಲ್ಪವೂ ವ್ಯಾಯಾಮ ನಡೆಸದೆ ಇದ್ದ ಹಾಗೆ. ಹೊಟ್ಟೆಬಾಕ ಈ ಉಪಚಾರವನ್ನು ಸ್ವಲ್ಪಮಟ್ಟಿಗೆ ಸಹಿಸಬಹುದು. ಉಳಿದವರಿಗೆ ಬಹುಬೇಗ ಓಕರಿಗೆ ಬರುತ್ತದೆ. ಒಬ್ಬ ನಿಜವಾದ ವಿದ್ಯಾರ್ಥಿ ಇದ್ದರೆ ಅವನಿಗೆ ಬಹುಬೇಗ ಓಕರಿಗೆ ಶುರುವಾಗಬಹುದು. ವಿದ್ಯಾರ್ಥಿಗಳ ಗೊಂದಲವೆಲ್ಲವೂ ಈ ಓಕರಿಕೆಯ ಸಾರ್ವಜನಿಕ ಪ್ರದರ್ಶನವೇ.

ವಿದ್ಯಾರ್ಥಿಯ ಮನಸ್ಸು ಕೆಲಸ ಮಾಡುವ ಹಾಗೆ ಮಾಡುವುದೇ ಶಿಕ್ಷಣದ ಮೂಲ ಉದ್ದೇಶ. ಅವನ ಅಂತರಂಗ ಜೀವನ ಅತ್ಯುತ್ತಮವಾದದ್ದರ, ಅತಿ ಸೂಕ್ಷ್ಮವಾದದ್ದರ ಸಂಪರ್ಕವನ್ನು ಪಡೆದು ಸ್ವತಃ ಕೆಲಸ ಮಾಡಲು ತಕ್ಕ ಉಪಕರಣಗಳನ್ನೂ, ಸಾಮಗ್ರಿಗಳನ್ನೂ ಒದಗಿಸುವುದು, ತನ್ನ ಅನುಭವದ ಮಾರ್ಗದರ್ಶನ ಎಲ್ಲಿ ಅಗತ್ಯವೋ ಅಲ್ಲಿ ಅದನ್ನು ಒದಗಿಸುವುದು. ತನ್ನ ಉದಾಹರಣೆ ಮೇಲ್ಪಂಕ್ತಿಗಳ ಮೂಲಕ ಅವನಲ್ಲಿ ಜೀವನದ ಅನೇಕ ಮೌಲ್ಯಗಳ ತಾರತಮ್ಯಜ್ಞಾನ ಕುದುರುವಂತೆ ನೋಡುವುದು - ಇದು ಅಧ್ಯಾಪಕನ ಕೆಲಸ. ಇಂಥ ಒಂದು ಸ್ವತಂತ್ರ ಅಭಿವ್ಯಕ್ತಿಗೆ ತಕ್ಕ ವಾತಾವರಣವನ್ನು ಸೃಷ್ಟಿ ಮಾಡುವುದು ಸಮಾಜದ ಕೆಲಸ. ವಿದ್ಯಾರ್ಥಿ ಸ್ವಂತ ಪರಿಶೋಧನೆಯಿಂದ ಏನನ್ನು ಕಂಡುಕೊಳ್ಳುತ್ತಾನೋ ಅದೇ ನಿಜವಾದ ವಿದ್ಯೆ. ಅಂಥ ವಿದ್ಯೆ ಪಡೆದವನೇ ಧೀರವೂ ಗಂಭೀರವೂ ಆಗಿ ಬದುಕಲು ಸಮರ್ಥನಾದ ಸುಸಂಸ್ಕೃತ ಮನುಷ್ಯ ಆಗುತ್ತಾನೆ. ಬರೆದದ್ದನ್ನು ಅಥವಾ ಬರೆಸಿದ್ದನ್ನು ಉರುಹೊಡೆದು ಪ್ರಥಮ ವರ್ಗದಲ್ಲಿ ಪಾಸಾಗುವವನು ಪ್ರಥಮ ವರ್ಗದ ಗಿಣಿರಾಮನಾಗುತ್ತಾನೆ. ಇಂಥ ವಾತಾವರಣದಲ್ಲೂ ಕೆಲವು ತರುಣರು ಶ್ರೇಷ್ಠ ವ್ಯಕ್ತಿಗಳಾಗಿ, ನಿಜವಾದ ವಿದ್ಯಾವಂತರಾಗಿ ಹೊರಬರುತ್ತಿದ್ದರೆ ಅದಕ್ಕೆ ನಮ್ಮ ಶಿಕ್ಷಣ ಪದ್ಧತಿ ಕಾರಣವಲ್ಲ, ಅವರ ಪೂರ್ವಪುಣ್ಯ. ಆದರೆ

ಅಧ್ಯಾಪಕನ ಸಲಹೆ, ಮಾರ್ಗದರ್ಶನ ಅತ್ಯ ಗತ್ಯವಾಗಿರುವ ಶೇಕಡಾ ತೊಂಭತ್ತೊಂಭತ್ತು ಮಂದಿ ವಿದ್ಯಾರ್ಥಿಗಳಿಗೆ ಈಗ ವಿದ್ಯೆಯೇ ದೊರೆಯುತ್ತಿಲ್ಲ. ಅವರಲ್ಲಿ ಜನ್ಮಸಿದ್ಧವಾದ ಬುದ್ಧಿ ಎಷ್ಟಿದೆಯೋ ಅದಕ್ಕೂ ತಕ್ಕ ಸಂಸ್ಕಾರ ಇಲ್ಲದೆ, ದೇಶದಲ್ಲಿ ಅವಿವೇಕಿಗಳ ಸಂಖ್ಯೆ ಹೆಚ್ಚುತ್ತಿದೆಯೇ ಹೊರತು ಕಡಿಮೆ ಆಗುತ್ತಿಲ್ಲ. ಈ ಬಗ್ಗೆ ನಮಗೆ ಯಾಕೆ ಕಳವಳ ಹುಟ್ಟು ವುದಿಲ್ಲ?

ಇಲ್ಲದೆ ಇರುವುದನ್ನು ಶಿಕ್ಷಣ ಎಂದೂ ತಂದು ಕೊಡಲಾರದು. ಆದರೆ ವಿದ್ಯಾರ್ಥಿ ಯಲ್ಲಿ ಏನೇನು ಇದೆಯೋ ಅದನ್ನು ಸಂಸ್ಕರಿ ಸುವುದು, ಹಾಗೆ ಸಂಸ್ಕೃತವಾದ ಬೇರೆ ಬೇರೆ ಶಕ್ತಿಗಳನ್ನು ಒಂದಕ್ಕೊಂದು ಹೊಂದಿಸಿ, ಮನಸ್ಸಿ ನಲ್ಲಿ, ಆದಕಾರಣ ಬದುಕಿನಲ್ಲಿ, ಸಮತೂಕ ಇರುವುದು - ಇದು ವೈಯಕ್ತಿಕವಾಗಿ ವಿದ್ಯಾರ್ಥಿಗೂ ಸಮಾಜಕ್ಕೂ ಶಿಕ್ಷಣ ಒದಗಿಸ ಬೇಕಾದ ಸೇವೆ. ಮೊದಲನೆಯದಾಗಿ ಪ್ರತಿ ಯೊಬ್ಬ ಹುಡುಗನಲ್ಲೂ ಹೊರ ಜಗತ್ತಿನ ಬಗ್ಗೆ ಕುತೂಹಲ ಇರುತ್ತದೆ. ಅಲ್ಲಿಯ ದೃಶ್ಯ ಗಳನ್ನು ವಿದ್ಯಮಾನಗಳನ್ನೂ ಗಮನಿಸಿ, ಮನಸ್ಸು ವಿಷಯ ಸಂಗ್ರಹದಲ್ಲಿ ತಲ್ಲೀನ ಆಗಿರುತ್ತದೆ. ಈ ಸಹಜ ಪ್ರವೃತ್ತಿಗೆ ಪ್ರೋತ್ಸಾಹ ಕೊಡು ವುದರ ಮೂಲಕ ವಿದ್ಯಾಭ್ಯಾಸ ಆರಂಭ ವಾಗಬೇಕು. ಪ್ರತಿ ಹಂತದಲ್ಲೂ ತಾನು ಕಲಿತದ್ದನ್ನು ಪ್ರಯೋಗ ಮಾಡಿ ನೋಡುವ ವ್ಯವಸ್ಥೆ ಎಲ್ಲಿ ಇಲ್ಲವೋ ಅಲ್ಲಿ ಸಿಕ್ಕುವುದು ಕೇವಲ ಅವ್ಯವಹಾರಿಕವಾದ ಪುಸ್ತಕ ವಿದ್ಯೆ, ಕಲಿತದ್ದನ್ನು ಬದುಕುತ್ತ ಹೋಗುವುದೇ ಶ್ರೇಷ್ಠ ವಿದ್ಯಾಭ್ಯಾಸ. ವಿಷಯ ಸಂಗ್ರಹದ ಜೊತೆಗೆ ಒಂದಕ್ಕೆ ಒಂದನ್ನು ಹೋಲಿಸುವ, ವಿಷಯ ಗಳಿಗೆಲ್ಲ ಸಾಮಾನ್ಯವಾದ ಒಂದು ನಿಯಮ ಅಥವಾ ನಿಯಮಗಳನ್ನು ಕಂಡುಹಿಡಿಯುವ, ವಿದ್ಯಮಾನಗಳು, ಘಟನೆಗಳು ಇವುಗಳಲ್ಲಿ ಕಾರ್ಯಕಾರಣ ಸಂಬಂಧವನ್ನು ಹುಡುಕುವ ಕೆಲಸ ಬುದ್ಧಿಯದು. ವಿಜ್ಞಾನ ಮತ್ತು ತರ್ಕಗಳ ಅಧ್ಯಯನದಿಂದ ಸಂಗತಿಗಳನ್ನು ಬೇರ್ಪಡಿ ಸುವ, ವರ್ಗೀಕರಿಸುವ ಸಾಧಾರಣ ನಿಯಮ ಗಳನ್ನು ಕಂಡುಹಿಡಿಯುವ ಕೆಲಸವನ್ನು ವಿದ್ಯಾರ್ಥಿ ನಡೆಸುವುದು ಸಾಧ್ಯವಾಗಿ ಅವನ ಬುದ್ಧಿ ಹರಿತ ಆಗುತ್ತದೆ. ಇಂಥ ಬುದ್ಧಿ ಬೆಳೆದಂತೆ ಪ್ರತಿಯೊಂದು ಸಮಸ್ಯೆಯನ್ನು ವಸ್ತು ನಿಷ್ಠವಾಗಿ ನಿಷ್ಪಕ್ಷಪಾತವಾಗಿ ಎದುರಿಸುವ, ಬಿಡಿಸುವ ಕೆಲಸವನ್ನು ಸ್ವತಂತ್ರವಾಗಿ ಮಾಡಲು ವಿದ್ಯಾರ್ಥಿ ಸಮರ್ಥನಾಗಬೇಕು.

ಇಂಥ ಬುದ್ಧಿ ಬೆಳೆಯುತ್ತಿರುವ ಹಾಗೆಯೇ ಭಾವನೆಯ ಸಂಸ್ಕರಣವೂ ಜೊತೆ ಜೊತೆ ಯಲ್ಲೇ ನಡೆಯಬೇಕು. ನಮ್ಮಲ್ಲಿ ನಾನಾ ರೀತಿಯ ಭಾವನೆಗಳೂ ಪ್ರವೃತ್ತಿಗಳೂ ಇರುತ್ತವೆ. ಇವುಗಳಲ್ಲಿ ಕೆಲವು ಆತ್ಮರಕ್ಷಣೆಗೆ ಅಗತ್ಯವಾದ ಸ್ವಾರ್ಥಪರ ಭಾವನೆಗಳಾಗಿದ್ದರೆ ಇನ್ನು ಕೆಲವು ಹೊರಜಗತ್ತಿನೊಡನೆ ಬೆರೆತು ಒಂದಾಗಲು, ಲೀನವಾಗಲು ಬಯಸು ವಂಥವುಗಳು ಇರುತ್ತವೆ. ಇವೆಲ್ಲ ಹುಟ್ಟು ವುದು ಮನುಷ್ಯನಿಗೇ ವಿಶಿಷ್ಟವಾದ ಸ್ವಪ್ರಜ್ಞೆ ಅಥವಾ ತನ್ನತನದ ಅರಿವಿನಿಂದ, ಈ ಎರಡು, ಪರಸ್ಪರ ವಿರುದ್ಧ ಎನ್ನಿಸುವಂಥ ಪ್ರವೃತ್ತಿ ಗಳಲ್ಲಿ, ಅವುಗಳಿಂದ ಹುಟ್ಟುವ ಭಾವನೆ ಗಳಲ್ಲಿ ಹೊಂದಾಣಿಕೆ ತರುವುದು ಅತ್ಯಂತ ಕಷ್ಟಕರವಾದ, ಆದರೆ ಮನುಷ್ಯ ಜೀವನದ ಸಾರ್ಥಕತೆಗೆ ಅತ್ಯಂತ ಅವಶ್ಯವಾದ ಕೆಲಸ. ಪ್ರೀತಿ, ವಿಶ್ವಾಸ, ದಯೆ ಮುಂತಾದ ನಮಗೆ ಸಹಜವಾದ ಗುಣಗಳು ಒಟ್ಟು ಬದುಕಿಗೆ ಪ್ರಯೋಜನಕಾರಿಯಾಗುವ ಹಾಗೆ ಮಾಡುವ ಸಂಸ್ಕಾರದ ಕೆಲಸ ಇದು. ಇದನ್ನು ಪಾಠ ಹೇಳಿ ಕಲಿಸಲು ಆಗುವುದಿಲ್ಲ. ಅದಕ್ಕೆ ತಕ್ಕ ಸ್ವಾತಂತ್ರ್ಯದ, ಉದಾರ ಅಹಿಂಸಾಮಯ ಸಹಾನುಭೂತಿಯ ವಾತಾವರಣ ವಿದ್ಯಾ ಸಂಸ್ಥೆಗಳಲ್ಲಿ ಏರ್ಪಡಬೇಕು. ಅಲ್ಲಿ ನಡೆಯುವ ಪ್ರತಿಯೊಂದು ಘಟನೆಯೂ, ಪ್ರತಿಯೊಂದು ಮಾತೂ, ಪ್ರತಿಯೊಂದು ನಿಲುವೂ ಉತ್ತಮ ಮಾನವ ಗುಣಗಳಿಗೆ ಉದಾಹರಣೆಗಳಾಗ ಬೇಕು. ಈ ಬಗೆಯ ಮೇಲ್ಪಂಕ್ತಿಯನ್ನು ಹಾಕ ಬಲ್ಲ ಉತ್ತಮ ಮನುಷ್ಯರೂ ಆದ, ಉತ್ತಮ ಅಧ್ಯಾಪಕರನ್ನು ನಾವು ನಮ್ಮ ವಿದ್ಯಾಸಂಸ್ಥೆಗ ಳಲ್ಲಿ ಪಡೆಯಲು ಅಸಮರ್ಥರಾದರೆ, ಶಿಕ್ಷಣ ಅರ್ಥಹೀನ ಮಾತ್ರ ಇಲ್ಲ, ಈಗಿರುವಂತೆ ತುಂಬಾ ಅಪಾಯಕಾರಿಯೂ ಆಗುತ್ತದೆ.

ನಮಗೆ ಬೇಕಾಗಿರುವುದು ತನ್ನ ಸ್ವಾರ್ಥ ಪರ ಭಾವನೆಗಳನ್ನು ಮೀರಿ ಯೋಚಿಸಬಲ್ಲ ಸುಸಂಸ್ಕೃತ ಮನುಷ್ಯರು; ತನ್ನ ಹಿತವನ್ನು ಬಲಿಕೊಡದೆ ಸಮಷ್ಟಿಜೀವನದ ಅಭ್ಯುದಯ ಕ್ಕಾಗಿಯೂ ದುಡಿಯಬಲ್ಲವರು; ಸಾಹಿತ್ಯ ಕಲೆ ಸಂಗೀತ ಮುಂತಾದ ಸಂಸ್ಕೃತಿ ಸಾಧನೆ ಗಳಿಗೆ ಮುಕ್ತವಾಗಿರುವ ಹೃದಯಗಳು. ಜೀವ ನದ ಅನಂತ ಸಂಭಾವ್ಯತೆ, ಸಾಧ್ಯಗಳನ್ನು ಗುರುತಿಸಿ ಉದಾರಮತಿಗಳಾಗಿದ್ದು ತನ್ನದೇ ಸರಿ ತಾನು ಕಂಡದ್ದೇ ಸತ್ಯ ಎಂದು ಅಹಂಕಾರ ಮೂರ್ತಿಗಳಾಗದ, ಆದರೆ ತನ್ನ ಅನುಭವಕ್ಕೆ, ತೀರ್ಮಾನಕ್ಕೆ ವಿರುದ್ಧವಾದುದನ್ನು ಎಂದೂ ಒಪ್ಪದ ಧೀರ ಗಂಭೀರ ಸಹಿಷ್ಣು ವ್ಯಕ್ತಿಗಳು. ಯಾವ ಶಿಕ್ಷಣ ಕ್ರಮದಿಂದ ಇದು ಸಾಧಿಸು ವುದಿಲ್ಲವೋ ಇದನ್ನು ಸಾಧಿಸುವ ಪ್ರಯತ್ನವೂ ನಡೆಯುವುದಿಲ್ಲವೋ ಅದನ್ನು ಒಂದು ಶಿಕ್ಷಣ ಕ್ರಮ ಎನ್ನಲು ಸಾಧ್ಯವೇ ಇಲ್ಲ. ●

ಯುವಕನ ಧ್ಯೇಯ

ಟಿ.ಕೆ. ತುಕೋಳ

ಮಾಜಿ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ

ನಾನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾದ ೧೫-೨೦ ದಿವಸಗಳಲ್ಲಿ ಒಬ್ಬ ವಿದ್ಯಾರ್ಥಿ ನನ್ನನ್ನು ಕಾಣಲು ಬಂದ. ಅವನ ಹೆಸರನ್ನು ಕೇಳಿದೆ; ಅವನು ತನ್ನ ಹೆಸರನ್ನು ಹೇಳಿದ. ನಮ್ಮಿಬ್ಬರಲ್ಲಿ ಸಂಭಾಷಣೆ ನಡೆದದ್ದು ಹೀಗೆ :

ನಾನು - ನೀವು ಯಾವ ವರ್ಗದಲ್ಲಿ ಓದುತ್ತಿರುವಿರಿ ?

ವಿದ್ಯಾರ್ಥಿ - ಈ ಕಾಲೇಜಿನಲ್ಲಿ ಎರಡನೇ ವರ್ಷ ಮಾಡುತ್ತಿದ್ದೇನೆ.

ನಾನು - ಕಾಲೇಜು ಸೇರಿ ಎಷ್ಟು ವರ್ಷಗಳಾದವು ?

ವಿದ್ಯಾರ್ಥಿ - ಸುಮಾರು ನಾಲ್ಕು ವರ್ಷಗಳಾದವು ?

ನಾನು - ನಿಮ್ಮ ಧ್ಯೇಯವೇನು ?

ವಿದ್ಯಾರ್ಥಿ - ನಾನು ಎಂ.ಎಲ್.ಎ. ಆಗಬೇಕೆಂದಿದ್ದೇನೆ.

ನಾನು - ಹಾಗಾದರೆ ಚೆನ್ನಾಗಿ ಅಭ್ಯಾಸ ಮಾಡಿ ಬೇಗ ಪದವೀಧರರಾಗಿರಿ.

ವಿದ್ಯಾರ್ಥಿ - ಪದವೀಧರನಾಗುವುದು ಅವಶ್ಯವಿಲ್ಲ.

ನಾನು - ಪದವೀಧರರಾಗಿ ಯಾವುದಾದರೊಂದು ಉದ್ಯೋಗದಲ್ಲಿ ಸೇರಿ, ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳಿ. ಆಮೇಲೆ ಯೋಗ್ಯ ವೆನಿಸಿದರೆ ರಾಜಕಾರಣ ಸೇರಬಹುದು.

ವಿದ್ಯಾರ್ಥಿ - ನೀವು ಹೇಳುವುದು ಅವಶ್ಯವಿಲ್ಲ ಸರ್, ಮುಂದಿನ ಚುನಾವಣೆಯಲ್ಲಿ ನನಗೆ ತಿಕೀಟು ಸಿಕ್ಕುತ್ತದೆ. ನಾನು ಚುನಾವಣೆಗೆ ನಿಲ್ಲುತ್ತೇನೆ.

ಆ ವಿದ್ಯಾರ್ಥಿಯ ವಿಚಾರ ಸರಣಿ ತುಂಬಾ ಆತ್ಮವಿಶ್ವಾಸದಿಂದ ಕೂಡಿತ್ತು. ನನ್ನ ವಿಚಾರ ಅವನಿಗೆ ಒಪ್ಪಿಗೆಯಾಗಲಿಲ್ಲ.

ಅವನು ಹೊರಟು ಹೋದ. ಅವನು ಆಡಿದ ಮಾತುಗಳನ್ನು ನಾನು ಮೆಲಕು ಹಾಕಿದೆ. ವಿಧಾನ ಮಂಡಲದ ಅಥವಾ ಪರಿಷತ್ತಿನ ಸದಸ್ಯನಾಗುವುದು ನಿಜವಾಗಿಯೂ ಉದಾತ್ತ ಧ್ಯೇಯ.

ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಜನತೆಯ ಪ್ರತಿನಿಧಿಯಾಗಿ ಸೇವೆ ಸಲ್ಲಿಸುವುದು ಒಂದು ಭಾಗ್ಯ. ಸೇವೆ ತುಂಬಾ ಹೊಣೆಗಾರಿಕೆಯಿಂದ ಕೂಡಿದ್ದು ಜನತೆಯ ಕಷ್ಟಕಾರ್ಪಣ್ಯಗಳನ್ನು ನಿವಾರಿಸಲು ಅಧಿಕಾರ ಸ್ಥಾನ ಪಡೆಯುವುದು ಒಳ್ಳೆ ಆಕಾಂಕ್ಷೆ, ಮಹತ್ಕಾಂಕ್ಷೆ. ಎಲ್ಲರಿಗೂ ಸಾಧಿಸದಂತಹ ಕಾರ್ಯ. ಆದರೆ ಆ ಸ್ಥಾನವನ್ನು ಪಡೆದು ಕಾರ್ಯನಿರ್ವಹಿಸಲು ಅರ್ಹತೆ, ಅನುಭವ, ಕಾನೂನುಗಳ ಜ್ಞಾನ ಬೇಡವೆ ? ಜನತೆಯ ಶೈಕ್ಷಣಿಕ, ಆರ್ಥಿಕ, ದೈಹಿಕ, ಸಾಮಾಜಿಕ ಕುಂದು ಕೊರತೆಗಳನ್ನು ತಿಳಿಯಲು ವಿವಿಧ ವಿಷಯಗಳ ಜ್ಞಾನ ಬೇಕು, ಅವುಗಳಿಗೆ ಪರಿಹಾರ ಕಂಡುಹಿಡಿದು ವಿಧಾನ ಮಂಡಲದಲ್ಲಿ ಚರ್ಚಿಸಿ ಸರಕಾರದವರು ಯೋಗ್ಯ ಯೋಜನೆಗಳನ್ನು ಕೈಗೊಳ್ಳುವಂತೆ ಬಹುಮತ ದೊರಕಿಸುವುದು ಮಹಾತ್ಕಾರ್ಯ. ಅದಕ್ಕೆ ವೈಯಕ್ತಿಕ ಯೋಗ್ಯತೆ, ನೈತಿಕ ಬಲ ಮತ್ತು ಉಳಿದ ಸದಸ್ಯರ ಬೆಂಬಲ ಅವಶ್ಯ.

ಇಂಥ ಮಹತ್ಕಾರ್ಯ ಕೈಗೊಳ್ಳಲು ಒಳ್ಳೇ ಶಿಕ್ಷಣವನ್ನು ಪಡೆಯುವುದು ಅವಶ್ಯ, ಆ ವಿದ್ಯಾರ್ಥಿಯು ಆಕಾಂಕ್ಷೆಗಾಗಿ. ನನಗೆ ಸಮಾಧಾನವೆನಿಸಿದರೂ, ಹೊಣೆಗಾರಿಕೆಯ ತಾರತಮ್ಯವನ್ನರಿಯದೆ ಬರಿ ಭವ್ಯ ಕನಸು ಕಾಣುತ್ತಿರುವನಲ್ಲ ಎಂಬ ವ್ಯಥೆ ಇನ್ನೂ ನನ್ನನ್ನು ಕಾಡುತ್ತಿದೆ. ಅವನು ತನ್ನ ಶಿಕ್ಷಣಕ್ಕೆ ಶರಣುಹೊಡಿದಿದ್ದಾನೆಂದು ಇತ್ತೀಚೆಗೆ ತಿಳಿದಿದೆ.

ವಿದ್ಯಾರ್ಥಿ ದೆಶೆ ಜೀವನದಲ್ಲಿ ಅತಿ ಮಹತ್ವಾಕಾಲ. ಅದು ಬರುವುದು ಒಂದು ಸಲ ಮಾತ್ರ. ಯೌವನವು ಅಷ್ಟೇ. ಒಮ್ಮೆ ಹೋದದ್ದು ಮತ್ತೆ ಬಾರದು. ಯೌವನದಲ್ಲಿಯೇ ಎಲ್ಲರೂ ಕನಸು ಕಾಣುವುದು. ಮನುಷ್ಯನು ಜೀವಿಸುವುದು ತನ್ನ ಆಶೆಯ ಬಲದಿಂದ. ಕನಸುಗಳು ನನಸಾಗಬೇಕಾದರೆ, ಆಶೆಗಳು ಸಫಲವಾಗಬೇಕಾದರೆ, ಅವಶ್ಯವಾದ ಜ್ಞಾನ, ಚಾತುರ್ಯ, ದುಡಿಮೆ ಶ್ರಮ, ಸಹಿಷ್ಣುತೆ ಮತ್ತು ಆತ್ಮವಿಶ್ವಾಸ ಇವುಗಳನ್ನು ಯೋಗ್ಯ ವೇಳೆಯಲ್ಲಿ ಗಳಿಸಬೇಕು.

ಜೀವನದ ಮಹತ್ವದ ಕಾಲವೆಂದರೆ ಬಾಲ್ಯದಿಂದ ಸುಮಾರು ೨೫-೩೦ ವರ್ಷಗಳವರೆಗೆ. ಬಾಲ್ಯದಲ್ಲಿ ಯೋಗ್ಯ ಶಿಕ್ಷಣ, ಶಾಲಾ ಶಿಕ್ಷಣ ಬೇಕು. ಇತ್ತೀಚೆಗೆ ಒಬ್ಬ ಮಾನಸಿಕ ವಿಜ್ಞಾನಿಯು ಮಕ್ಕಳ ಪ್ರವೃತ್ತಿ ಒಲವುಗಳು ಮೊದಲಿನ ಆರು ವರ್ಷಗಳಲ್ಲಿಯೇ ರೂಪುಗೊಳ್ಳುತ್ತವೆಂದು ಹೇಳಿದ್ದಾನೆ. ಆರಂಭದಲ್ಲಿ ಹೆಚ್ಚಾಗಿ ಸಂಪಾದಿಸುವುದು ಅಕ್ಷರ ಜ್ಞಾನ, ಓದು ಬರಹ; ಕೆಲಮಟ್ಟಿಗೆ ವಿಷಯಜ್ಞಾನ; ಕಥಾರೂಪದಿಂದ ಭೋದಿಸಿದ ಪಾಠಗಳು ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ.

ಕೆಲವು ವಿದ್ಯಾರ್ಥಿಗಳು ಮಾತ್ರ ತಮ್ಮ ಪಾಠ ಪ್ರವಚನಗಳನ್ನು ಬುದ್ಧಿಪೂರ್ವಕವಾಗಿ ಓದುವರು. ಇನ್ನು ಕೆಲವರು ಕೇವಲ ಯಾಂತ್ರಿಕ ರೀತಿಯಿಂದ ಗ್ರಹಿಸುತ್ತಾರೆ. ಮೂರನೇ

ವರ್ಗದವರು ಯಾವ ಆಸಕ್ತಿ ಇಲ್ಲದೆ ಅಭ್ಯಾಸ ಮಾಡುತ್ತಾರೆ.

ಮೊದಲನೆಯ ವರ್ಗದವರ ಬುದ್ಧಿ ಮನಸ್ಸುಗಳು ಅವ್ಯಾಹತವಾಗಿ ಬೆಳೆಯುತ್ತವೆ. ಎರಡನೇ ವರ್ಗದವರ ಶಿಕ್ಷಣ ರೀತಿಯಲ್ಲಿ ಪರಿವರ್ತನೆಯಾದರೆ, ಬುದ್ಧಿಮನಸ್ಸುಗಳು ಹೊಸ ಚೇತನ ಪಡೆಯಬಹುದು. ಮೂರನೆಯ ವರ್ಗದವರು ಶಿಕ್ಷಣದ ಲಾಭ ಪಡೆಯದೇ ದುರ್ದೈವಿ ಜೀವನ ನಡೆಸಬೇಕಾಗಿ ಬರಬಹುದು.

ಬುದ್ಧಿ, ಮನಸ್ಸು, ಹೃದಯ ಮತ್ತು ಶರೀರ ಇವುಗಳ ಸಮರಸತೆಯ ಪ್ರಗತಿಯೇ ಶಿಕ್ಷಣದ ಧ್ಯೇಯ. ಈಗಿನ ಶಿಕ್ಷಣವು ಈ ಬಗೆಯ ಸಮರಸತೆಯನ್ನುಂಟು ಮಾಡಲು ಶಕ್ತವಾಗಿಲ್ಲವೆಂದು ವ್ಯಥೆಯಿಂದ ಒಪ್ಪಲೇಬೇಕು. ಯುವಕರು ಮುಖ್ಯತಃ ಈಗಿನ ಪುಸ್ತಕೀಯ ಶಿಕ್ಷಣದಿಂದ ಏನೂ ಪ್ರಯೋಜನವಿಲ್ಲವೆಂದು, ನಿರುದ್ಯೋಗ ಹೆಚ್ಚಾಗುತ್ತಿದೆಯೆಂದೂ ದೂರುತ್ತಿದ್ದಾರೆ. ತಾಂತ್ರಿಕ, ವೈದ್ಯಕೀಯ ಮತ್ತು ವೈಜ್ಞಾನಿಕ ಶಿಕ್ಷಣ ಪಡೆಯುವವರು ವಿಶಿಷ್ಟ ಉದ್ಯೋಗವನ್ನೇ ತಮ್ಮ ಗುರಿಯಾಗಿಟ್ಟುಕೊಂಡಿರುತ್ತಾರೆ. ಸರ್ಕಾರದವರು ರಾಜ್ಯದಲ್ಲಿ ಎಲ್ಲರಿಗೂ ನೌಕರಿ ಕೊಡುವುದು ಸಾಧ್ಯವಿಲ್ಲ. ಕೆಲವರಾದರೂ ತಮ್ಮ ತಾರ್ಕಿಕ ಶಕ್ತಿ, ಬುದ್ಧಿ ಮತ್ತು ಚಾತುರ್ಯದಿಂದ ಹೊಸ ಉದ್ಯೋಗಗಳನ್ನು ಸ್ಥಾಪಿಸಬೇಕು, ಮನೆತನದ ಉದ್ಯೋಗಗಳನ್ನು ಬೆಳೆಸಿಕೊಂಡು ಬರಬೇಕು. ಹೊಸ ಕೈಗಾರಿಕೆಗಳನ್ನು ಆರಂಭಿಸಬೇಕು. ಸ್ವಾವಲಂಬನೆ, ಪರಿಶ್ರಮ ಮತ್ತು ಉದ್ಯೋಗ ಶೀಲತೆಯಿಂದ ಕಾರ್ಯಪ್ರವೃತ್ತರಾದವರಿಗೆ ವಿಶೇಷ ತೊಂದರೆಯಾಗಬಾರದೆಂದು ನನ್ನ ಭಾವನೆ.

ಔದ್ಯೋಗಿಕ ಶಿಕ್ಷಣವು ಒಂದು ಭಾಗ ಮಾತ್ರ. ದೇಶದ ಪ್ರಗತಿಗೆ, ಉದ್ಧಾರಕ್ಕೆ, ಆಡಳಿತಗಾರರು, ತತ್ವಜ್ಞಾನಿಗಳು, ಶಿಕ್ಷಕರು, ವಕೀಲರು, ನ್ಯಾಯಾಧೀಶರು, ಲೇಖಕರು, ಇತ್ಯಾದಿ. ಬೌದ್ಧಿಕ ಜೀವಿಗಳು ಬೇಕು. ಬುದ್ಧಿವಂತರು, ಉದಾರ ಹೃದಯಿಗಳು, ಸಮಾಜ ಸೇವಕರು, ತ್ಯಾಗಿಗಳು - ಎಲ್ಲರಿಂದ ಕೂಡಿದ್ದರೆ ಮಾತ್ರ ಸಾಮಾಜಿಕ ಸಂಸ್ಕೃತಿಯನ್ನು ಕಾಯ್ದುಕೊಂಡು ಹೋಗಲು, ಜೀವನದ ಮೌಲ್ಯಗಳನ್ನು ಎತ್ತಿ ಹಿಡಿ.ಲು, ಮತ್ತು ನೈತಿಕ, ಪಾರಮಾರ್ಥಿಕ ಬೆಳಕಿನಿಂದ ಜನತೆಯ ಜೀವನವನ್ನು ಬೆಳಗಲು ಸಾಧ್ಯವಾಗುತ್ತದೆ.

"ನಾನು ಪ್ರಸಿದ್ಧ ಪುರುಷನಾಗಬೇಕು, ಪಂಡಿತನಾಗಬೇಕು, ಕೀರ್ತಿಪಡೆಯಬೇಕು, ಶ್ರೀಮಂತನಾಗಬೇಕು, ಶ್ರೇಷ್ಠ ಲೇಖಕನಾಗಬೇಕು. ನಾಮಾಂಕಿತ ವೈದ್ಯನಾಗಬೇಕ"..... ಇತ್ಯಾದಿ ಆಕಾಂಕ್ಷೆಗಳನ್ನು ಯುವಕರು ಹೊಂದಿರುವುದು ಸ್ವಾಭಾವಿಕ. ಉತ್ತಮ ಆದರ್ಶಗಳನ್ನು ಸಾಧಿಸಲು ಜೀವನದ ಮಟ್ಟ ಉಚ್ಛವಾಗಿರಬೇಕು. ವ್ಯವಹಾರದಲ್ಲಿ ದುಡ್ಡಿದ್ದವನೇ ದೊಡ್ಡಪ್ಪನೆನಿಸಿಕೊಂಡರೂ ಅಂಥವನು ನೀತಿವಂತನಾಗಿರದಿದ್ದರೆ ನಿಜವಾದ ಗೌರವ ದೊರೆಯದು. ಜೀವನದಲ್ಲಿ ಎಲ್ಲರೂ ಒಂದು ಕಾಯಕ ಮಾಡಲೇಬೇಕು. ಆದರೆ ವ್ಯಕ್ತಿಯ ಮಹತ್ವ ಅವನು ತನ್ನ ಕಾಯಕ ಪೂರೈಸುವ ರೀತಿ ಗುರಿಗಳನ್ನೇ ಅವಲಂಬಿಸುತ್ತದೆ.

ಕೇವಲ ಪ್ರಸಿದ್ಧನಾಗಬೇಕೆಂಬ ಬಯಕೆ ಇದ್ದರೆ ಸಾಲದು. ಒಳ್ಳೆಯತನಕ್ಕಾಗಿ ಪ್ರಸಿದ್ಧರಾದವರು ಸ್ವಲ್ಪ ಜನರು, ಕೆಟ್ಟದ್ದಕ್ಕಾಗಿ ಕುಪ್ರಸಿದ್ಧರಾದವರು ಕೆಲವರು. ಹೆಸರುಗಳಿಸಬೇಕೆಂದು ಬಿಸಿಲುಕುದುರೆಯ ಬೆನ್ನು ಹತ್ತದೆ ತಮ್ಮ ಕರ್ತವ್ಯ, ಸೇವೆ, ತ್ಯಾಗ, ಸಜ್ಜನತೆಯ ದುಡಿಮೆ ಇವುಗಳಲ್ಲಿ ನಿರತರಾದವರೇ ಪೂಜ್ಯತೆ ಗಳಿಸುವರು. ಉತ್ತಮರಾಗಬೇಕಾದರೆ ಉಚ್ಚ ಭಾವನೆಗಳು, ಶುದ್ಧ ಮನಸ್ಸು, ಸದಾಚಾರವುಳ್ಳವರಾಗಿರಬೇಕು. ಮಹಾತ್ಮರಾಗಬೇಕೆನ್ನುವವರು ಮನಸ್ಸಿನಲ್ಲಿ, ವಿಚಾರದಲ್ಲಿ, ಕಾರ್ಯದಲ್ಲಿ ಏಕರೂಪತೆ ಗಳಿಸುವರು. ಮಹತ್ವ ಗಳಿಸಲು ಸಾಧಿಸಬೇಕು. ಕ್ರೋಧ, ಮೋಸ, ಮಾಯ, ಮದ, ಮತ್ಸರ, ಲೋಭ, ಇವು ಮನಸ್ಸಿನ ಶತ್ರುಗಳು. ಸತ್ಸಂಗದಿಂದ ಶ್ರೇಷ್ಠ ಪುರುಷರು ರಚಿಸಿದ ಗ್ರಂಥಗಳ ಅಭ್ಯಾಸದಿಂದ, ಆತ್ಮ ನಿರೀಕ್ಷಣೆಯಿಂದ, ವಿಚಾರ -ಆಚಾರಗಳ ಮಟ್ಟವನ್ನು ಎತ್ತರಿಸುವುದು ಸಾಧ್ಯ. ವಿಚಾರಾತ್ಮಕ ಕಾವ್ಯ, ಗದ್ಯ, ಕಥೆ, ಸಾಹಿತ್ಯಗಳ ಪರಿಚಯ ಮಾಡಿಕೊಳ್ಳಬೇಕು. ಕವಿಗಳ, ಲೇಖಕರ ಸುವಿಚಾರಗಳನ್ನು ಮೆಲುಕು ಹಾಕಿ ನಮ್ಮಲ್ಲಿಲ್ಲದ್ದ ಕುಹಕ ಪ್ರವೃತ್ತಿಗಳನ್ನು ಹೊರದೂಡಬೇಕು.

ಹಿಂದೆ ಆಗಿಹೋದ ಮಹಾತ್ಮರ, ತ್ಯಾಗಿಗಳ, ವೀರರ, ಋಷಿಗಳ ಜೀವನ ಚರಿತ್ರೆಗಳನ್ನು ಓದಬೇಕು. ಅವರು ಆಡಿದ ಮಾತುಗಳು, ಜೀವಿಸಿದ ರೀತಿ, ನಡೆದ ದಾರಿ ನಮ್ಮದಾಗಬೇಕು. ಮನಸ್ಸು ಸಂಸ್ಕೃತವಾಗಲು ಅವರ ವಿಚಾರಗಳನ್ನು ನೆನೆಯಬೇಕು. ಆಗ ಮನಸ್ಸು ಅರಳಿ, ವಿಕಾಸವಾಗಿ ಹೊಸ ಸ್ಫೂರ್ತಿ ಚೈತನ್ಯಕ್ಕೆ ನಾಂದಿಯಾಗುತ್ತದೆ.

ಇಂಥ ಮನಸ್ಸು ವಿಚಾರಗಳಿಂದ ಪುನೀತವಾದ ವ್ಯಕ್ತಿ ಯಾವ ಕ್ಷೇತ್ರದಲ್ಲಿಯೇ ದುಡಿಯಲಿ, ಯಾವ ಕಾರ್ಯವನ್ನೇ ಕೈಗೊಳ್ಳಲಿ, ಯಾವ ಹೊಣೆಯನ್ನೇ ಹೊರಲಿ ಅವನ ಜೀವನ ಪಥವು ಯಾವಾಗಲೂ ಸುರಕ್ಷಿತ. ಅವನ ಆದರ್ಶಗಳು ಅಚಲ. ಅವನ ಸೇವೆಯು ಸಾರ್ಥಕ. ಈ ಸಂದರ್ಭದಲ್ಲಿ ಅರವಿಂದರು ವಿದ್ಯಾರ್ಥಿಗಳಿಗೆ ನೀಡಿದ ಸಂದೇಶ ನೆನಪಿಗೆ ಬರುತ್ತದೆ :

"ಮೊದಲು ಭಾರತೀಯರಾಗಿರಿ. ನಿಮ್ಮ ಹಿರಿಯರ ಪಿತ್ರಾರ್ಜಿತ ಸ್ಮೊತ್ತನ್ನು ಮರಳಿ ಗಳಿಸಿರಿ. ಆರ್ಯರ ವಿಚಾರಧಾರೆ, ಶೀಲ, ಚಾರಿತ್ರ, ಜೀವನ, ಮನ ಪಡೆಯಿರಿ. ವೇದಾಂತ, ಗೀತಾ, ಯೋಗಗಳನ್ನು ಮತ್ತೆ ಸಂಪಾದಿಸಿರಿ. ಅವನ್ನೆಲ್ಲಾ ಕೇವಲ ನಿಮ್ಮ ಬುದ್ಧಿಯಲ್ಲಿ, ಭಾವನೆಯಲ್ಲಿ ಅಲ್ಲದೆ, ಜೀವನದಲ್ಲಿಯೂ ನಿಮ್ಮವನ್ನಾಗಿ ಮಾಡಿಕೊಳ್ಳಿ....."


ನಮ್ಮ ವಿಶ್ವವಿದ್ಯಾಲಯಗಳ ಆದರ್ಶ

ವಿಶ್ವವಿದ್ಯಾನಿಲಯಗಳು ದೇಶದ ಪುರೋಗಮನದ ಮೋಟಾರು ಕಾರಿನ ಮುಂದಿನ ದೀಪಗಳಿದ್ದ ಹಾಗೆ. ಏಕೆಂದರೆ ಆ ರೀತಿಯಲ್ಲಿ ಮುಂದನ್ನು ಬೆಳಗುತ್ತಾ ಹೋಗದಿದ್ದರೆ ನಾವು ಹೋಗುವ ಕಾರು ಎಲ್ಲಿಯೋ ಮಗುಚಿಕೊಳ್ಳಬಹುದು, ಎಲ್ಲಿಯೊ ಕಲ್ಲಿಗೆ ಢಿಕ್ಕಿ ಹೊಡೆಯಬಹುದು, ಏನು ಬೇಕಾದರೂ ಆಗಬಹುದು. ಅದರಿಂದ ವಿದ್ಯೆಯೆಂಬ ದೀಪವನ್ನು ಎಲ್ಲರ ಹೃದಯಗಳಲ್ಲೂ ಹೊತ್ತಿಸಬೇಕು. ಈ ತಿಳುವಳಿಕೆಯನ್ನು ಎಲ್ಲರಿಗೂ ತಂದು ಕೊಡಬೇಕು ಎನ್ನುವುದು ಉದ್ದೇಶ. ಎಂದರೆ ಈ ವಿಶ್ವವಿದ್ಯೆ ಎಂದು ನಾವು ಯಾವುದನ್ನು ಕರೆಯುತ್ತೇವೆಯೊ - Education and culture that universities can give - ಅದು ಜನಸಾಮಾನ್ಯರಿಗೆಲ್ಲಾ ಬೆಳಕಾಗಬೇಕು. ಈ ವಿಶ್ವವಿದ್ಯೆಯಿಂದ ಜನತೆಯ ವಿಶ್ವಪ್ರಜ್ಞೆ ಮೂಡಬೇಕು... ಜಗತ್ತೆಲ್ಲಾ ಒಂದಾಗುತ್ತಿರುವ ಈ ಸಮಯದಲ್ಲಿ, ಯುದ್ಧವನ್ನು ಯಾವ ದೇಶವಾದರೂ ಬಯಸಿದರೆ ಎಲ್ಲ ದೇಶಗಳೂ ಸರ್ವನಾಶವಾಗುವ ಈ ಸಮಯದಲ್ಲಿ, ಈ ವಿಶ್ವವಿದ್ಯೆ ಅದರಿಂದ ಉಂಟಾಗುವ ವಿಶ್ವಪ್ರಜ್ಞೆ, ಅದರಿಂದ ಉಂಟಾಗುವ ವಿಶ್ವಮೈತ್ರಿ - ಇದು ಎಲ್ಲದಕ್ಕಿಂತಲೂ ಅತ್ಯಂತ ಅವಶ್ಯಕವಾಗಿದೆ. ಎಲ್ಲ ಶಕ್ತಿಗಳಿಗಿಂತಲೂ ಅತ್ಯಂತ ಅವಶ್ಯಕವಾಗಿರುವ ಶಕ್ತಿ. ನಮ್ಮ ಪ್ರಪಂಚವನ್ನು ಬದುಕಿಸುವ ಶಕ್ತಿ ವಿಶ್ವಮೈತ್ರಿ. ಈ ವಿಶ್ವವಿದ್ಯೆಯಿಂದ ವಿಶ್ವಪ್ರಜ್ಞೆ, ಅದರಿಂದ ಈ ವಿಶ್ವಮೈತ್ರಿ. ಅಂಥ **ವಿಶ್ವಮೈತ್ರಿಯನ್ನು ಪಡೆದ ಮಾನವ ವಿಶ್ವಮಾನವ.** ಇಂಥ ವಿಶ್ವಮಾನವನನ್ನು ಸೃಷ್ಟಿಸುವ ನಿಲಯಗಳೇ ವಿಶ್ವವಿದ್ಯಾ ನಿಲಯಗಳಾಗಬೇಕು. ಇದು ನಮ್ಮ ಆದರ್ಶ; ನಮ್ಮ ಗುರಿ. ಆದರೆ ನಾವು ಎಷ್ಟೇ ಶೀಘ್ರವಾಗಿ ಈ ಆದರ್ಶಗಳನ್ನು ಮುಟ್ಟಬೇಕು, ಈ ಗುರಿಯನ್ನು ಸಾಧಿಸಬೇಕು ಎಂದು ಬಯಸಿದರೂ, ವಾಸ್ತವದಲ್ಲಿ ಇದನ್ನು ನಿಧಾನವಾಗಿ ಕಷ್ಟಪಟ್ಟು ವರ್ಷವರ್ಷಗಳೂ ಬಿಡದೆ, ನಿರಾಶರಾಗದೆ, ಕೆಲಸ ಮಾಡಿ ಕಟ್ಟಬೇಕಾಗಿದೆ. ವಿಶ್ವವಿದ್ಯೆಗೆ ಆಗರ ವಾಗಬೇಕಾಗಿರುವ ವಿಶ್ವವಿದ್ಯಾನಿಲಯಗಳು ಯಾವಾಗ ಪ್ರಾರಂಭವಾಗುತ್ತವೆ ಎಂದರೆ ವಿಶ್ವಪ್ರೇಮದ ಆದರ್ಶದಿಂದ ಪ್ರೇರಣೆಗೊಂಡು ಎಲ್ಲರೂ ಅದನ್ನು ಬಯಸುವುದಾದರೆ, ಆ ಬಯಕೆಯಿಂದಲೆ ಅದು ಹತ್ತಿರ ಹತ್ತಿರವಾಗಿ ಬರುತ್ತದೆ. ಆದ್ದರಿಂದ ಜನತೆ ಈ ವಿಶ್ವವಿದ್ಯೆ, ಈ ವಿಶ್ವಪ್ರಜ್ಞೆ, ಈ ವಿಶ್ವಮೈತ್ರಿಗಳಿಂದ ಕೂಡಿ ವಿಶ್ವಮಾನವರಾಗುವಂತೆ ನಮ್ಮ ವಿಶ್ವವಿದ್ಯಾನಿಲಯಗಳು ವ್ಯವಹರಿಸಬೇಕು.

ಕುವೆಂಪು

ಷಷ್ಟಿ ನಮನ (ವಿಶ್ವ ಮಾನವ)

ಕನ್ನಡ ವಿಭಾಗ



ಸಂಪಾದಕ

ಕೆ. ಸಿ. ಶಿವಾರೆಡ್ಡಿ

ನುಡಿದೆಡೆ ಮುತ್ತಿನ ಹಾರದಂತಿರಬೇಕು.
ನುಡಿದೆಡೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದೆಡೆ ಸ್ಫಟಿಕದ ಸಲಾಖೆಯಂತಿರಬೇಕು.
ನುಡಿದೆಡೆ ಲಿಂಗಮೆಚ್ಚಿ ಅಹುದಹುದೆನಬೇಕು.
ನುಡಿಯೊಳಗಾಗಿ ನಡೆಯದಿದ್ದಡೆ,
ಕೂಡಲ ಸಂಗಮ ದೇವನೆಂತೊಲಿವನಯ್ಯಾ ?

ಬಸವಣ್ಣ


ವಿಷಯಸೂಚಿ

ಕುವೆಂಪು ನಮನ	.....	೧೩೦
ನಿಸರ್ಗದ ಮಡಿಲಲ್ಲಿ ಹತ್ತು ದಿನ	.....	೧೩೧
ಹುಡುಕಿಕೊಂಡು ಬಂದ ಗೆಳೆಯ	.....	೧೩೨
ಪಿತೃ ಸ್ಮೃತಿ	.....	೧೩೪
ದಾಂಪತ್ಯ ಯೋಗ	.....	೧೩೫
ಕಣ್ಮರೆಯಾದ ಕುವೆಂಪು	.....	೧೩೬
ನನ್ನ ಪ್ರೀತಿಯ ಮೇಷ್ಟ್ರು	.....	೧೩೮
ನಾಟಕ-ಕಮ್ಮಟ-ಸವಿನೆನಪು	.....	೧೩೯
ಬೆಳ್ಳಿ ನೆನಪು	.....	೧೩೯
ಮೂಕ ವಧು	.....	೧೪೦
ಆಸೆ	.....	೧೪೧
ನಿಗೂಢ ಮಾನವರು	.....	೧೪೨
ಮಹಿಳೆಯರಲ್ಲಿ ವರ್ಣಭೇದ	.....	೧೪೩
ಕಾಮಧೇನು	.....	೧೪೩
ನಾನು ಕಂಡ 'ಕನ್ನಡ ಪುಸ್ತಕ ಮೇಳ - ೧೯೯೪'	.....	೧೪೪
ಚಲಿಸದ ಮೋಡಗಳು	.....	೧೪೫
ನಾನು ಕಂಡ ಕನ್ನಡ ಸಂಘ	.....	೧೪೬
ಕ್ರೈಸ್ಟ್ ಕಾಲೇಜಿನಲ್ಲಿ ನಾನು ಕಳೆದ ಆ ದಿನಗಳು	.....	೧೪೮
ಪರಂಪರೆಯ ಸಮರ್ಥ ಪ್ರತಿನಿಧಿ 'ಚಿನ್ನದ ಗೆರೆ'	.....	೧೫೦
ಕನ್ನಡ ಸಂಘದ ೧೦೦ನೇ ಕುಸುಮ ಬಿಡುಗಡೆ ಇಂದು	.....	೧೫೨
ಇತಿಹಾಸದಲ್ಲಿ ೧೨೯ರ ವಿಶೇಷ	.....	೧೫೩
ಕ್ರೈಸ್ಟ್ ಕಾಲೇಜಿನಲ್ಲೊಬ್ಬ 'ಸಾಹಿತ್ಯ ಪರಿಚಾರಕ'	.....	೧೫೪
ನಾಟಕ ಅಭಿರುಚಿ ಕೇಂದ್ರದಲ್ಲಿ ನನ್ನ ಅನುಭವಗಳು	.....	೧೫೬
ಹಿರಿಯರ ಹರಕೆ	.....	೧೫೭
ಅನಂತಮೂರ್ತಿ ಅವರಿಗೆ ಜ್ಞಾನಪೀಠ ಪ್ರಶಸ್ತಿ	.....	೧೫೮
ಇತಿಹಾಸ ನಿರ್ಮಿಸಿದ ಸಮಾರಂಭ	.....	೧೫೯
ಪುಸ್ತಕ ಪ್ರೀತಿಯ ಪ್ರವಾಸ	.....	೧೬೦
ಹಚ್ಚಿದೆವು ಕನ್ನಡದ ನೂರು ದೀಪ	.....	೧೬೨



ಕುವೆಂಪು ನಮನ

ವೈ. ಎಸ್. ಶಿವಪ್ರಸಾದ್
ಕನ್ನಡ ವಿಭಾಗ



ಉದಯರವಿಯ ಹೃದಯ ಕವಿ
ಹಾಲ್ಜೇನಿನ ಮಧುರ ಕವಿ
ನಿನ್ನ ನುಡಿಯು ಕವಿಗೆ ಸವಿ
ಕನ್ನಡಿಗರ ಕಣ್ಮಣಿ

ನಿನ್ನ ಉಕ್ತಿ ಜನಕೆ ಶಕ್ತಿ
ಅಖಿಲ ಜೀವ ರಾಶಿ ಮುಕ್ತಿ
ಭಾರತಾಂಬೆ ಪಡೆದ ತೃಪ್ತಿ
ಆಯಿತೆಮಗೆ ಜ್ಞಾನ ದೀಪ್ತಿ

ನೀನು ಕಡೆದ ಕಾವ್ಯವು
ಹರಡಿದೆ ಭೂಮ್ಯಾಕಾಶವು
ಪಡೆದೆ ನೀನು ನಿತ್ಯವು
ಪದವಿ ಬಿರುದು ಪ್ರಶಸ್ತಿಯು

ಪ್ರಕೃತಿ ಮಾತೆ ನಿನಗೆ ಸವಿಯು
ಅವಳಿ ಅನಂತ ಸತ್ಯವು
ನಿನಗೆ ಮನೆಯ ಪ್ರಕೃತಿಯು
ನೀನೆ ಜಗಜ್ಯೋತಿಯು

ಗಿಡ ಮರಗಳ ರಾಶಿಯಲ್ಲಿ
ಕೊಂಬೆ ಕೊಂಬೆ ಹೂವಿನಲ್ಲಿ
ಸಹ್ಯಾದ್ರಿಯ ಹಾದಿಯಲ್ಲಿ
ನಿನ್ನ ಹೆಸರು ಹರಿಯಲಿ

ಸೂರ್ಯ ಚಂದ್ರರಿರುವವರೆಗೆ
ತುಂಗೆ ಗಂಗೆ ಹರಿಯುವರೆಗೆ
ಕವಿಯೆ ನೀನು ಉಳಿಯುವೆ
ಉಳಿದು ಅಮರನಾಗುವೆ

ನಿಸರ್ಗದ ಮಡಿಲಲ್ಲಿ ಹತ್ತು ದಿನ

ಮೋಹನ್ ಕುಮಾರ್, ಯು.ಎಮ್
ದ್ವಿತೀಯ ಪದವಿ

ಪ್ರತಿ ವರ್ಷವೂ "ರಾಷ್ಟ್ರೀಯ ಸೇವಾ ಯೋಜನೆಯ" ವಿದ್ಯಾರ್ಥಿಗಳು ಸಮಾಜ ಸೇವೆಗಾಗಿ ಹತ್ತು ದಿನಗಳ ಕಾಲ ಯಾವು ದಾದರೊಂದು ಹಿಂದುಳಿದ ಹಳ್ಳಿಯಲ್ಲಿ ವಿಶೇಷ ಶಿಬಿರ ಹೂಡುವುದು ಸಾಮಾನ್ಯದ ಸಂಗತಿ ಯಾದರೂ ಈ ಬಾರಿಯ ಶಿಬಿರ ನನಗೆ ಪ್ರಥಮ ಶಿಬಿರ. ಆದ್ದರಿಂದ ನನಗೆ ಈ ಶಿಬಿರದಲ್ಲಾದ ಅನುಭವಗಳನ್ನು ನಿಮ್ಮೆಲ್ಲ ರೊಂದಿಗೆ ಹಂಚಿಕೊಳ್ಳ ಬಯಸುತ್ತೇನೆ.

ಸೈಯದ್ ಅಜೀಜ್ ನೇತೃತ್ವದ ತಂಡ ಈ ಬಾರಿಯ ವಿಶೇಷ ಶಿಬಿರಕ್ಕೆ ಆರಿಸಿದ ಸ್ಥಳ ಆನೇಕಲ್ ತಾಲ್ಲೂಕಿನ ಚೂಡಹಳ್ಳಿ. ಪ್ರಥಮದಲ್ಲಿ ಈ ಊರಿನ ಬಗ್ಗೆ ಒಂದೆರಡು ಮಾತು ತಿಳಿಯಬಯಸುತ್ತೇನೆ. ಸುತ್ತಲೂ ಬೆಟ್ಟ ಗುಡ್ಡಗಳಿಂದ, ಮರಗಿಡಗಳಿಂದ, ಹಚ್ಚ ಹಸುರಿನಿಂದ ಕೂಡಿದ, ನೋಡುವವರ ಕಣ್ಣಿಗೆ ತಂಪನ್ನು ನೀಡುವ ಸುಂದರ ಹಳ್ಳಿ. ಆದರೆ ಹೆಚ್ಚಿನ ನೀರಿನ ಸೌಲಭ್ಯವಿಲ್ಲದೆ ಮಳೆಯೇ ಇವರ ಬೆಳೆಗೆ ಆಧಾರ. ರಾಗಿಯೇ ಇವರ ಮುಖ್ಯ ಬೆಳೆ.

ದಿನಾಂಕ ೨೬ ಡಿಸೆಂಬರ್ ೯೪ ರಂದು ಸುಮಾರು ೧೦ ಗಂಟೆ ೩೦ ನಿಮಿಷಕ್ಕೆ ಆ ಹಳ್ಳಿಯನ್ನು ತಲುಪಿದೆವು. ಗೂಡಿನಿಂದ ಹೊರಕ್ಕೆ ಬಂದ ಹಕ್ಕಿಗಳಂತೆ ಸಂತೋಷದಲ್ಲಿ ತೇಲುತ್ತಿದ್ದ ನಮ್ಮನ್ನು ಹಿಂದಿನ ದಿನವೇ ತೆರಳಿದ್ದ ಕೆಲವು ಸ್ನೇಹಿತರು ಸ್ವಾಗತಿಸಿದರು. ಊರಿನ ಹೊರ ಭಾಗದಲ್ಲಿದ್ದ ಸರ್ಕಾರಿ ಶಾಲೆ ಮತ್ತು ದೇವರ ಗುಡಿ ನಮ್ಮ ವಾಸಸ್ಥಳವಾಗಿತ್ತು. ಅಂದೇ ಮಧ್ಯಾಹ್ನ ನಮ್ಮ ಕಾಲೇಜಿನ ಆರ್ಥಿಕ ವ್ಯವಸ್ಥಾಪಕರಾದ ರೆವೆರೆಂಡ್ ಫಾದರ್ ಅಬ್ರಹಾಂ ವೆಟ್ಟಿಯಾಂಕಲ್, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಶ್ರೀ ಸುಂದರ್ ರಾಜನ್ ಹಾಗೂ ತಮಿಳು ಉಪಾಧ್ಯಾಯರಾದ ಶ್ರೀ ಕೃಷ್ಣಸ್ವಾಮಿಯವರ ಉಪಸ್ಥಿತಿಯಲ್ಲಿ ನಮ್ಮ ಶಿಬಿರದ ಉದ್ಘಾಟನೆಯಾಯಿತು.

ನಮ್ಮ ಶಿಬಿರದ ನಿಜವಾದ ಕಾರ್ಯ ಕ್ರಮಗಳು ಪ್ರಾರಂಭವಾದದ್ದು ಮೂರನೆಯ ದಿನದಿಂದ. ನಮ್ಮನ್ನೆಲ್ಲಾ ನಾಲ್ಕು ಪಂಗಡ ಗಳಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ಪಂಗಡಕ್ಕೂ ಒಬ್ಬೊಬ್ಬ ನಾಯಕನ ಆಯ್ಕೆ ಯಾಗಿತ್ತು. ಸುಮಾರು ಎಂಟು ಗಂಟೆಯ ವೇಳೆಗೆ ಉಪಹಾರದ ನಂತರ ನಮ್ಮ ಕೆಲಸಕ್ಕೆ ಬೇಕಾದ ಸಲಕರಣೆಗಳ ಸಹಿತ ನಮಗೆ ನಿಯೋಜಿಸಿದ್ದ ರಸ್ತೆ ರಿಪೇರಿ ಕೆಲಸಕ್ಕೆ ಹೊರ ಟೆವು. ರಸ್ತೆಯ ಎರಡೂ ಬದಿಗಳಲ್ಲಿ ಅಗತ್ಯ ಕ್ಕಿಂತ ಹೆಚ್ಚಾಗಿ ಬೆಳೆದಿದ್ದ ಬೇಲಿಯನ್ನು ಕಡಿದೆವು. ಇದ್ದೂ ಇಲ್ಲದಂತೆ ಮುಚ್ಚಿ ಕೊಂಡಿದ್ದ ಚರಂಡಿಗಳನ್ನು ಚೊಕ್ಕ ಮಾಡಿ ದೆವು. ನಮ್ಮ ಕೆಲಸವನ್ನು ಕಂಡು ಹಳ್ಳಿಯ ಜನರು ಬೆರಗಾಗಿ ನಮ್ಮನ್ನು ಪ್ರಶಂಸಿದರು. ನಮ್ಮಲ್ಲಿ ಅನೇಕರಿಗೆ ಈ ಕೆಲಸ ಹೊಸ ಅನುಭವವಾಗಿದ್ದರಿಂದ ಕೆಲವರಿಗೆ ಸಣ್ಣ ಪುಟ್ಟ ಗಾಯಗಳಾದವು. ಆದರೆ ನಮ್ಮಲ್ಲಿದ್ದ ಉತ್ಸಾಹದ ಮಧ್ಯೆ ಅವು ಕಾಣದಾದವು.

ಇದಲ್ಲದೆ ಆ ಹಳ್ಳಿಯಲ್ಲಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಆರೋಗ್ಯದ ಸ್ಥಿತಿಗತಿಗಳನ್ನು ಕಂಡುಕೊಳ್ಳಲು ಸರ್ವೆ ಮಾಡಿ ದೆವು. ಇದರಿಂದಾಗಿ ನಮಗೆ ಅನೇಕ ಕುಟುಂಬಗಳನ್ನು ಸಂಪರ್ಕಿಸಿ ಅವರ ಕಷ್ಟ ಸುಖಗಳನ್ನು ತಿಳಿದುಕೊಳ್ಳುವ ಸದಾವಕಾಶ ದೊರೆಯಿತು. ಇದರಿಂದ ನಮಗೆ ತಿಳಿದು ಬಂದ ಪ್ರಮುಖ ವಿಷಯವೇನೆಂದರೆ ಅದೇ ಊರಲ್ಲಿ ಮಧ್ಯಪಾನ ತಯಾರಿಸುವುದು ಮತ್ತು ಮಾರಾಟ ಮಾಡುವುದು. ಮಧ್ಯಪಾನ ದಿಂದಾಗುವ ದುಷ್ಪರಿಣಾಮಗಳ ಬಗ್ಗೆ ನಾವು ಗಳು ಹಳ್ಳಿಯ ಜನರಿಗೆ ಸಾಧ್ಯವಾದಷ್ಟು ತಿಳುವಳಿಕೆ ಹೇಳಿದೆವು.

ಒಂದೇ ಹಳ್ಳಿಯ ಜೀವನ ಕ್ರಮದ ಅನುಭವ ಸಾಲದೆಂದು ಇನ್ನೂ ಹೆಚ್ಚಿನ ಹಳ್ಳಿ ಗಳ ಬಗ್ಗೆ ತಿಳಿಯಲು ಹೊಸ ವರ್ಷದ ಎರಡನೆಯ ದಿನ ಟ್ರೆಕಿಂಗ್ ಹೋಗಿದ್ದೆವು. ಅಂದು ಸುಮಾರು ಹತ್ತು ಹಳ್ಳಿಗಳಿಂದ ಕಾಲು ನಡಿಗೆಯಲ್ಲೇ ಭೇಟಿಯಿತ್ತೆವು. ಇದರಿಂದ ನಮಗೆ ಹಳ್ಳಿಯ ಜನಜೀವನದ ಬಗ್ಗೆ ಇನ್ನೂ ಹೆಚ್ಚಿನ ಅರಿವಾಯಿತು.

ಕರ್ನಾಟಕ ರಾಜ್ಯ ಅರಣ್ಯಾಧಿಕಾರಿಗಳ ಸಹ ಕಾರದಿಂದ ಒಂದು ದಿನ ರಾತ್ರಿ ವನ್ಯಮೃಗ ಗಳ ಬಗ್ಗೆ ಚಲನಚಿತ್ರವನ್ನು ಪ್ರದರ್ಶಿಸಲಾ ಯಿತು. ನಾವೆಲ್ಲರೂ ಹಳ್ಳಿಯ ಜನರ ಮಧ್ಯೆ ಕುಳಿತು ವೀಕ್ಷಿಸಿದೆವು ಹಾಗೂ ವನ್ಯಮೃಗ ಗಳ ಜೀವನ ಕ್ರಮವನ್ನು ತಿಳಿದುಕೊಂಡೆವು.

ಈ ಹತ್ತು ದಿನಗಳ ಕಾಲ ಗಂಡು - ಹೆಣ್ಣು, ಜಾತಿ - ಮತಗಳ ಬೇಧ ಭಾವ ವಿಲ್ಲದೆ ಒಂದೇ ಕುಟುಂಬದಂತಿದ್ದ ನಮಗೆ ಆ ಹಳ್ಳಿಯನ್ನು ಅಗಲಿ ಬರುವಾಗ ಏನನ್ನೋ ಕಳೆದುಕೊಂಡಂತೆ ಭಾಸವಾಯಿತು. ಆದರೆ ಆ ಅಲ್ಪ ಅವಧಿಯಲ್ಲಿ ಪಡೆದ ಅನುಭವ ಮಾತ್ರ ಮರೆಯಲಾಗದು. ಈ ಸುಂದರ ಅವಕಾಶವನ್ನು ಕಲ್ಪಿಸಿಕೊಟ್ಟ ಶಿಬಿರಾಧಿಕಾರಿ ಶ್ರೀ ಸೈಯದ್ ಅಜೀಜ್‌ರವರಿಗೂ ಮತ್ತು ಕಾಲೇಜಿಗೂ ನಾವು ಚಿರ ಋಣಿಗಳು.

ಹುಡುಕಿಕೊಂಡು ಬಂದ ಗೆಳೆಯ

ಕು|| ಪವಿತ್ರ
ದ್ವಿತೀಯ ಪಿ.ಯು.ಸಿ.

ಟಂ, ಟಂ..... ಎಂದು ಹನ್ನೊಂದು ಸಲ ಘಂಟೆಯ ಸದ್ದು ಬಂತು. ರಾಮು ತನ್ನ ಮೇಜಿನ ಮೇಲೆ ಕುಳಿತು ತನ್ನ ಫಿಸಿಕ್ಸ್ ಬುಕ್ಕನ್ನು ಹಿಡಿದು ಪಾಠವನ್ನು ಗಟ್ಟು ಮಾಡುತ್ತಿದ್ದ ತಕ್ಷಣವೇ ಜೋರಾದ ಒಂದು ಮೋಟಾರಿನ ಸದ್ದು ಕೇಳಿಬಂತು. ಅದು ತನ್ನ ಮನೆಯ ಎದುರು ನಿಲ್ಲಿಸಿದಂತಾಯಿತು. ತಕ್ಷಣವೆ ರಾಮು ತನ್ನ ಖುರ್ಚಿಯಿಂದ ಎದ್ದು ಬಾಗಿಲನ್ನು ತೆರೆಯಲು ಓಡಿದನು. ಅದು ಇನ್ಯಾರು ಅಲ್ಲ ತನ್ನ ಸ್ನೇಹಿತ ವಿಜಯ್ ಎಂದು ಗೊತ್ತಾಯಿತು. "ನಾಳೆ ಎರಡನೇ ಪಿ.ಯು.ಸಿ. ಗಣಿತದ ಪರೀಕ್ಷೆ ಈಗ ಈ ಹೊತ್ತಲ್ಲಿ ಪರೀಕ್ಷೆಗೆ ತಯಾರಾಗುವ ಬದಲು ಇಲ್ಲಿಗೇಕೆ ಬಂದ?" ಎಂದು ರಾಮು ಮನದಲ್ಲೆ ಯೋಚಿಸಿದನು. ಬಾಗಿಲನ್ನು ತೆರೆದ ಕೂಡಲೇ ವಿಜಯ್ ಒಳಗೆ ಒಂದೇ ಸಲ ನುಗ್ಗಿ ರಾಮುವಿನ ಕೈ ಹಿಡಿದುಕೊಂಡು "ರಾಮು, ಪ್ಲೀಸ್ ನಿನ್ನಿಂದ ಒಂದ ಉಪಕಾರವಾಗಬೇಕಾಗಿದೆ ಕಣೊ ನಾನು ತುಂಬ ಚಿಂತೆಯಲ್ಲಿದ್ದೇನೆ" ಎಂದು ರಾಮುವಿನ ಕೈ ಹಿಡಿದುಕೊಂಡು ಮತ್ತೆ ಮತ್ತೆ ಬೇಡಿಕೊಂಡನು. "ಏನಾಗಬೇಕಾಗಿತ್ತೊ? ಒಂದು ಸ್ವಲ್ಪ ವಿವರಿಸುತ್ತಿಯಾ? ಯಾಕೆ ಇಷ್ಟೊಂದು ಗಾಬರಿಗೊಂಡಿದ್ದೀಯಾ?" ಎಂದು ರಾಮು ಪೆಚ್ಚನೆಯ ಮುಖ ಇಟ್ಟುಕೊಂಡು ಕೇಳಿದನು. "ಬಾ ಇಲ್ಲಿ ಬೇಡ ನಿಮ್ಮ ಮನೆಯ ಒಂದಿನ ತೋಟದಲ್ಲಿ ಕುಳಿತು ಮಾತಾಡೋಣ" ಎಂದು ರಾಮುವನ್ನು ಆಚೆ ಕರೆದುಕೊಂಡು ಹೋದನು.

ಹುಣ್ಣಿಮೆಯ ರಾತ್ರಿ, ಮಂಜು ಬೀಳುತ್ತಿತ್ತು ರಾಮುವಿಗೆ ವಿಜಯ್ ಯಾಕೆ ನನ್ನನ್ನು ಹುಡುಕಿಕೊಂಡು ಇಷ್ಟೊತ್ತಿನಲ್ಲಿ ಬಂದಿದ್ದಾನೆ? ಎಂಬ ಪ್ರಶ್ನೆ ಅವನನ್ನು ಕಾಡುತ್ತಿತ್ತು. "ಆ ! ಈಗ ಹೇಳು ಏನಾಗಬೇಕಾಗಿತ್ತು" ಎಂದು ರಾಮು ವಿಜಯ್ ನನ್ನು ಕುತೂಹಲದಿಂದ ಕೇಳಿದನು. "ಏನೂ ಇಲ್ಲ ಕಣೊ ಒಂದು ಸಣ್ಣ ಕೆಲಸ ಅಷ್ಟೆ ನೀನು ನಾಳೆ ಪರೀಕ್ಷೆಗೆ ನನ್ನ ಪರವಾಗಿ ಉತ್ತರಿಸಬೇಕು ಅಷ್ಟೆ ಎಂದು ವಿಜಯ್ ಸಲೀಸಾಗಿ ಹೇಳಿದನು. (ವಿಜಯ್ ಮತ್ತು ರಾಮು ಒಂದು ಕಾಲದಲ್ಲಿ ಕ್ಲಾಸ್ ಮೇಟ್ಸ್ ಆಗಿದ್ದರು. ರಾಮು ಬಡ ಹುಡುಗನಾಗಿದ್ದರು ಕಷ್ಟಪಟ್ಟು ಓದಿ ಪಿಯುಸಿಲಿ ಫಸ್ಟ್ ಕ್ಲಾಸ್ ಬಂದಿದ್ದನು. ಆದರೆ ವಿಜಯ್‌ಗೆ ಹುಡುಗಾಟದ ಬುದ್ಧಿ ಅವನದು ಓದಿಕೊಂಡ ರಾಯಿತು ಎಂದುಕೊಂಡು ತನ್ನ ಸ್ಟಡೀಸ್‌ನ್ನು ನಿರ್ಲಕ್ಷಿಸಿ ಪಿಯುಸಿಲಿ ಫೇಲಾಗಿದ್ದನು. ಅವನ ತಂದೆ ತುಂಬಾ ಸಾಹುಕಾರರು. ವಿಜಯ್ ಈಗ ಅಕ್ಟೋಬರ್ ಪರೀಕ್ಷೆಗೆ ಕುಳಿತಿದ್ದನು).

``ಏನೋ ಇಷ್ಟು ಸಲೀಸಾಗಿ ಹೇಳಿಬಿಟ್ಟೆ`` ಎಂದು ರಾಮು ಚಕಿತನಾದವನಂತೆ ನೋಡಿದನು. ಏನೂ ಇಲ್ಲ ಕಣೋ ನಿನಗೆ ಐಡಿ ಕಾರ್ಡ್, ಹಾಲ್ ಟಿಕೆಟ್ ಎಲ್ಲಾ ತಯಾರಾಗಿದೆ ನೀನು ಸುಮ್ಮನೆ ನಿಶ್ಚಿಂತೆ ಇಂದ ಹೋಗಿ ಉತ್ತರಿಸಿ ಬಾ. ಅಲ್ಲಿನ ಇನ್‌ವಿಜಿಲೆಟರ್‌ಗೂ ಕೈ ಬಿಸಿ ಮಾಡಿ ಬಂದಿದ್ದೇನೆ. ಪ್ಲೀಸ್ ಕಣೋ ಕೆಮಿಸ್ಟ್ರಿ, ಫಿಸಿಕ್ಸ್ ಎಲ್ಲಾ ಮ್ಯಾನೇಜ್ ಮಾಡಬಲ್ಲೆ. ಆದರೆ ಈ ಮ್ಯಾಥ್ಸ್ ಯಾಕೆ ನನ್ನ ತಲೆಗೆ ಹತ್ತುವುದಿಲ್ಲ. ನನ್ನ ತಂದೆಗೆ ಈ ಸಲ ಪಾಸ್ ಆಗೇ ಆಗುತ್ತೇನೆ ಎಂದು ಮಾತು ಕೊಟ್ಟುಬಿಟ್ಟಿದ್ದೇನೆ. ಏನು ಇಲ್ಲ ಜಸ್ಟ್ ನಾನು ಪಾಸ್ ಆಗುವಷ್ಟು ಲೆಕ್ಕ ಮಾಡಿ ಎದ್ದು ಬಂದರೆ ಸಾಕು ನಿನಗೇನು ಮ್ಯಾಥ್ಸ್ ಎಂದರೆ ತುಂಬ ಸುಲಭ ಜಸ್ಟ್ ಮುವತ್ತೈದು, ನಲವತ್ತು ಬಂದರೆ ಸಾಕು. ಆಮೇಲೆ ನನ್ನ ತಂದೆ ಡೊನೇಷನ್ ಕೊಟ್ಟು ನನ್ನನ್ನು ಮೆಡಿಕಲ್‌ಗೆ ಸೇರಿಸುತ್ತಾರೆ".

ರಾಮುವಿಗೆ ಈ ಪರಿಸ್ಥಿತಿಯಲ್ಲಿ ಏನು ಹೇಳುವುದೊ ಗೊತ್ತಾಗಲಿಲ್ಲ. ಅವನು ತನ್ನ ಸ್ನೇಹಿತನಿಗೆ ಸಹಾಯ ಮಾಡುವುದೊ ಬಿಡುವುದೊ ಗೊತ್ತಾಗಲಿಲ್ಲ. ಆಗ ತಕ್ಷಣ ವಿಜಯ್ ತನ್ನ ಪಾಕೆಟ್ ಇಂದ ಐದು ಸಾವಿರ ರೂಪಾಯಿಗಳನ್ನು ತೆಗೆದು ಇದು ಲಂಚ ಎಂದು ಕೊಳ್ಳಬೇಡ. ನಿನ್ನ ತಾಯಿ ಹುಷಾರಿಲ್ಲ ಅವರ ಚಿಕಿತ್ಸೆಗೆ ಬಳಸಿಕೊ" ಎಂದು ವಿಜಯ್ ರಾಮುವಿನ ಕೈಗೆ ಐದು ಸಾವಿರ ರೂಪಾಯಿಗಳನ್ನು ತುರುಕಿದನು.

"ಏ ಇದು ತಪ್ಪಾಗುವುದಿಲ್ಲವ ನಾಳೆ ನನ್ನ ತಾಯಿ ತಂದೆ ಗೊತ್ತಾದರೆ ಅಥವಾ ನಾಳೆ ಪರೀಕ್ಷೆಗೆ ಬರುವ ಹುಡುಗರು ನನ್ನನ್ನು ಗುರುತಿಸಿದರೆ?" ಏನು ಆಗುವುದಿಲ್ಲ ನೀನು ಸುಮ್ಮನೆ ಉತ್ತರಿಸಿ ಬಾ ನಾನು ಮಿಕ್ಕಿದ್ದು ನೋಡಿಕೊಳ್ಳುತ್ತೇನೆ" ಎಂದು ಬೈಕನ್ನು ಹತ್ತಿ "ನಾನು ನಾಳೆ ಹತ್ತು ಗಂಟೆ ಕಾಲೇಜ್ ಕ್ಯಾಂಟೀನ್‌ನಲ್ಲಿ ಕಾಯುತ್ತಿರುತ್ತೇನೆ ಬರಲೆಬೇಕು ಎಂದು ರಾಮು ತನ್ನ ಅಭಿಪ್ರಾಯ ತಿಳುಸುವ ಮುನ್ನ ತನ್ನ ಬೈಕನ್ನು ಓಡಿಸಿಕೊಂಡು ಹೋದನು. ರಾಮು ತನ್ನ ಕೈಯಲ್ಲಿದ್ದ ದುಡ್ಡಿನ ಗಂಟನ್ನು ದುರುಗುಟ್ಟಿ ನೋಡುತ್ತ ತನ್ನ ತಾಯಿಯ ಆರೋಗ್ಯದ ಬಗ್ಗೆ ಚಿಂತಿಸುತ್ತ ಮನೆಯೊಳಗೆ ಹೋದನು. ಆ ರಾತ್ರಿ ಅವನು ನಿದ್ದೆ ಮಾಡಲಿಲ್ಲ.

ಹೀಗೆ ಅವನಿಗೆ ಏನು ಮಾಡಬೇಕೆಂದು ಗೊತ್ತಾಗದೆ ಕೊನೆಗೆ ನನಗೆ ಈ ಕೆಲಸವನ್ನು ಮಾಡಲು ಆಗುವುದಿಲ್ಲ ಎಂದು ನಾಳೆ ಹೇಳಿಬಿಡಬೇಕು ಎಂದು ಕೊಂಡು ಸರಿಯಾಗಿ ಹತ್ತುಗಂಟೆಗೆ ಕಾಲೇಜಿನ ಕ್ಯಾಂಟೀನ್ ಮುಂದೆ ನಿಂತಿದ್ದನು. ವಿಜಯ್ ಎಷ್ಟು ಹೊತ್ತಾದರು ಬರಲೆ ಇಲ್ಲ. ಸುಮಾರು ೧೦.೨೫ ಆಯಿತು. ಪರೀಕ್ಷೆ ಪ್ರಾರಂಭವಾಗಲು ಕೇವಲ ಐದು ನಿಮಿಷಗಳಿದ್ದವು. ಆಗ ವಿಜಯ್ ತನ್ನ ಬೈಕಲ್ಲಿ ಬಂದು ರಾಮುವಿನ ಕೈಯಲ್ಲಿ ಐಡಿ ಕಾರ್ಡ್

ಮತ್ತು ಹಾಲ್ ಟಿಕೆಟ್‌ನ್ನು ತುರುಕಿ "ಬೇಗ ಹೋಗು ಸಮಯವಾಯಿತು ಹೆದರದೆ ಬರೆದುಬಾ ಎಂದು ರಾಮುವಿನ ಮಾತನ್ನು ಕೇಳದೆ ಹೊರಟು ಹೋದನು. ರಾಮು ಹೆದರಿಕೆಯಿಂದ ಪರೀಕ್ಷೆ ಹಾಲಿಗೆ ಹೋದನು. ಅಲ್ಲಿ ಇನ್‌ವಿಜಿಲೇಟರ್‌ಗೆ ಹಾಲ್ ಟಿಕೆಟ್ ತೋರಿಸಿದನು. ಅವರು ಅವನನ್ನು ನೋಡಿ ಅವನು ಕೂತು ಪರೀಕ್ಷೆ ಬರೆಯಬೇಕಾಗಿದ್ದ ಸ್ಥಳವನ್ನು ತೋರಿಸಿದರು. ಅವನು ಪೇಪರ್ ಅನ್ನು ತೆಗೆದುಕೊಂಡು ಉತ್ತರಿಸಲು ಶುರು ಮಾಡಿದನು. ಇನ್ನೇನು ಮೂವತ್ತು ಅಂಕ ಗಳು ಬರುವಷ್ಟು ಉತ್ತರಿಸಿದನು. ಇನ್ನೇನು ಹತ್ತು ಅಂಕಗಳನ್ನು ಉತ್ತರಿಸಿ ಹೊರಟು ಹೋಗಬೇಕೆನ್ನುವಷ್ಟರಲ್ಲಿ ಅಲ್ಲಿಗೆ ಮೇಲ್ವಿಚಾ ರಕರು ಬಂದರು. ಇವನು ಭಯದಿಂದ ನಡುಗುತ್ತ ತಲೆ ಬಗ್ಗಿಸಿಕೊಂಡು ಬರೆಯತೊ ಡಗಿದನು. ಆಗ ತಕ್ಷಣ ಮೇಲ್ವಿಚಾರಕರು "ಹೆಲೊ, ನೀನು ರಾಮು ತಾನೇ ಎಂದು ಗುರುತಿಸಿದರು". ರಾಮು ತಲೆ ಎತ್ತಿ ನೋಡಿದಾಗ ಅವರು ಅವನ ಕಾಲೇಜಿನ ಪ್ರಾಕ್ಟಿಕಲ್ ಪರೀಕ್ಷೆಗೆ ಮೇಲ್ವಿಚಾರಣೆ ಮಾಡಲು ಬಂದಿದ್ದರು. ಅವರು ಇವನನ್ನು ತಕ್ಷಣ You are debarred ಎಂದು ಹೇಳಿ ಅವನನ್ನು ಕ್ಲಾಸ್ ಹೊರಗೆ ಕರೆದುಕೊಂಡು ಹೋದರು. ರಾಮುವಿಗೆ ತನ್ನ ತಂದೆ ತಾಯಿಯರ ಬಗ್ಗೆ ಯೋಚಿಸಿ ಪ್ರಪಂಚವೆ ಕತ್ತಲಾದಂತೆ ಆಗಿ ಕೆಳಗೆ ತೊಪ್ಪನೆ ಬಿದ್ದನು. ●

ಇದೊಂದು ವಿಶಿಷ್ಟ ಮಳಿಗೆ !

ಮಳಿಗೆಗಳ ಹೆಸರುಗಳನ್ನೇ ನೋಡುತ್ತಾ ಬಂದ ವ್ಯಕ್ತಿ ಗಟ್ಟಿಯಾಗಿ ಓದುತ್ತಾನೆ "ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ".

"ಇಲ್ಲಿನ್ನೇರಿರುತ್ತೆ ಬೈಬಲ್‌ಗಳು ಕ್ರಿಸ್ತನ ನೀತಿ ಕತೆಗಳು ತಾನೆ?" ಎನ್ನುತ್ತ ಸರಸರನೆ ಮುಂದೆ ನಡೆದೇಬಿಟ್ಟ. ಆತನಿಗೆ ಈ ಮಳಿಗೆಯ ವೈಶಿಷ್ಟ್ಯವೇ ತಿಳಿಯದು. ೧೯೭೨ರಲ್ಲಿ ಪ್ರಾರಂಭವಾದ ಈ ಸಂಘ ಈವರೆಗೆ ೯೫ ಪುಸ್ತಕಗಳನ್ನು ಪ್ರಕಟಿಸಿದೆ. ಇವರ ಪ್ರಕಟಣೆಯ ಪುಸ್ತಕಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಇನ್ನಿತರ ಅನೇಕ ಪ್ರಶಸ್ತಿಗಳು ಲಭಿಸಿವೆ. ಯುವ ಬರಹಗಾರರನ್ನು ಪ್ರೋತ್ಸಾಹಿಸರುವ ಯೋಜನೆ ಹಾಕಿಕೊಂಡಿದೆ. 'ನಾದಲೀಲೆ ವೇದಿಕೆ' 'ಅನಿಕೇತನ ವೇದಿಕೆ' ಮತ್ತು 'ನಾಟಕಾಭಿರುಚಿ ಕೇಂದ್ರ' ಗಳ ಮೂಲಕ ವಿದ್ಯಾರ್ಥಿ ಪ್ರತಿಭೆಗೆ ಉತ್ತೇಜನ ಕೊಡುತ್ತಿದೆ.

ಇಡೀ ಭಾರತದಲ್ಲೇ ಒಂದು ಖಾಸಗಿ ಕಾಲೇಜಿನ ಭಾಷಾಸಂಘ, ಸರ್ಕಾರದ ನೆರವು ಪಡೆಯದೆ ಪುಸ್ತಕ ಪ್ರಕಾಶನ ಮಾಡುತ್ತಿರುವುದು ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಮಾತ್ರ! ಸಾಹಿತಿ, ನಾಟಕಕಾರ ಚಿ. ಶ್ರೀನಿವಾಸರಾಜು ಇದೆಲ್ಲದರ ನಿರ್ವಾಹಕರು. ಈ ಮಳಿಗೆಯಲ್ಲಿ ಎಚ್ಚೆನ್ ಅವರ 'ತೆರೆದ ಮನ'ಕ್ಕೆ ಅಧಿಕ ಬೇಡಿಕೆ.

ಸಂಪಾದಕರು
ಕನ್ನಡ ಪುಸ್ತಕ ಭಾಗ್ಯ - ೨
ಕನ್ನಡ ಪುಸ್ತಕ ಮೇಳ ೧೯೯೪
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೧೮

ಪಿತೃ ಸ್ಮೃತಿ

ಡಾ. ಪ್ರಿಯದರ್ಶಿನಿ ಪಿ. ಮಡ್ಡಿ
ಪ್ರಾಣಿಶಾಸ್ತ್ರ ವಿಭಾಗ

ತಂದೆಯ ಅಗಲಿ ಆದವು ದಿನ ಹನ್ನೊಂದು
ಅವರಿಲ್ಲದಿರಲು ಸವಿ ನೆನಪುಗಳೇ ಇನ್ನೆಂದು
ಬಗೆಬಗೆಯ ನೆನಪುಗಳು ಕಾಡುವವು ಬಂದು
ಅಂದಿನಾ ಕ್ಷಣಗಳವು ಸ್ಮೃತಿ ಮಾತ್ರ ಮುಂದು
ಎಡಬಿಡದ ವಾತ್ಸಲ್ಯದ ನೆರಳಿತ್ತು ಅಂದು
ಪಿತೃ ರಕ್ಷೆ ಇಲ್ಲದೆ ಬಡವಾದೆ ಇಂದು

ಉಸಿರಿರುವವರೆಗೆ ದಾರಿದೀಪವಾದವರು
ಉಸಿರಳಿದ ಘಳಿಗೆ ಜ್ಯೋತಿಯಾದವರು
ದಿನ ಹತ್ತಾದಂತೆ ಏನೋ ವಿಚಿತ್ರ ಅನುಭವ
ಮನದಲ್ಲೇನೋ ಹೇಳಲಾಗದ ಭಾವ
ಅವರು ಸೇರಿದಾ ಜ್ಯೋತಿ ನಮ್ಮೊಳೇ ನೆಲೆಸಿದ ಭಾಸ
ಇದು ಏನೋ ವಿಧಿಯ ವಿಪರ್ಯಾಸ

ನಾನು ಪಡೆದಿದ್ದೆ ಒಬ್ಬ ತಂದೆ ಅಸಮಾನ
ಅವರು ಕೊಟ್ಟ ಅಮೂಲ್ಯ ಕೊಡುಗೆಯೇ ಸಮಾಧಾನ
ಅವರೊಳಗೆ ಅಡಗಿತ್ತು ಒಳಿತಿನ ಹರಕೆ
ಇನ್ನೆಂತು? ಇನ್ನೆಲ್ಲಿ? ಅವರ ಆಗಮನ !

ತುತ್ತಿಗೊಂದು ಗೋಡಂಬಿಯಂತೆ ಹೊತ್ತಿಗೊಂದು ಹಿತವಚನ
ಸಾಗರದ ಮುತ್ತುಗಳವು ನೀಡುತ್ತಿದ್ದವು ಮನಕೆ ಸಾಂತ್ವನ
ಅವರ ಹಿತನುಡಿಗಳಲ್ಲಿ ಇಷ್ಟವಾದ ಈ ನುಡಿ
ಅಂತರಾಳವ ತಟ್ಟಿ ಹೆಚ್ಚಿಸುತ್ತಿತ್ತು ಧೈರ್ಯ ಇಮ್ಮಡಿ
"ಕೆಲಸ ಭಾಳ ಆತು ಅಂತ ತಕರಾರ ಮಾಡಬ್ಯಾಡ,
ಅದು ನಾವು ಪಡೆದು ಬಂದ ಆಸ್ತಿ,
ಆಸ್ತಿ ಎಂದಾದರೂ ಆದೀತೆ ಜಾಸ್ತಿ?"

ಕಾಯಕವೇ ಕೈಲಾಸವೆಂದು ನಂಬಿದವರು
ಇಳಾ ಸೂತ್ರಗಳನ್ನು ತೊರೆದು ಲೀನವಾದರು
ಮಿತ್ರರಷ್ಟೇ ಅಲ್ಲ ಅಜಾತ ಶತ್ರುವಿನ ವ್ಯಕ್ತಿತ್ವ
'ಸರ್ವೇ ಜನಾ ಸುಖಿನೋ ಭವಂತು' ಅವರ ಸುವರ್ಣ ವಾಕ್ಯ

ತಂದೆ ಇಲ್ಲದ ಬಾಳ ಕನಸಲ್ಲೂ ನೆನೆದಿರಲಿಲ್ಲ
ಕನಸಾಗದಿದ್ದದ್ದು ನನಸಾಗಿ ಹೋಯಿತಲ್ಲ
ಕರಳು ಕತ್ತರಿಸಿದಂತಾಯಿತಲ್ಲ
ಕಣ್ಣಿನಾ ಅಣೆಕಟ್ಟು ಒಡೆಯಿತಲ್ಲ

ದೇಹ ಮಿಥ್ಯೆ ಆತ್ಮ ಸತ್ಯ
ಬೇವು ಹೆಚ್ಚು ಬೆಲ್ಲ ಕೊಂಚ
ಕತ್ತಲು ಅಹೋರಾತ್ರಿ ಬೆಳಕು ಅತಿಥಿ
ಇದೇ ಜೀವನದ ತಥ್ಯ

ದಾಂಪತ್ಯ ಯೋಗ

ಸೆಬಾಸ್ಟಿಯನ್ ಡಿಯ್ಸಾಸ್
ದ್ವಿತೀಯ ಪದವಿ

ಕುಟುಂಬವೊಂದರಲ್ಲಿ ಜನಿಸುವುದು, ಬೆಳೆಯುವುದು, ಜೀವಿಸುವುದು ಹಾಗೂ ತನ್ನದೆ ಆಗಿರುವ ಕುಟುಂಬವೊಂದನ್ನು ನಿರ್ಮಿಸುವುದು ನಿರೂಪಿಸುವುದು ಪ್ರತಿಯೋರ್ವ ವ್ಯಕ್ತಿಯ ನೈಸರ್ಗಿಕ ಹಕ್ಕು. ಕುಟುಂಬವೊಂದರ ನಿರ್ಮಾಣ ಹಾಗೂ ನಿರೂಪಣೆ ದಾಂಪತ್ಯ ಪರಿಮಿತಿಗೆ ಸೇರಿದುದಾಗಿದೆ.

ದಂಪತಿಗಳು ತಮ್ಮ ಸಾಮಾಜಿಕ ಸ್ಥಿತಿ - ಗತಿ, ಆರೋಗ್ಯ, ಆರ್ಥಿಕತೆ, ವಸತಿ - ವಸ್ತ್ರ ಸೌಕರ್ಯ ಮುಂತಾದವುಗಳಿಗೆ ಅನುಗುಣವಾಗಿ, ತಮ್ಮ ಕುಟುಂಬದ ಸಂಖ್ಯೆಯನ್ನು ಯೋಚಿಸುವುದು ಸಮರ್ಪಕ ಹಾಗೂ ಸಮರ್ಥನೀಯ. ತಮಗೆ ಹುಟ್ಟಿದ ಮಕ್ಕಳಿಗೆ ಯೋಗ್ಯ ಶಿಕ್ಷಣ, ವಸತಿ, ವಸ್ತ್ರ, ಆಹಾರ ಮುಂತಾದವುಗಳನ್ನು ನಿರ್ವಹಿಸುವುದು ತಂದೆ ತಾಯಿ ಎನಿಸಿದವರ ಕರ್ತವ್ಯ.

ವಿವಾಹ ಎಂಬುವುದು ಓರ್ವ ಪುರುಷ ಹಾಗೂ ಸ್ತ್ರೀಯ ಸತ್ಯಂಬಂಧದ ಸುದೀರ್ಘ ಪ್ರಯಾಣ. ಜೀವಮಾನ ಪರ್ಯಂತ ಬಾಳಬೇಕಾದ ಒಂದು ಒಪ್ಪಂದ. ಇದೊಂದು ರೀತಿಯಲ್ಲಿ ಮುಗಿಯಲಾರದ ವ್ಯವಹಾರ ಎಂದು ಹೇಳಬಹುದು.

ದಾಂಪತ್ಯದಲ್ಲಿ ವೈಯಕ್ತಿಕ ಸುಖ ಸಂತೋಷಗಳಿಗೆ ಹಾಗೂ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಆದರೆ ಅದರ ಜೊತೆಗೆ ಗುರುತರವಾದ ಜವಾಬ್ದಾರಿಗಳೂ ಕರ್ತವ್ಯಗಳೂ ಇವೆ. ಆದುದರಿಂದ ವಿವಾಹ ಆಗುವುದರಲ್ಲಿ ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ಸಮರ್ಪಕವಾಗಿ ನಿಭಾಯಿಸಲು ಅಗತ್ಯವಿರುವ ಪರಿಪಕ್ವತೆ ಇರಬೇಕು. ಇದಕ್ಕೆ ಕೇವಲ ದೈಹಿಕ ಹಾಗೂ ಲೈಂಗಿಕ ಪರಿಪಕ್ವತೆಯಷ್ಟೆ ಸಾಕಾಗುವುದಿಲ್ಲ. ಮಾನಸಿಕ, ಸಾಮಾಜಿಕ ಪರಿಪಕ್ವತೆಯೂ ಅವಶ್ಯಕ. ವಿವಾಹವಾಗ ಬಯಸುವವರಲ್ಲಿ ವ್ಯಕ್ತಿಗಳನ್ನು, ಪರಿಸ್ಥಿತಿಗಳನ್ನು, ಪರಿಸರವನ್ನು ಹಾಗೂ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಂತ ಜಾಣ್ಮೆ ಇರಬೇಕು. ತನ್ನ ಬಾಳ ಸಂಗಾತಿಯೊಂದಿಗೆ ಹಾಗೂ ಸಮಾಜದ ಇತರರೊಂದಿಗೆ ನಿಸ್ವಾರ್ಥ ಹಾಗೂ ಜವಾಬ್ದಾರಿಯುತ ರೀತಿಯಲ್ಲಿ ಬೆರೆಯುವ ಸ್ವಭಾವ ಇರುವುದು ಅಗತ್ಯ.

ದಾಂಪತ್ಯ ಪ್ರೀತಿಯು ಒಂದು ವಿಶೇಷ ಪ್ರೀತಿ. ಬಾಳಿನುದ್ದಕ್ಕೂ ತನ್ನೊಡನೆ ಸಹಬಾಳ್ವೆ ನಡೆಸಲಿರುವ ತನಗೆ ಸರಿಹೊಂದುವ ಸಂಗಾತಿಯನ್ನು ಸ್ವತಂತ್ರವಾಗಿ ಇಚ್ಛಿಸಿ, ಆರಿಸಿ, ಅಂಗೀಕರಿಸಿ ತನ್ನಷ್ಟೇ ಅವನಿಗೆ/ಅವಳಿಗೆ ಸಂಪೂರ್ಣವಾಗಿ, ಯಾವುದೇ ಷರತ್ತು ರಹಿತವಾಗಿ ಸಮರ್ಪಿಸುವುದೇ ದಾಂಪತ್ಯ ಪ್ರೀತಿಯ ಪರಮ ಲಕ್ಷಣ. ಕೇವಲ ಶಾರೀರಿಕ ಸಂತೃಪ್ತಿಗಾಗಿ ಯಾರು ವಿವಾಹವಾಗಲಾರರು. ಜೀವಮಾನ ಪರ್ಯಂತ ಸ್ನೇಹ, ಪ್ರೀತಿ, ಸಹಭಾಗಿತ್ವ ಹಾಗೂ ವ್ಯಕ್ತಿತ್ವ ಪರಿಪೂರ್ಣತೆಗೆ ಸಹಕಾರಿಯನ್ನು ಹೊಂದಿಕೊಳ್ಳಲೆಂದೇ ಪ್ರತಿಯೊಬ್ಬರು ವಿವಾಹವಾಗುವುದು. ಈ ಅಂಶಗಳಷ್ಟೇ ದಾಂಪತ್ಯ ಜೀವನದ ಸುಭದ್ರತೆ ಹಾಗೂ ಪರಿಪೂರ್ಣತೆಯನ್ನು ಕೊಡಬಲ್ಲವು. ಸತಿಪತಿಯರಲ್ಲಿ ಪ್ರೀತಿ ಗಾಢವಾದಷ್ಟು ದಾಂಪತ್ಯದ ಸುಖ ಸಂತೋಷಗಳು ವೃದ್ಧಿಯಾಗುತ್ತವೆ.


ಐಕ್ಯತೆ ಹಾಗೂ ಸ್ಥಿರತೆ ಇವು ದಾಂಪತ್ಯದ ಪ್ರಮುಖ ಲಕ್ಷಣಗಳಾಗಿವೆ. ದಾಂಪತ್ಯವು ಓರ್ವ ಪುರುಷ ಮತ್ತು ಓರ್ವ ಸ್ತ್ರೀಯ ನಡುವಿನ ವಿಶಿಷ್ಟ ಹಾಗೂ ಪ್ರತ್ಯೇಕ ಸಂಬಂಧವಾಗಿದೆ. ಈ ಸಂಬಂಧದಲ್ಲಿ ಮೂರನೆಯವರಿಗೆ ಪ್ರವೇಶ ನಿಷೇಧ. ದಾಂಪತ್ಯದಲ್ಲಿ ಒಂದಾದ ಸತಿ - ಪತಿ ಇಬ್ಬರೂ ಜೀವಂತವಾಗಿರುವ ತನಕ ಅವರಿಬ್ಬರ ನಡುವಣ ಸಂಬಂಧವನ್ನು ಯಾವುದೇ ಮಾನವ ಶಕ್ತಿಯಲ್ಲಿ ವಿಚ್ಛೇದಿಸಲು ಸಾಧ್ಯವಿಲ್ಲದ ಶಾಶ್ವತ ಬಂಧನವಾಗಿದೆ. "ಯುಗ ಯುಗಗಳು ಸಾಗಲಿ ಅವರಿಬ್ಬರ ಪ್ರೀತಿ ಶಾಶ್ವತ ; ಜಗವೇನೆ ಹೇಳಲಿ ಅವರಿಬ್ಬರ ಪ್ರೀತಿ ಶಾಶ್ವತ ; ನದಿ ಸಾಗರ ಕೆರಳಲಿ ಅವರಿಬ್ಬರ ಪ್ರೀತಿ ಶಾಶ್ವತ."

ವಿವಾಹದ ಬಗ್ಗೆ ಅದರ ಜೀವನದ ಬಗ್ಗೆ ನೂರಾರು ಸವಿಗನಸುಗಳು ಮೂಡುತ್ತಿರುವುದು ಸಮಂಜಸ. ಆದರೂ ವಿವಾಹ ಜೀವನದಲ್ಲಿ ಎಲ್ಲವೂ ಸುಖಮಯವಾಗಿರುವುದಿಲ್ಲ. ಎಲ್ಲವೂ ಸರಾಗವಾಗಿ ಸಾಗುವುದಿಲ್ಲ. ಮೇಲು ನೋಟಕ್ಕೆ ದಾಂಪತ್ಯ ಜೀವನ ಸರಳ ಸುಂದರವಾಗಿ ಕಂಡರೂ ಅದು ಸಮಸ್ಯೆಗಳ ಆಗರವಾಗಲು ಸಾಧ್ಯ. ವಿವಾಹ ಜೀವನ ಎಂಬುವುದು ಎರಡು ದಿನಗಳ ಆಟವಲ್ಲ. ಕೆಲವು ದಿನಗಳ ಸಾಮಾಜಿಕ ವ್ಯವಸ್ಥೆಯಲ್ಲ. ಸಾವು ಇಬ್ಬರನ್ನು ಬೇರ್ಪಡಿಸುವ ತನಕ, ಪಾಲಿಗೆ ಬಂದುದು ಪಂಚಾಮೃತವೆಂದೆಣಿಸಿ ಎಲ್ಲವನ್ನು ನಿಭಾಯಿಸಿಕೊಂಡು ಹೋಗಲೇಬೇಕು. ಆದ್ದರಿಂದ ವಿವಾಹ ಜೀವನದಲ್ಲಿ ಬಂದೊದಗಬಹುದಾದ ಅಡ್ಡಿ - ಆತಂಕಗಳು ಯಾವುವು.... ಉದ್ಭವಿಸುವ ಸಮಸ್ಯೆಗಳು ಯಾವುವು..... ಅವುಗಳನ್ನು ನಿವಾರಿಸಿಕೊಳ್ಳುವುದು ಹೇಗೆ..... ಅವುಗಳ ಮಾರ್ಗಗಳು ಯಾವುವು.... ಎಂಬುದನ್ನು ತಿಳಿದುಕೊಳ್ಳುವುದು ಬಹು ಪ್ರಯೋಜನಕರ.

ಕಣ್ಮರೆಯಾದ ಕುವೆಂಪು

ಮೋಹನ್ ಕುಮಾರ್ ಯು.ಎಮ್
ದ್ವಿತೀಯ ಪದವಿ

ಚತುಷ್ಕೋಟಿ ಕನ್ನಡಿಗರಿಗೆ ಚಿರ ಪರಿಚಿತವಾಗಿ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಖ್ಯಾತಿಯನ್ನು ಕೊಡ ಗಳಿಸಿದ. ಮನುಷ್ಯ ತನ್ನ ಅಲ್ಪ ಮನುಷ್ಯತ್ವವನ್ನು ಬಿಟ್ಟು ವಿಶ್ವಮಾನವ ನಾಗಬೇಕೆಂದು ವಿಶ್ವಕ್ಕೆಲ್ಲಾ ಸಾರಿದ ಅಪೂರ್ವ ಚೇತನ ಕವಿ ಕುವೆಂಪು ಇಂದು ನಮ್ಮೊಡನಿಲ್ಲ. ಆದರೆ ನಮ ಗೆಲ್ಲಾ ಈ ಅಪೂರ್ವ ಚೇತನವನ್ನು ಸುಲಭವಾಗಿ ಮರೆಯುವುದು ಸಾಧ್ಯ ವಿಲ್ಲ. ಏಕೆಂದರೆ ತಮ್ಮ ಶ್ರೀಮಂತ ೯೦ ವರ್ಷದ ಜೀವನದಲ್ಲಿ "ಆಡು ಮುಟ್ಟದ ಸೊಪ್ಪಿಲ್ಲ, ಕುವೆಂಪು ಕೈಯಾ ಡಿಸದ ಸಾಹಿತ್ಯವಿಲ್ಲ" ಎನ್ನುವ ಹಾಗೆ ಕನ್ನಡ ಸಾಹಿತ್ಯಕ್ಕೆ ತಮ್ಮ ಅಪೂರ್ವ ಸೇವೆಯನ್ನು ಮಾಡಿ, ಕನ್ನಡ ಸಾಹಿತ್ಯ ವನ್ನು ಶ್ರೀಮಂತಗೊಳಿಸಿದ ಧೀಮಂತ ಕವಿ ಕುವೆಂಪು.



ಕುಪ್ಪಳ್ಳಿ ವೆಂಕಟಗೌಡ ಪುಟ್ಟಪ್ಪ ಪೂರ್ಣ ಹೆಸರು. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಸಮೀಪದ ಕುಪ್ಪಳ್ಳಿ ಎಂಬುದು ತಂದೆಯ ಊರು. ಹುಟ್ಟಿದ್ದು ತಾಯಿಯ ಊರಾದ ಹಿರಿ ಕೊಡಿಗೆಯಲ್ಲಿ. ನಿಜಕ್ಕೂ "ಕುವೆಂಪು" ಕನ್ನಡಕ್ಕೆ ಮಲೆನಾಡು ನೀಡಿದ "ಹಿರಿಕೊಡಿಗೆ".

'ಮಹಾಪುರುಷರು ವಿರಳ, ಕವಿಗಳು ಇನ್ನೂ ವಿರಳ. ಮಹಾ ಪುರುಷನೂ ಕವಿಯೂ ಆಗಿರುವ ವ್ಯಕ್ತಿ ಅತ್ಯಂತ ವಿರಳ' ಎಂಬು ದಾಗಿ ಇಂಗ್ಲೀಷಿನಲ್ಲಿ ಒಂದು ಮಾತಿದೆ. ಕುವೆಂಪು ಅಂತವರು. ಪ್ರೌಢಶಾಲೆಯಲ್ಲಿದ್ದಾಗಲೇ ಕುವೆಂಪುರವರಲ್ಲಿ ಸುಪ್ತ ಕವಿತಾಶಕ್ತಿ ಪ್ರಕಟವಾಯಿತು. ಅವರಿಗೊಬ್ಬ ಕ್ರೈಸ್ತ ಗುರುಗಳಿದ್ದರು. ಇಂಗ್ಲೀ ಷಿನ "ಫೈಡ್ ಪೈಪರ್" ಪದ್ಯವನ್ನು ಅವರು ಹಾಸ್ಯವಾಗಿ ಓದಿ ದರು. ರವೀಂದ್ರರ "ಗೀತಾಂಜಲಿ"ಯನ್ನೂ ಪರಿಚಯ ಮಾಡಿಸಿ ಕೊಟ್ಟರು. ಗೀತಾಂಜಲಿಯೂ ಕ್ರೊಸೋ ಕಂಡ ಹೆಜ್ಜೆಗಳಂತೆಯೇ ಅವರಿಗೆ ಭಾಸವಾಯಿತು.

ಕುವೆಂಪುರವರು ಮೊದಲು ಕವಿತೆ ಬರೆದದ್ದು ಕನ್ನಡದ ಲ್ಲಲ್ಲ ಇಂಗ್ಲೀಷಿನಲ್ಲಿ. ಮೊದಲನೆಯ ಕವನ ಸಂಗ್ರಹ `The Biginner's Muse' ಆಂಗ್ಲ ಜಗತ್ತಿನ ಅಗಾಧ ನೆರಪಿಯ ಮುಂದೆ ಗಿಟಾರ್ ವಾದನ ಮಾಡುತ್ತ ನಿಂತ ಕನ್ನಡಿಗ. ಕಸಿನ್ಸ್ ಎಂಬ ಐರಿಷ್ ಕವಿ, ಕುವೆಂಪು ಅವರ ಇಂಗ್ಲೀಷ್ ಕವನಗಳನ್ನು ನೋಡಿ ಮೆಚ್ಚಿ ಕೊಂಡರು. ಕನ್ನಡದಲ್ಲಿ ಬರೆ ಯಿರಿ ಎಂದೂ ಹೇಳಿದರು. ಆಗ ಕನ್ನಡಕ್ಕೆ ಅವರ ಬಾಳು ಮುಡಿಪು. ಮೊದಲ ಕವಿತೆ ಚೈತ್ರ - ವೈಶಾಖ ವಸಂತಾಗ ಮನ.

ಕುವೆಂಪು ಅವರು ಮೂಲತಹ ಕವಿ. ಆದರೆ ಯಾವ ಪ್ರಕಾರವನ್ನು ಅವರು ಬಿಟ್ಟವರಲ್ಲ. ಅವುಗಳಲ್ಲಿ ಯಾವುದೊಂದೇ ಪ್ರಕಾರದ ಅವರ ಕೃತಿಗಳನ್ನು ನೋಡಿ ದರೂ ಅವರು ಅಷ್ಟನ್ನೇ ಬರೆ ದಿದ್ದರೂ ಎಷ್ಟೊಂದು ದೊಡ್ಡ ಲೇಖಕರೆಂಬುದು ಭಾಸವಾಗು ತ್ತದೆ. ಅವರು ಬರದ ಎರಡು ಕಾದಂಬರಿಗಳು ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದು ಮಗಳು. ಕಾನೂರು ಹೆಗ್ಗಡತಿಯದು ಸ್ಥಳೀಯ ಪ್ರಜ್ಞೆಯಾದರೆ, ಮದುಮಗ ಳದು ವಿಶ್ವಪ್ರಜ್ಞೆ. ಬ್ರಾಹ್ಮೀ ಪ್ರಜ್ಞೆ. ಗಾಂಧೀಜಿಯ ದಂಡೀಯಾತ್ರೆ ಯಂತ ಮಹಾ ಸಂಘಟನೆಯಾಗಲಿ, ರಾಮಣ್ಣನ ಮಗನ ಸಾವಿ ನಂಥ ಸಣ್ಣ ಘಟನೆಯಾಗಲಿ ಈ ಬ್ರಾಹ್ಮೀ ಪ್ರಜ್ಞೆಯ ಮುಂದೆ ಎರಡೂ ಒಂದೇ. ಎರಡಕ್ಕೂ ಒಂದೇ ಬಗೆಯ ಪ್ರಾಮುಖ್ಯ' ಎಂದು ಅವರೊಮ್ಮೆ ಹೇಳಿದ್ದರು.

ಲೌಕಿಕವಾಗಿ ಕುವೆಂಪು ಅವರದು ಅಧ್ಯಾಪಕ ವೃತ್ತಿ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಚಾ ರ್ಯರಾಗಿ ವಿಶ್ವವಿದ್ಯಾಲಯದ ಕುಲಪತಿಯಾದರು. ಗೌರವ ಡಾಕ್ಟೊ ರೇಟ್, ಸಾಹಿತ್ಯ ಅಕಾಡೆಮಿ ಮತ್ತು ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರ

ಕವಿ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ - ಹೀಗೆ ಹಲವಾಗು ಗೌರವಗಳು ಅವರನ್ನು ಹುಡುಕಿಕೊಂಡು ಬಂದವು. ***"ಬಾಗಿಲಲಿ ಕೈಮುಗಿದು ನಿಂತಿಹೆವು, ಒಳಗೆ ಬರಲಪ್ಪಣೆಯೆ?"*** ಎಂದು ಕೇಳಿದವು. ಕುವೆಂಪು ಅವರು ವೈಯಕ್ತಿಕವಾಗಿ ಯಾವುದನ್ನೂ ಆಶಿಸಿದವರಲ್ಲ. ಯುಗದ ಕವಿ, ಜಗದ ಕವಿ, ದ್ರಷ್ಟಾರ, ಕನ್ನಡದ ಮುಂಬರಿವಿಗಾಗಿ ಸದಾ ಶ್ರಮಿಸಿದ ಮಹಾನ್ ಚಿಂತಕ, ವಿಚಾರವಾದಿ. ಶ್ರೀಸಾಮಾನ್ಯನೂ ಭಗವನ್ಮಾನ್ಯನೆಂದು ಕೊಂಡಾಡಿದ ವಿಶ್ವಪ್ರೇಮಿ. ಕನ್ನಡಕ್ಕಾಗಿ ಕೆಚ್ಚಿನಿಂದ ಹೋರಾಡುವವರ ತಂಡದ ಸ್ಫೂರ್ತಿ. ಮಾನಸಗಂಗೋತ್ರಿಯ ಕನಸುಗಾರ. ಮಹಾಮಾನವ ಕುವೆಂಪು ಅವರು ಈ ಶತಮಾನ ಕಂಡ ಮಹೋನ್ನತ ವ್ಯಕ್ತಿತ್ವ. ಹೀಗೊಬ್ಬರು ನಮ್ಮ ನಡುವೆ ಇದ್ದರು. ಇಂಥ ಇನ್ನೊಬ್ಬರನ್ನು ಈ ನಾಡು ಕಾಣಬೇಕಾದರೆ ಇನ್ನೆಷ್ಟು ಯುಗ ಬೇಕೊ!

ಬಡಬಗ್ಗರ ಗುಡಿಸಲುಗಳ ಮುರಿದು
ಗುಡಿಗಳ ಕಟ್ಟುವರೆನಗಾಗಿ
ನರಳುತ್ತಿರೆ ನಾ ನೆತ್ತರು ಹರಿದು
ಸಂಗೀತದಿ ನನ್ನನು ಕೂಗಿ
ಪ್ರಾರ್ಥನೆ ಮಾಡಿದೆವೆಂದೆನ್ನುವರು
ರಕ್ತಮಾಂಸವನೆ ತಿನ್ನುವರು
ನನ್ನ ಧರ್ಮದಾ ಹೆಸರನೆ ಹೇಳಿ
ನನ್ನನೆ ಶಿಲುಬೆಗೆ ಕುತ್ತುವರು :
ನನ್ನ ರಕ್ತದಾ ಹೊಳೆಯಲಿ ತೇಲಿ
ಹೊಸ ಹೊಸ ಶಿಲುಬೆಯ ಕೆತ್ತುವರು
ಮಾನವರರಿಯರು ಕ್ಷಮಿಸೈ, ತಂದೆ;
ಅಂದೂ ಇಂದೂ ಎರಡೂ ಒಂದೆ.

ಕುವೆಂಪು
ಪಾಂಚಜನ್ಯ

ನನ್ನ ಪ್ರೀತಿಯ ಮೇಷ್ಟ್ರು

ರವಿಚಂದ್ರನ್ ಆರ್.
ಎರಡನೆಯ ಪಿ.ಯು.ಸಿ.

ಎಲ್ಲಾ ಮೇಷ್ಟ್ರುಗಳಿಗಿಂತ ಇಷ್ಟ ನಿಮ್ಮನ್ನ ಕಂಡ್ರೆ ನಂಗೆ
ಅದು ಯಾಕೋ ಕಾಣೆ ಹಾಗನ್ನಿಸುತ್ತೆ ನಂಗೆ
ನೀವು ಕ್ಲಾಸ್‌ನಾಗ ಬಂದ್ರೆ ಒಂದ್ತರದ ಖುಷಿ ನಂಗೆ
ಅದು ಯಾಕೋ ಕಾಣೆ ಹಾಗಾಗುತ್ತೆ ನಂಗೆ
ಆಗಾಗ ಒಂದ್ತರ ಜೋಕ್ ಮಾಡ್ತೀರಿ ನೀವು
ಆದರೆ ಅದರಲ್ಲೂ ಇವೆ ಒಂದು ತತ್ವ, ಸ್ವಾರಸ್ಯ ಹಿಂದೆ

ಎಲ್ಲಾ ಮೇಷ್ಟ್ರುಗಳಿಗಿಂತ ಇಷ್ಟ ನಿಮ್ಮನ ಕಂಡ್ರೆ ನಂಗೆ
ಅದು ಯಾಕೋ ಕಾಣೆ ಹಾಗನ್ನಿಸುತ್ತೆ ನಂಗೆ
ಕ್ಲಾಸ್‌ನಾಗ ನೀವು ಹೇಳೋ ಮಾತು
ಹಂಗೆ ಮನಸ್ಸಿನಾಗೆ ನಿಲ್ಲುತ್ತೆ ನಂಗೆ
ಯಾಕೋ ಬೇರೆ ಮೇಷ್ಟ್ರು ಹೇಳೋ ಮಾತು
ಹಂಗೇ ಕರಗೋಗತ್ತೆ ನಂಗೆ.

ಎಲ್ಲಾ ಮೇಷ್ಟ್ರುಗಳಿಗಿಂತ ಇಷ್ಟ ನಿಮ್ಮನ ಕಂಡ್ರೆ ನಂಗೆ
ಅದು ಯಾಕೋ ಕಾಣೆ ಹಾಗನ್ನಿಸುತ್ತೆ ನಂಗೆ

ನಿಮ್ಮನ್ನು ನೋಡಿದ್ರೇನೆ ಸಂತೋಷ ನಂಗೆ
ಏನಾದ್ರು ಕೊಡಬೇಕನ್ನುತ್ತೆ ನಂಗೆ
ಸಾಹಿತ್ಯ ಅಂದ್ರೆ ಇಷ್ಟವಂತೆ ನಿಮ್ಗೆ
ಆದ್ದರಿಂದ ಬರೆದ ಒಂದು ಕವನ ನಿಮ್ಗೆ

ಎಲ್ಲ ಮೇಷ್ಟ್ರುಗಳಿಗಿಂತ ಇಷ್ಟ ನಿಮ್ಮನ್ನ ಕಂಡ್ರೆ ನಂಗೆ
ಅದು ಯಾಕೋ ಕಾಣೆ ಹಾಗನ್ನಿಸುತ್ತೆ ನಂಗೆ

ಕನ್ನಡದಲ್ಲಿ ಪಂಡಿತ ಏನೂ ಅಲ್ಲ ನಾನು
ಆದರು ಬರದಿದ್ದೀನಿ ಪುಟ್ಟ ಕವಿತೆ ನಾನು
ತಪ್ಪಿದ್ದರೆ ತಿದ್ದಿ ಹೇಳಿ ನೀವು
ಅದಕ್ಕಾಗಿ ಕಾಯುತ್ತಿರುವೆ ನಾನು
ಎಲ್ಲಾ ಮೇಷ್ಟ್ರುಗಳಿಗಿಂತ ಇಷ್ಟ ನಿಮ್ಮನ್ನ ಕಂಡ್ರೆ ನಂಗೆ
ಅದು ಯಾಕೋ ಕಾಣೆ ಹಾಗನ್ನಿಸುತ್ತೆ ನಂಗೆ

ಸೋಮವಾರ, ಶನಿವಾರ ಕ್ಲಾಸ್‌ನಾಗ ಕಾಯುತ್ತಿರುತ್ತೇನೆ ನಾನು
ಈಗಾದರು ಗೊತ್ತಿರಬೇಕು ಯಾವ ಕ್ಲಾಸ್ ನಾನು
ನನ್ನ ಹೆಸರು ಹೇಳಲು ಧೈರ್ಯ ಇಲ್ಲಾ ನಂಗೆ
ಧೈರ್ಯ ಮಾಡಿಕೊಂಡು ಹೇಳ್ತಿನಿ ನಿಮಗೆ
ನಾನು ಕುಂತಿಯ ಜ್ಯೇಷ್ಠ ಮಗನ ತಂದೆ
ಎಲ್ಲಾ ಮೇಷ್ಟ್ರುಗಳಿಗಿಂತ ಇಷ್ಟ ನಿಮ್ಮನ್ನ ಕಂಡ್ರೆ ನಂಗೆ
ಅದು ಯಾಕೋ ಕಾಣೆ ಹಾಗನ್ನಿಸುತ್ತೆ ನಂಗೆ

ನಾಟಕ - ಕಮ್ಮಟ - ಸವಿನೆನಪು

ಶಿವಕುಮಾರ್ ಎನ್.ಡಿ.
ಮೂರನೆಯ ಪದವಿ

"ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ" ಕರ್ನಾಟಕದಾದ್ಯಂತ ಸುಪರಿಚಿತವಾದ ಹೆಸರು. ಈ ಸಂಘ ಪ್ರಾರಂಭವಾಗಿ ಇಪ್ಪತ್ತೆರಡು ವರ್ಷಗಳು ಸಂದಿವೆ. ಈಗ ಕಾಲೇಜಿನ ಬೆಳ್ಳಿ ಹಬ್ಬದ ವರ್ಷ. ಅನೇಕ ಉತ್ತಮ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವ ಕನ್ನಡ ಸಂಘದ ಒಂದು ಅಂಗವಾಗಿರುವ "ನಾಟಕ ಅಭಿರುಚಿ ಕೇಂದ್ರ" ಈಗ ನಾಟಕಪ್ರಿಯರಿಗೆ ಪರಿಚಿತವಾದ ಹೆಸರು.

'ನಾಟಕ ಅಭಿರುಚಿ ಕೇಂದ್ರ' ಪ್ರಾರಂಭವಾದದ್ದು ೧೯೯೨ ರಲ್ಲಿ. ಈ ಕೇಂದ್ರವನ್ನು ಸುಪ್ರಸಿದ್ಧ ರಂಗ ನಿರ್ದೇಶಕರಾದ ಪ್ರೊ ಬಿ. ಚಂದ್ರಶೇಖರ್ ಅವರು ಉದ್ಘಾಟಿಸಿದರು. ಪ್ರಸಿದ್ಧ ನಟ ಹಾಗೂ ನಾಟಕಕಾರ ಶ್ರೀ ಟಿ.ಎನ್. ಸೀತಾರಾಮ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಆ ವರ್ಷ ನಾಟಕ ಅಭಿರುಚಿ ಕೇಂದ್ರ ಚೈತನ್ಯನ ನಿರ್ದೇಶನದಲ್ಲಿ ಪ್ರಸನ್ನ ಅವರ 'ದಂಗೆಯ ಮುಂಚಿನ ದಿನಗಳು' ಪ್ರಯೋಗಿಸಿತು. ಆ ವರ್ಷದ ಅಂತರ ಕಾಲೇಜು ನಾಟಕ ಸ್ಪರ್ಧೆಯಲ್ಲಿ ಪ್ರತಿಷ್ಠಿತ ಉಲ್ಲಾಳ್ ಪಾರಿತೋಷಕದೊಂದಿಗೆ ಐದು ಬಹುಮಾನಗಳನ್ನು ಗಳಿಸಿತು. ೧೯೯೩-೯೪ರ ವರ್ಷ ಪಿ. ಲಂಕೇಶ್ ಅವರ 'ಸಂಕ್ರಾಂತಿ' ನಾಟಕವನ್ನು ಚೈತನ್ಯನ ದಕ್ಷ ನಿರ್ದೇಶನದಲ್ಲಿ ಪ್ರದರ್ಶಿಸಿ ಒಟ್ಟು ಹನ್ನೆರಡು ಬಹುಮಾನಗಳನ್ನು ಗಳಿಸಿ ಎಲ್ಲರ ಗಮನ ಸೆಳೆಯಿತು.

ಈ ವರ್ಷ ೧೯೯೪-೯೫ ನಾಟಕ ಅಭಿರುಚಿ ಕೇಂದ್ರವು ವಿದ್ಯಾರ್ಥಿಗಳಿಗೆ ರಂಗ ಭೂಮಿಯ ಒಟ್ಟಾರೆ ಸ್ವರೂಪವನ್ನು ಅರಿತುಕೊಳ್ಳಲು, ರಂಗಭೂಮಿಯ ತಿಳುವಳಿಕೆಯನ್ನು ವಿಸ್ತರಿಸಿಕೊಳ್ಳಲು "ನಾಟಕ ಕಮ್ಮಟ"ವನ್ನು ಏರ್ಪಡಿಸಿತ್ತು. ಹದಿನೈದು ದಿನಗಳ ಕಾಲ ನಡೆದ ಈ ಕಮ್ಮಟವನ್ನು ಪ್ರೊ ॥ ಜಿ.ಕೆ. ಗೋವಿಂದ ರಾವ್ ಉದ್ಘಾಟಿಸಿದರು.

ಶ್ರೀ ಸುರೇಂದ್ರನಾಥ್‌ರವರ ನಿರ್ದೇಶನದಲ್ಲಿ ಪ್ರಾರಂಭವಾದ ಈ ಕಮ್ಮಟದಲ್ಲಿ ಸುಮಾರು ೩೦ ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದರಲ್ಲಿ ನಮಗೆ ರಂಗ ಭೂಮಿಯ ಶಿಸ್ತು, ನಡವಳಿಕೆಯ ಬಗ್ಗೆ ಮತ್ತು ನಮ್ಮಲ್ಲಿ ಭಯ, ಹೆದರಿಕೆ ಮುಂತಾದ ಭಾವನೆಗಳನ್ನು ಹೋಗಲಾಡಿಸಿದರು. ಇದರಿಂದ ನಮ್ಮಲ್ಲಿ ಆತ್ಮಸ್ಥೈರ್ಯ ಮೂಡಿತು. ಇದಲ್ಲದೆ ವೇದಿಕೆಯ ಮೇಲೆ ಶಕ್ತಿಯ ಶೇಖರಣೆ ಹಾಗೂ ಅದರ ಉಪಯೋಗ, ಯಾವುದೇ ಪಾತ್ರದಲ್ಲಿ ನಾವು ತೊಡಗಿಸಿಕೊಳ್ಳಬೇಕಾದ ತಲ್ಲೀನತೆ, ಕಣ್ಣಿನ ಸಂಬಂಧ, ದೇಹದ ಚಲನೆ, ವೇದಿಕೆಯ ಉಪಯೋಗ ಮಾಡಿಕೊಳ್ಳುವ ಬಗ್ಗೆ ತಿಳಿಸಿದರು ಮತ್ತು ಅನಾವಶ್ಯಕ ಚಲನೆಗಳ ಬಗ್ಗೆ ಎಚ್ಚರಿಸಿದರು. ಹಾಗೂ ನಮ್ಮ ಕಲ್ಪನಾಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಅನೇಕ ರೀತಿಯ ಅಭ್ಯಾಸಗಳನ್ನು ಮಾಡಿಸಿದರು.

ಒಟ್ಟಿನಲ್ಲಿ ಈ ನಾಟಕ - ಕಮ್ಮಟವು ಒಂದು ಉತ್ತಮ ಅನುಭವವಾಗಿತ್ತು. ಇದರಿಂದ ರಂಗ ಭೂಮಿಯ ಬಗ್ಗೆ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಸಹಾಯವಾಯಿತು. ಇದನ್ನು ಏರ್ಪಡಿಸಿದ್ದ "ನಾಟಕ ಅಭಿರುಚಿ ಕೇಂದ್ರ"ಕ್ಕೆ ಹಾಗೂ ಎಲ್ಲಾ ಅಧ್ಯಾಪಕರಿಗೂ ಅಭಿರುಚಿ ಕೇಂದ್ರ ವಿದ್ಯಾರ್ಥಿಗಳು ಕೃತಜ್ಞರಾಗಿದ್ದಾರೆ.

ಬೆಳ್ಳಿ ನೆನಪು

ರೇಖಾ. ಎಸ್
ಎರಡನೆಯ ಪಿ.ಯು.ಸಿ.

ಕ್ರೈಸ್ಟ ಕಾಲೇಜು ಪ್ರಾರಂಭವಾದದ್ದು ೧೯೬೯ ರಲ್ಲಿ. ಅಂದಿನಿಂದ ಇಂದಿನವರೆಗೆ ಅನೇಕ ಯಶಸ್ಸಿನ ಮೆಟ್ಟಿಲುಗಳನ್ನು ದಾಟಿ ೧೯೯೪ನೇ ಜುಲೈ ತಿಂಗಳಿನಲ್ಲಿ ಅದು ಇಪ್ಪತ್ತೈದನೇ ವರ್ಷಕ್ಕೆ ಕಾಲಿಟ್ಟಿತು. ಇದರ ಅಂಗವಾಗಿ ನಡೆದ ಬೆಳ್ಳಿ ಹಬ್ಬದ ವಿವರಣೆ ಹೀಗಿದೆ. ಇದರ ಸಲುವಾಗಿ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆಗಳಿದ್ದವು. ಅದರಲ್ಲೂ ಮುಖ್ಯವಾಗಿ ಅಕ್ಟೋಬರ್ ತಿಂಗಳ ೭ನೇ, ೮ನೇ ಹಾಗೂ ೯ನೇ ತಾರೀಖಿನುದು ನಡೆದ ಕಾರ್ಯಕ್ರಮಗಳು ತುಂಬಾ ಸಂಭ್ರಮದಿಂದ ಜರುಗಿದವು. ಇದನ್ನು ಕಾಲೇಜಿನ ಒಳ ಪ್ರಾಂಗಣದಲ್ಲಿ ಆಗ ಉನ್ನತ ಶಿಕ್ಷಣ ಮಂತ್ರಿಯಾಗಿದ್ದ ಶ್ರೀ ಎಸ್.ಎಮ್. ಯಾಹ್ಯಾ ಅವರು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ ಕ್ರೈಸ್ಟ್ ಕಾಲೇಜನ್ನು ಒಂದು ಉತ್ತಮ ಕಾಲೇಜೆಂದು ಹೊಗಳಿದರು. ಇನ್ನೂ ಅನೇಕ ಅತಿಥಿಗಳು ಆಗಮಿಸಿದ್ದರು ಹಾಗೂ ಭಾಷಣವನ್ನು ಮಾಡಿದ್ದರು. ಅಂದಿನ ಆಕರ್ಷಣೆಯೆಂದರೆ ನಮ್ಮ ಅಧ್ಯಾಪಕರ ವೃಂದದವರು ನಡೆಸಿದ 'ಧನ್ವಂತ್ರಿಯ ಚಿಕಿತ್ಸೆ' ಎಂಬ ನಾಟಕ. ಇದು ಮನರಂಜನೆಯ ಜೊತೆಗೆ, ಉತ್ತಮ ಶಿಕ್ಷಣದ ಬಗ್ಗೆ ಗಹನವಾದ ವಿಚಾರವನ್ನು ತಿಳಿಸುತ್ತದೆ. ಹೀಗೆ ಮೂರು ದಿವಸ ನಡೆದ ಸಂಗೀತ, ನೃತ್ಯ, ಚಿತ್ರ ರಚನೆ, ರಸಪ್ರಶ್ನೆ ಲೇಖನ ಸ್ಪರ್ಧೆ, ರಸ ಪ್ರಶ್ನೆ, ರಂಗೋಲಿ ಮುಂತಾದ ಅನೇಕ ಸ್ಪರ್ಧೆಗಳಲ್ಲಿ ಅನೇಕ ಕಾಲೇಜುಗಳು ಭಾಗವಹಿಸಿದ್ದವು ಹಾಗೂ ತಮ್ಮ ಪ್ರತಿಭೆಯ ಪ್ರದರ್ಶನ ನಡೆಸಿದ್ದರು. ಎಲ್ಲಕ್ಕಿಂತ ಹೆಚ್ಚಿನ ಸಂತೋಷವೆಂದರೆ ಈ ಸ್ಪರ್ಧೆಗಳಲ್ಲಿ ಕ್ರೈಸ್ಟ್ ಕಾಲೇಜಿಗೆ ಸಿಕ್ಕಿದ ಮೊದಲನೆಯ ಸ್ಥಾನ. ಇದರಿಂದ ಇದರ ಗೌರವ ಇನ್ನೂ ಹೆಚ್ಚಿತು. ಹೀಗೆ ನಡೆದ ಬೆಳ್ಳಿ ಹಬ್ಬದಲ್ಲಿ ಭಾಗವಹಿಸಲು ನನಗೆ ಅವಕಾಶ ಸಿಕ್ಕಿದ್ದು ನನಗೆ ತುಂಬಾ ಸಂತೋಷವೆನಿಸಿದೆ. ಕ್ರೈಸ್ಟ್ ಕಾಲೇಜ್ ಇನ್ನೂ ಅನೇಕ ಯಶಸ್ಸಿನ ಅಡಿಗಳನ್ನಿಡಲಿ ಎಂದು ಹಾರೈಸುತ್ತೇನೆ.

ಮೂಕ ವಧು

ಜಾಹೀದ್ ಎಚ್. ಜವಳಿ
ಎರಡನೆಯ ಪದವಿ

"ವಿವಾಹವು ಎಲ್ಲ ಹೆಣ್ಣು ಮಕ್ಕಳ ಜೀವನದಲ್ಲಿ ಆಗಲೇಬೇಕು ಮಗು", ಎಂದು ಸುಮಳ ತಾಯಿ ಹೇಳಿದರು. "ಆದರೆ, ಅಮ್ಮ ಈಗಲೇ ಹತ್ತು ಸಂಬಂಧಗಳು ಡೌರಿಯ ವಿಷಯದಿಂದ ತತ್ತರಿಸಿ ಹೋಗಿವೆ. ನಮ್ಮ ಹತ್ತಿರ ಹಣ ಇದ್ದಿದ್ದರೆ ನನ್ನ ಮದುವೆ ಯಾವಾಗಲೋ ಆಗುತ್ತಿತ್ತು " ಎಂದು ಸುಮ ನೊಂದಳು.

ಇಂಥ ಸಮಯದಲ್ಲಿ ಸುಮಳ ತಂದೆ ಬಹಳ ಸಂತೋಷದಿಂದ ರೂಮಿನೊಳಗೆ ಬಂದರು. " ಸುಮ, ನಿನ್ನ ಅದೃಷ್ಟ ಖುಲಾಯಿಸಿತು. ನಮಗೆ ಒಂದು ಒಳ್ಳೆ ಸಂಬಂಧ ಬಂದಿದೆ... ಹುಡುಗ, ಒಳ್ಳೆಯ ಮನೆತನದವನು, ವಿದೇಶದಿಂದ ತನ್ನ ಓದು ಪೂರೈಸಿ ಭಾರತಕ್ಕೆ ಬಂದಿದ್ದಾನೆ. ತಂದೆಯ ಐದು ಕಂಪನಿಗಳನ್ನು ಈಗ ನೋಡಿಕೊಳ್ಳುವನು. ಅವನು ತನ್ನ ಭಾವಚಿತ್ರವನ್ನು ಅವನ ತಂದೆಯ ಮೂಲಕ ಕಳುಹಿಸಿಕೊಟ್ಟಿದ್ದಾನೆ. ನೋಡು" ಎಂದು ಉದ್ಗರಿಸಿದರು.

ಸುಮ ಹುಡುಗನ ಭಾವಚಿತ್ರವನ್ನು ನೋಡಲು ನಿರಾಕರಿಸಿದಳು. "ಅಪ್ಪ, ನಾನು ಅದನ್ನು ನೋಡಲು ಇಷ್ಟಪಡುವುದಿಲ್ಲ. ಎಲ್ಲರೂ ಕೇಳುವ ಹಾಗೆ ಆ ಹುಡುಗನೂ 'ಡೌರಿ' ಕೇಳಿರಬೇಕು. ಹೇಳಿ, ಎಷ್ಟು ಕೇಳಿದನು..... ಐವತ್ತು ಸಾವಿರ, ಒಂದು ಲಕ್ಷ .... ಹತ್ತು ಲಕ್ಷ".

ಆಗ ತಂದೆ ಸುಮಳ ತಲೆ ಮೇಲೆ ಕೈಯನ್ನಿಟ್ಟು "ಸುಮ ಈ ಸಂಬಂಧ ಹಾಗಲ್ಲ. ಇಲ್ಲಿ ಹುಡುಗ ಏನನ್ನೂ ಕೇಳುತ್ತಿಲ್ಲ. ಕೇವಲ ಒಂದು ಒಳ್ಳೆಯ ವಧು. ಆ ವಧು ಮನೆಯ ಎಲ್ಲಾ ಕೆಲಸಗಳನ್ನು ಮಾಡುವವಳಿರಬೇಕು. ಚೆನ್ನಾಗಿ ಮಾಡಿ ತನ್ನ ಗಂಡನನ್ನು ಸಂತೋಷಪಡಿಸಬೇಕು. ಅಷ್ಟೆ".

ಸುಮ ಈ ಮಾತು ಕೇಳಿ ದಿಗ್ಭ್ರಮೆಗೊಂಡಳು. ಕಣ್ಣುಗಳಿಂದ ಆನಂದಭಾಷ್ಪ ಹರಿದು, ಸುಮಳ ಮೈಯನ್ನು ಪುಳಕಿಸಿತು. ಮುಂದೆ ಆಗುವ ಗಂಡನ ಭಾವಚಿತ್ರವನ್ನು ನೋಡಿದಳು. ಎದ್ದು ಕಾಣುವ ಮೀಸೆ, ಮಧ್ಯಮ ವರ್ಣ, ಮಧ್ಯಮ ಎತ್ತರನಾದ ಸುಂದರ. ಯಾರಾದರೂ ಅವರ ಸೌಂದರ್ಯವನ್ನು ನೋಡಿದರೆ ಮಾರು ಹೋಗುವರು. ಇಂಥ ವನು, ತನ್ನ ಗಂಡನಾಗುವನು ಎಂದು ಯೋಚಿಸಿ, ತಾನು ಎಷ್ಟು ಅದೃಷ್ಟವಂತೆ... ಮುಂತಾದ ವಿಚಾರಗಳು ತಲೆಯಲ್ಲಿ ಆಕಾರ ಗೊಂಡವು.

ಸುಮ "ಈಗ ಒಂದು ಗುರಿ ಇಡ ಬೇಕು. ನಾನು ನನ್ನ ಸಭ್ಯತೆಯನ್ನು, ಕಾರ್ಯ ನಿರ್ವಹಣೆಯನ್ನು ನನ್ನ ಗಂಡನಿಗೆ ತೋರು ವೆನು. ಅವನ ಎಲ್ಲಾ ಆಸೆ ಆಕಾಂಕ್ಷೆಗಳನ್ನು ಪೂರೈಸುವೆನು. ಅವನಿಗೆ ವಿವಾಹದ ಎಲ್ಲಾ ಸುಖಗಳನ್ನು ಕೊಟ್ಟು, ಅವನಿಗೆ ನಾನು ಒಳ್ಳೆಯ ಧರ್ಮಪತ್ನಿ ಆಗಿ ತೋರುವೆನು" ಎಂದು ನಿಶ್ಚಯಿಸಿದಳು.

ವಿವಾಹದ ದಿನ ಹತ್ತಿರ ಬರುತ್ತಿತ್ತು. ಸುಮಳ ಹೃದಯದಲ್ಲಿ ಆ ಮನಮೋಹಕ ಹುಡುಗನೇ ನೆನಪಿನಲ್ಲಿ ಬರುತ್ತಿದ್ದನು. "ಏನಿತ್ತು ಅವನ ಹೆಸರು? ಹಾಂ... ಅರವಿಂದ್, ನಾನು ನಿನ್ನ ದಾಸಿಯಾಗಿದ್ದೇನೆ ಅರವಿಂದ್, ನಾನು ಆ ದಿನವನ್ನು ಕಾತರದಿಂದ ಎದುರು ನೋಡು ತ್ತಿದ್ದೇನೆ.... ಆ ವಿವಾಹದ ಶುಭ ದಿನ ..... ಆ ನಮ್ಮ ಮೊದಲ ರಾತ್ರಿ .....", ಎಂದು ಸುಮ ಯೋಚಿಸುತ್ತಲೇ ದಿನ ಕಳೆದಳು.

ಕೊನೆಯಲ್ಲಿ ಆ ಶುಭ ದಿನ ಬಂದಿತು. ಸುಮಳನ್ನು ವಿವಾಹ ಮಂಟಪದಲ್ಲಿ ಕೂರಿ ಸಿದರು. ಸುಮ ವಧುವಿನ ಅಲಂಕಾರದಲ್ಲಿ ಅಪ್ಸರೆಯಾಗಿ ವಿಜೃಂಭಿಸಿದಳು. ಅವಳ ಕಣ್ಣು ಆ ರೂಮಿನ ಕಡೆ ಹೊರಳಿತು. ವರನು ಅಲ್ಲಿದ್ದನು. ಆ ರೂಮಿನಲ್ಲಿ ವರ ವಿವಾಹದ ವಸ್ತ್ರಗಳಿಂದ ಅಲಂಕರಿಸಿ ಬರಬೇಕಾಗಿತ್ತು. ಸುಮ ತನ್ನ ಕಣ್ಣುಗಳನ್ನು ಮತ್ತೆ ಅತ್ತ ಹೊರಳಿಸಿ ದಳು. ತನ್ನ ಪತಿಯ ಕಾಲುಗಳನ್ನು ಮೊದಲು ನೋಡಿ ತನ್ನ ಕಣ್ಣುಗಳಿಂದಲೇ ಮುಟ್ಟಿ, ಆಗುವ ಪತಿಗೆ ಪ್ರಣಾಮ ಮಾಡಬೇಕೆಂದು ಅವನಿಗಾಗಿ ಕಾದಳು....

ಆ ಸಮಯವೂ ಬಂದಿತು. ಆದರೆ ..... ಸುಮ ದಿಗ್ಭ್ರಮೆಗೊಂಡಳು. ಇಬ್ಬರು ವ್ಯಕ್ತಿ ಗಳು ಆ ಹುಡುಗನನ್ನು ಒಂದು ಕಟ್ಟೆಯಲ್ಲಿ ಕೂರಿಸಿ ಮುಂದೆ ಒಬ್ಬ, ಹಿಂದೆ ಒಬ್ಬ ಆ ಕಟ್ಟೆಯನ್ನು ಎತ್ತಿಕೊಂಡು ಬರುತ್ತಿದ್ದರು.....

ಆ ಕಟ್ಟೆಯನ್ನು ತಂದು ಸುಮಳ ಪಕ್ಕಕ್ಕೆ ಇಟ್ಟರು. ಸುಮ ಅವನ ಕಡೆ ನೋಡಿದಳು.... ನೋಡಿದಳು... ಕಾಲುಗಳಿರಲಿಲ್ಲ.....

ವರನು ವಧುವನ್ನು ನೋಡಿ ನಕ್ಕನು. ಸುಮಾಗೆ ಗಾಬರಿಯಿಂದ ಶಬ್ದಗಳೇ ಹೊರ ಡಲಿಲ್ಲ... 'ಇಲ್ಲ' ಎಂದು ಹೇಳಲು ಬಹಳ ಪ್ರಯತ್ನಿಸಿದಳು. ಆದರೆ ಅವು ಬರಲಿಲ್ಲ. ವರನ ಸಂತೋಷದ ಮುಖವನ್ನು ನೋಡಿ, ಸುಮ ಎನೂ ಹೇಳಲು ಇಚ್ಛಿಪಡಲಿಲ್ಲ.

ಆಗ ಒಂದು ಗಾದೆ ಮಾತು ಸುಮಳಿಗೆ ನೆನಪಿಗೆ ಬಂತು :

"Marriages are made in heaven"

ಆಸೆ

ರವಿಚಂದ್ರನ್. ಆರ್.
ಎರಡನೆಯ ಪಿ.ಯು.ಸಿ.

ಅದೊಂದು ಹೊಸ ವಸಂತದ ಮುಂಜಾನೆ. ಇಂದಿನ ರಾತ್ರಿ ಬಲವಾಗಿಯೇ ಮಳೆ ಆಗಿದ್ದರಿಂದ ಬೆಳಗು ತಂಪಾಗಿತ್ತು. ಜೇನಿನ ಇಂಪು ಎಲ್ಲಾ ಕಡೆಗಳಿಗೂ ಹರಡಿತ್ತು.

ಮುಂಜಾನೆಯ ಆ ಹೊಂಬಿಸಿಲು ನನ್ನ ಮುಖದ ಮೇಲೆ ನಿಂತು ನಾಟ್ಯವಾಡತೊಡಗಿತ್ತು. ಆ ಶುಭ ಕಿರಣಗಳು ನನ್ನ ಕಣ್ಣನ್ನು ಸೋಂಕಿ ನನ್ನನ್ನು ನನ್ನ ಆ ನಿದ್ರಾ ಲೋಕದಿಂದ ಹೊರ ಹಾಕಿದವು. ನನ್ನ ಹಾಸಿಗೆಯ ಬಲದಲ್ಲಿದ್ದ ಕಿಟಕಿಯನ್ನೇ ತನ್ನ ತೋಳನ್ನಾಗಿಸಿಕೊಂಡು ಹಬ್ಬಿದ ಮಲ್ಲಿಗೆ ಬಳ್ಳಿಯ ಆ ಮೊಗ್ಗಿನ ಸುವಾಸನೆ, ಮುಂಜಾನೆಯ ಆ ನಿಶಬ್ಧ ವಾತಾವರಣದಲ್ಲಿ ಗುಬ್ಬಚ್ಚಿ, ಗಿಳಿಗಳ ಚಿಲಿಪಿಲಿ ವಾದ್ಯ ಬೆಳಗಿನ ಸುಪ್ರಭಾತದಂತೆ ಕೇಳಿಬರುತ್ತಿತ್ತು.

ಎಲ್ಲಾ ಬೇಸಿಗೆ ರಜೆಯಂತೆ ಈ ಬಾರಿಯು ನಾನು ನನ್ನ ಅಜ್ಜನ ಮನೆಯಲ್ಲಿರಲು ತಪ್ಪಲಿಲ್ಲ. ನನ್ನ ಅಜ್ಜನ ಮನೆಯ ಸುತ್ತ ಆವರಿಸಿದ ಹಸಿರು ಗಿಡಮರ ಬಳ್ಳಿಗಳು ಹಾಗೂ ಅವುಗಳನ್ನೇ ತಮ್ಮ ನೆಲೆಯನ್ನಾಗಿಸಿಕೊಂಡಿರುವ ಜೀವಗಳೇ ನನ್ನನ್ನು ಇಲ್ಲಿಗೆ ಪ್ರತಿ ಬಾರಿಯು ಸೆಳೆದೊಯ್ಯುತ್ತವೆ.

ಆ ಶುಭ್ರವಾದ ಮುಂಜಾನೆಯಲ್ಲಿ ನಾನು ನನ್ನ ಹಾಸಿಗೆಯಲ್ಲೇ ಮಲಗಿದ್ದು ಕಿಟಕಿಯಿಂದ ನನ್ನ ಸುತ್ತಲಿದ್ದ ನಿಸರ್ಗವನ್ನು ದಿಟ್ಟಿಸುತ್ತಿದ್ದೆನು.

ನನ್ನ ಅಜ್ಜನ ಮನೆಯ ಬದಿಯ ಆ ಸ್ವಲ್ಪ ನೆಲದಲ್ಲಿ ನಾಲ್ಕು ಮರ ಇವೆ. ಅವುಗಳಲ್ಲಿ ನನ್ನ ಮೆಚ್ಚಿನ ಮಾವಿನ ಮರದ ಒಂದು ಕೊಂಬೆಯ ಮೇಲೆ ಅಳಿಲು ತನ್ನ ಬೀಡನ್ನು ಮಾಡಿತ್ತು. ಅವುಗಳ ಆ ಸೀಳು ಧ್ವನಿಯ ಕರೆ ನನಗೆ ತೀರಾ ಪರಿಚಿತ. ಆದರೆ ಅಲ್ಲಿದ್ದ ಬೇರೆ ಎಲ್ಲಾ ಜೀವರಾಶಿಗಿಂತ ಇವುಗಳ ಮೇಲೆ ನನಗೆ ಬಹಳ ಪ್ರೀತಿ, ಅನುಕಂಪ.

ಒಮ್ಮೆ ಅದರ ಮರಿಯೊಂದನ್ನು ತಂದು ನನ್ನ ಹಾಸಿಗೆ ಪಕ್ಕದಲ್ಲೇ ಅದಕ್ಕೆ ಗೂಡನ್ನು ಮಾಡಿದೆ. ಆದರೆ ಅದರ ಆ ಬೇಸರವನ್ನು ಕಂಡು ಮತ್ತೇ ತನ್ನ ತವರೂರಿಗೆ ಹೋಗಲು ಅವಕಾಶ ಮಾಡಿಕೊಟ್ಟಾಗ ಅದರ ತಂದೆ ತಾಯಿಯ ಆ ಆತುರದ ಆಹ್ವಾನಕ್ಕೆ, ಮಿಂಚಿನ ವೇಗದಲ್ಲಿ ಅವರನ್ನು ಸೇರಿದ ಆ ಮರಿಯ ಉಲ್ಲಾಸ ಎಷ್ಟೊ ಅದರ ಬಹುಪಾಲು ಸಂತೋಷ ನನಗಾಯಿತು.

ಹಾಸಿಗೆಯ ಬಲದಲ್ಲಿದ್ದ ಕಿಟಕಿಯಿಂದ ಸುತ್ತಲಿದ್ದ ಹಸಿರಿನ ಮೇಲೆ ಕಣ್ಣಾಯಿಸುತ್ತಿದ್ದಾಗ ನನ್ನ ನೆಚ್ಚಿನ ಅಳಿಲುಗಳ ಮೇಲೆ ಕಣ್ಣಾಡಿಸಲು ಮರೆಯಲಿಲ್ಲ. ತಾಯಿಯ ಬರುವಿಕೆಯನ್ನೇ ಕಾಯುತ್ತ ಅಳುತ್ತಿದ್ದ ಆ ಮರಿ ಅಳಿಲುಗಳ ಕಂಡು ಬಹಳ ಬೇಸರಗೊಂಡೆ. ನೋಡುತ್ತಲೇ ಇದ್ದ ಆ ಕ್ಷಣದಲ್ಲೆ ತಾಯಿ ಅಳಿಲು ತನ್ನ ಗೊದರು ಬಾಲವನ್ನು ಮಿಡುಯುತ್ತ ತನ್ನ ಆ ಮುದ್ದಿನ ಕೈಗಳಿಂದ ತನಗೆ ದೊರಕಿದ ಮಾದಲ ಹಣ್ಣನ್ನು ಮಕ್ಕಳಿಗೆ ಕೊಡಲು ಮುಂದಾಯಿತು.

ಅದನ್ನು ಕಂಡ ಆ ಎಳೆ ಮರಿಗಳು ಒಂದರ ಮೇಲೆ ಒಂದು ಬಿದ್ದು ತಮ್ಮ ತಮ್ಮ ಭಾಗವನ್ನು ಪಡೆಯಲು ಕಚ್ಚಾಡಿದವು. ಇದನ್ನು ಕಂಡ ನನಗೆ ನನ್ನ ಹಿಂದಿನ ಅಜ್ಜನ ಮನೆಯ ನೆನಪುಗಳು ಕಣ್ಣರೆಪ್ಪೆಯ ಮುಂದೆ ಕುಣಿದಾಡತೊಡಗಿದವು. ನೆನಪುಗಳ ಚಿತ್ರಗಳಲ್ಲಿಯೇ ಮತ್ತೇ ನಾನು ನನ್ನ ಆ ನಿದ್ರಾ ಲೋಕದಲ್ಲಿ ಮತ್ತೇ ಪ್ರವೇಶಿಸಿದೆ.

ಅದೊಂದು ಅಮಾವಾಸ್ಯೆಯ ರಾತ್ರಿ, ಚಂದ್ರನು ಕಣ್ಮರೆಯಾದರಿಂದ ಎಲ್ಲೆಡೆಯೂ ಕತ್ತಲು ತುಂಬಿ ತುಳುಕಾಡುತ್ತಿತ್ತು. ನಾನು ನನ್ನ ಕೊಠಡಿಯಲ್ಲಿ ಎಂದಿನಂತೆ ಮಲಗಿದ್ದೆ. ಅದೇನೊ ಕಾಣೆ ಮಧ್ಯ ರಾತ್ರಿ ಸಮೀಪಕ್ಕೆ ನನ್ನ ಅಜ್ಜಿಯ ಆ ಭಯಂಕರ ಕೂಗಿಗೆ ಎಚ್ಚರಗೊಂಡು ಕೆಲಕ್ಷಣಗಳಲ್ಲಿಯೇ ನನ್ನ ಅಜ್ಜಿಯ ಕೊಠಡಿಗೆ ಧಾವಿಸಿದೆ. ಅಲ್ಲಿ ನನ್ನ ಅಜ್ಜ ಹೃದಯ ನೋವಿನಿಂದ ನರಳುವುದನ್ನು ಕಂಡ ನನಗೆ ಉಸಿರಾಡಲು ಕಷ್ಟವಾಯಿತು. ಆದರೆ ನನ್ನ ಪಕ್ಕದ ಮನೆಯ ರವಿ ಮಾವನ ಸಹಾಯದಿಂದ ನನ್ನ ಅಜ್ಜನನ್ನು ಆಸ್ಪತ್ರೆಗೆ ಸೇರಿಸಲು ತಡ ಮಾಡಲಿಲ್ಲ.

ಮರುದಿನ ಕೋಳಿ ಕೂಗುವ ಮುಂಚೆಯೆ ನಮ್ಮ ಪರಿವಾರವೆಲ್ಲವೂ ದೇಶದ ಎಲ್ಲಾ ಮೂಲೆಗಳಿಂದ ನಮ್ಮ ಅಜ್ಜನ ಮನೆಗೆ ಕಾಲಿರಿಸಿದವು.

ಹೀಗೆ ಎಲ್ಲರೂ ಸೇರಿ ಬಹಳ ದಿನವಾಗಿದ್ದವು. ಆ ದಿನಗಳನ್ನು ನಾನು ಎಂದೂ ಮರೆಯುವಂತಿಲ್ಲ. ಆದರೆ ಈ ಬಾರಿ ಸೇರಿದ ಗುಂಪಿನ ಮುಖದಲ್ಲಿ ಆ ನಗೆಯಿರಲಿಲ್ಲ.

ನಮ್ಮ ಕುಟುಂಬವೆಂಬ ದೋಣಿಗೆ ಮೂಲ ಪಾತ್ರವನ್ನು ವಹಿಸುತ್ತಿದ್ದ ನೌಕಾಧಿಪತಿಯೇ ಇಲ್ಲದಿದ್ದರೆ ಪ್ರಯಾಣಿಕರಾದ ನಾವು ದಿಕ್ಕು ತೋಚದವರಾದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಈಗಿನ ಈ ಪರಿಸರದಲ್ಲೇ ಮನೆಯಲ್ಲಿ ಸ್ವಾರ್ಥವೆಂಬ ಪಿಶಾಚಿ ನೆಲೆಗೊಂಡಳು. ಪ್ರಾರಂಭಿಸಿತು, ಇದು ನನ್ನ ಚಿಕ್ಕಮ್ಮನ ರೂಪದಲ್ಲಿ ತನ್ನ ಸ್ವರೂಪವನ್ನು ತಲೆದೋರ ತೊಡಗಿತು. ಯಾವುದೊ ಒಂದು ಕಾರಣವನ್ನು ಮೂಲವಾಗಿರಿಕೊಂಡು ನನ್ನ ಚಿಕ್ಕಮ್ಮ ಮನೆಯ ಹಿರಿಯರೊಂದಿಗೆ ಜಗಳವ್ಹೆತ್ತಿದ್ದರು. ಆಸ್ಪತ್ರೆಯಲ್ಲಿ ನರಳುವ ತಂದೆಯ ಪಕ್ಕದಲ್ಲಿರದೆ ಹೆಂಡತಿಯ ಜೊತೆಗೆ ತಾಳ ಹಾಕುತ್ತಿರುವ ನನ್ನ ಚಿಕ್ಕಪ್ಪನನ್ನು ಕಂಡು ನನಗೆ ಬಹಳ ಬೇಸರವಾಯಿತು.

ಈ ಬೆಂಕಿಯ ಕಿಡಿ ಅಲ್ಲಿಯೇ ಅಡಗದೆ ಮುಂದೆ ಭಯಂಕರ ರೂಪವನ್ನು ತಾಳಿತು.

ಕೊನೆಗೆ ಅಣ್ಣತಮ್ಮಂದಿರಲ್ಲೇ ವಿರೋಧವನ್ನು ತಂದು ಅವರು ನಾಯಿಗಳಂತೆ ಕಚ್ಚಾಡ ತೊಡಗಿದರು.

ಈ ವಿಷಯವನ್ನು ತಿಳಿದ ನನ್ನ ಅಜ್ಜ, ಆ ಚಿಂತೆಯಲ್ಲಿ ಮುಳುಗಿ ತಮ್ಮ ಸಾವನ್ನು ತಾವೇ ಬೇಗ ಬರಮಾಡಿಕೊಂಡರು. ನಮ್ಮ ಕುಟುಂಬಕ್ಕೆ ದೀಪದಂತಿದ್ದ ನನ್ನ ಅಜ್ಜನ ಜ್ಯೋತಿ ನಂದಿತು.

ಅಣ್ಣ ತಮ್ಮಂದಿರ ಕಚ್ಚಾಟದ ಮಧ್ಯೆ ದಿಕ್ಕು ತೋರದ ನನ್ನ ಅಜ್ಜಿ, ಅಜ್ಜನ ಒಂದು ಚಿತ್ರ ವನ್ನು ಹಿಡಿದು ನೀರಾಗಿದ್ದರು. ಅಂದು ಒಡೆದು ಚೂರಾದ ನನ್ನ ಅಜ್ಜನ ಕನಸುಗಳು ಮತ್ತೇ ಮುಂದೆ ಎಂದೂ ಸೇರಲಿಲ್ಲ.

ಮತ್ತೇ ನನ್ನ ಸ್ನೇಹಿತರಾದ ಅಳಿಲಿನ ಸೀಳು ಧ್ವನಿಗೆ, ಗುಬ್ಬಚ್ಚಿಯ ಚಿಲಿಪಿಲಿಗೆ ಎಚ್ಚರ ಗೊಂಡೆ. ಆ ಪ್ರಾಣಿ ತನ್ನ ಆತುರದ ಆಹ್ವಾನಕ್ಕೆ ಶಕ್ತಿ ಕೊಡುವ ಸಲುವಾಗಿ ಅಳ್ಳೆಯನ್ನು ತುಂಬು ವುದೂ ಹೊದರು ಬಾಲವನ್ನು ಮಿಡಿಯು ವುದು ನಾನು ಕುಳಿತಲ್ಲಿಗೆ ಸ್ಪಷ್ಟವಾಗಿ ಕಾಣುತ್ತಿತ್ತು.

ಹಿಂದೆ ಆಹಾರಕ್ಕಾಗಿ ಕಚ್ಚಾಡುತ್ತಿದ್ದ ಆ ಎಳೆಮರಿಗಳು ಈಗ ಪ್ರೀತಿಯಿಂದ ಒಂದರ ಮೇಲೆ ಒಂದು ಉರುಳಿ ಸ್ನೇಹದಾಟದಲ್ಲಿ ಮಗ್ನವಾಗಿದ್ದವು. ಇವುಗಳ ಈ ನಡತೆಯನ್ನು ಕಂಡ ನನಗೆ "ಹೀಗೇಯೇ ಏಕೆ ನಮ್ಮ ಒಡೆದಿರುವ ಕುಟುಂಬವು ಒಂದಾಗಬಾರದು? ಒಂದಾಗಬಹುದೆ? ಅದಕ್ಕೆ ದಾರಿಗಳಿವೆಯೇ? ಆ ದಿನ ಎಂದು ಬರುವುದು? ಮತ್ತೇ ಪ್ರೀತಿಯು ಅಲೆಗಳಿಂದ ನನ್ನ ಅಜ್ಜನ ಮನೆ ಎಂದು ತೇಲಬಹುದು?" ಎಂಬ ನೂರಾರು ಪ್ರಶ್ನೆಗಳೆಂಬ ಚಿಂತೆಯ ಕಡಲಲ್ಲಿ ಮುಳುಗಿದ್ದೆ.

ಆದರೆ ಎಂದಿನಂತೆ ಪ್ರೀತಿಯಿಂದ ನಲಿಯುತ್ತಿದ್ದ ಆ ಅಳಿಲುಗಳನ್ನು ಕಂಡು ನನ್ನ ಮನಸ್ಸಿನ ಚಿಂತೆಯ ಭಾರ ಕಡಿಮೆಯಾಯಿತು.

ನಿಗೂಢ ಮಾನವರು

ಶ್ರೀ ರಾಮಯ್ಯ
ಮೊದಲನೆಯ ಪದವಿ

ಮನಸು - ಮನಸುಗಳ ನಡುವೆ
ಜಾತಿಯೆಂಬ ಮುಳ್ಳು ಬೇಲಿಯ ನೆಟ್ಟವರು
ಮತ - ಬೇಧಗಳ ಮೂಲಕ
ವಿಷದ ಬೀಜವ ಬಿತ್ತಿದವರು ...
ಕತ್ತಿಹಿಡಿದು, ಇತಿಹಾಸದ ಗದ್ದುಗೆಯೇರಿದ
ನನ್ನವ್ವೆಯ ಕೈಯ ಕತ್ತರಿಸಿದವರು
ಅಬಲೆಯ ಕಣ್ಣುಕಟ್ಟಿ, ಕೋಣೆಯಲಿ ನೂಕಿ
ಚುಂಬನಕ್ಕಿಟ್ಟುಕೊಂಡವರು.

ಪ್ರೀತಿಯ ಕೊಟ್ಟ ಹೆಣ್ಣು ಮೇಲೇರಲು
ಸಹಿಸದೆ ಮರ್ಮಕ್ಕೊದ್ದವರು
ನಾಲ್ಕು ಗೋಡೆಗಳ ಮಧ್ಯೆ ಬಂಧಿಸಿ
ಅವಳೆದೆಯ ಕುಯ್ದು ಗಾಯ ಮಾಡಿದವರು
ಅಧಿಕಾರದ ಗದ್ದುಗೆಗಾಗಿ ಹಾತೊರೆದು ನಿಂತು
ತಮ್ಮ ಆತ್ಮಸಾಕ್ಷಿಯ ಮಾರಿಕೊಂಡವರು
ಬಡವನೊಡಲ ನೆತ್ತರು ಚಿಮ್ಮಿಸಿ
ಜಲ ಕ್ರೀಡೆಯಾಡಿದವರು

ಎಟುಕದಂತೆ ಗಗನಕೇರಿಸಿ ಮೌಲ್ಯಗಳ
ಆರ್ತನಾದವ ಕಂಡು ಗಹಗಹಿಸಿ ನಕ್ಕವರು
ಆಡು ಹಗಲೇ ಉರುಳಿಸಿ ತಲೆಗಳ ನಮ್ಮ ಮುಂದೆ
ಗೋರಿಗಳ ಕಟ್ಟಿ ಕೊಂಡಾಡುತಿಹರು
ಅವರು ನಮ್ಮೊಡನಿದ್ದೂ ನಮಗೆ ಕಾಣದ
ನಿಗೂಢ ಮಾನವರು .....

ಮಹಿಳೆಯರಲ್ಲಿ ವರ್ಣಭೇದ

ಸುನಿ ಫ್ರಾನ್ಸಿಸ್ಸ್
ಪ್ರಥಮ ಪದವಿ

ಬ್ರಿಟನ್ನಿನ ಉದ್ಯೋಗ ಕ್ಷೇತ್ರದಲ್ಲಿ ಭಾರತೀಯ ಮಹಿಳೆಯರು ಎರಡು ಬಗೆಯ ಭೇದ ಭಾವವನ್ನು ಎದುರಿಸಬೇಕಾಗಿದೆ. ಮೈ ಬಣ್ಣ ಮತ್ತು ಲಿಂಗ ಭೇದಗಳು. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ರಿಕಾದ ಕಪ್ಪು ಮಹಿಳೆಯರೂ ಈ ಪಾಡು ಎದುರಿಸಬೇಕಾಗಿದೆ.

ಲಂಡನ್ನಿನ ಸ್ವಯಂಸೇವಾ ಸಂಘವೊಂದು ಈ ವರದಿ ಸಲ್ಲಿಸಿದೆ. ಅದರಂತೆ ಬ್ರಿಟನ್ನಿನಲ್ಲಿ ಶ್ವೇತ ಮಹಿಳೆಯರಿಗಿಂತ ಹೆಚ್ಚು ಅರ್ಹತೆ ಹೊಂದಿದ್ದರೂ ಭಾರತೀಯ ಹಾಗೂ ಇನ್ನಿತರ ದೇಶಗಳ ಅಲ್ಪಸಂಖ್ಯಾತ ಮಹಿಳೆಯರಿಗೆ ಉದ್ಯೋಗಾವಕಾಶಗಳೂ ಕಡಿಮೆ ಮತ್ತು ನೀಡಲಾಗುವ ವೇತನವೂ ಕಡಿಮೆ. ಉಚ್ಚ ಶಿಕ್ಷಣ ಪಡೆಯುವವರಲ್ಲಿ ಬಿಳಿಯರಲ್ಲದ ಮಹಿಳೆಯ ಪ್ರಮಾಣ ಬಿಳಿಯ ಮಹಿಳೆಯರಿಗಿಂತ ಹೆಚ್ಚು. ಶೇಕಡಾ ೨೦ ರಷ್ಟು ಬಿಳಿಯ ಮಹಿಳೆಯರು ಮಾತ್ರ ಉಚ್ಚ ಶಿಕ್ಷಣ ಪಡೆಯುತ್ತಿದ್ದರೆ, ಭಾರತೀಯ ಮಹಿಳೆಯಲ್ಲಿ ಈ ಪ್ರಮಾಣ ಶೇಕಡ ೪೦ ರಷ್ಟಿದೆ. ಅಲ್ಲಿ ನೆಲೆಸಿದ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಮಹಿಳೆಯಲ್ಲಿ ೩೦ರಷ್ಟು ಮಂದಿ ಉಚ್ಚ ಶಿಕ್ಷಣ ಪಡೆಯುತ್ತಾರೆ. ಚೀನಾದ ಮಹಿಳೆಯರು ಇದರಲ್ಲಿ ಎಲ್ಲರನ್ನೂ ಮೀರಿಸಿದ್ದಾರೆ. (ಶೇಕಡಾ ೮೦) ಆಫ್ರಿಕಾದ ಕಪ್ಪು ಮಹಿಳೆಯರು ೨ನೆಯ ಸ್ಥಾನ ಪಡೆಯುತ್ತಾರೆ.

ವರದಿಯ ಪ್ರಕಾರ ಒಂದು ಕೆಲಸಕ್ಕೆ ಒಂದು ಗಂಟೆಗೆ ಶ್ವೇತ ಮಹಿಳೆ ೧೦೦ ರೂಪಾಯಿ ಪಡೆಯುತ್ತಿದ್ದರೆ, ಅದೇ ಕೆಲಸ ಮಾಡುವ ವಿಷ್ಯಾ ಅಥವಾ ಆಫ್ರಿಕಾದ ಕಪ್ಪು ಮಹಿಳೆ ಸುಮಾರು ೭೫ ರೂಪಾಯಿ ಮಾತ್ರ ಪಡೆಯುತ್ತಾಳೆ. ಅಲ್ಲದೆ ಕಪ್ಪು ಮಹಿಳೆಯರ ಉದ್ಯೋಗ ಪರಿಸರವೂ ಸರಿಯಾಗಿರುವುದಿಲ್ಲ. ಅವರು ಆ ವಲಯದಲ್ಲಿ ತಮ್ಮ ಮೂಲಭೂತ ಹಕ್ಕುಗಳಿಂದಲೂ ವಂಚಿತರಾಗಿರುತ್ತಾರೆ.

ಬ್ರಿಟನ್ನಿನಲ್ಲಿ ಹೆಚ್ಚಿನ ಮಹಿಳೆಯರು ಇಂಜಿನಿಯರಿಂಗ್ ಮತ್ತು ಅಡಕ್ಕೆ ಸಂಬಂಧಿಸಿದ ಕ್ಷೇತ್ರ, ಹೋಟೆಲ್ ಮತ್ತು ಬಟ್ಟೆ ಉದ್ಯಮಗಳನ್ನು ಆರಿಸಿಕೊಳ್ಳುತ್ತಾರೆ. ಕೆಲವರು ವೃತ್ತಿಪರ ಕ್ಷೇತ್ರದಲ್ಲೂ ದುಡಿಯುತ್ತಾರೆ. ಆಫ್ರಿಕಾದ ಕಪ್ಪು ಮಹಿಳೆಯರಿಗೆ ಕೆಲಸ ಮಾಡಲು ಆರೋಗ್ಯ ಕ್ಷೇತ್ರ ಹೆಚ್ಚು ಪ್ರಿಯವಾದುದು. ಚೀನಾ ಮತ್ತು ಬಾಂಗ್ಲಾದೇಶದ ಹೆಚ್ಚಿನ ಮಹಿಳೆಯರು ರೆಸ್ಟೋರೆಂಟುಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ವರದಿ ಪ್ರಕಾರ, ಬ್ರಿಟನ್ನಿನಲ್ಲಿನ ವಿಷ್ಯಾದ ಉದ್ಯೋಗಸ್ಥ ಮತ್ತು ಆಫ್ರಿಕಾದ ಮಹಿಳೆಯರೊಡನೆ ಲೈಂಗಿಕ ಶೋಷಣೆಯೂ ನಡೆಯುತ್ತಿದೆ. ಈ ರೀತಿ ಕಪ್ಪು ಮಹಿಳೆಯರು ಬಣ್ಣ, ಜಾತಿಯ ಆಧಾರದ ಮೇಲೆಯೇ ಅಲ್ಲದೆ, ಸ್ತ್ರೀ ಜಾತಿಗೆ ಸೇರಿದವರೆಂದು ಭೇದಭಾವಕ್ಕೆ ಒಳಗಾಗಿದ್ದಾರೆ.

ಕಾಮಧೇನು

ಚಂದನ ಹೆಚ್. ಪಿ.
ಎರಡನೆಯ ಪದವಿ

ಕ್ರೈಸ್ಟ್ ಕಾಲೇಜಿನ ವಿದ್ಯಾರ್ಥಿನಿಯಾದ ನನಗೆ ನಮ್ಮ ಕಾಲೇಜಿನ ಬಗ್ಗೆ ಕನ್ನಡ ಸಂಘದ ಬಗ್ಗೆ ಬರೆಯುವುದೆಂದರೆ ನಿಜವಾಗಿಯು ಒಂದು ಹೆಮ್ಮೆಯ ವಿಷಯ. ಕಳೆದ ವರ್ಷವೆ 'ತೆರದ ಮನ' ವನ್ನು ೭೫ನೇ ಪುಸ್ತಕವನ್ನಾಗಿ ಪ್ರಕಟಿಸಿದ ಕನ್ನಡ ಸಂಘ ಈಗಾಗಲೆ ನೂರನೇ ಪುಸ್ತಕ ಬಿಡುಗಡೆ ಮಾಡುತ್ತಿದೆ ಎಂದರೆ ಅದು ಆಶ್ಚರ್ಯವೇ ಹೌದು. ಈ ಸಂಘದ ಎಲ್ಲ ಹೆಗ್ಗಳಿಕೆಯು ಮೊದಲು ನನ್ನ ಗುರುಗಳಾದ ಶ್ರೀ ಚಿ. ಶ್ರೀನಿವಾಸರಾಜುರವರಿಗೆ. ಅವರು ಈ ಕನ್ನಡ ಸಂಘವನ್ನು ೧೯೭೨ ರಿಂದ ನಡೆಸಿಕೊಂಡು ಬಂದಿದ್ದಾರೆ. ಈಗಾಗಲೇ ೨೨ ವರ್ಷಗಳಿಂದ ಕಾಮಧೇನುವಿನಂತೆ ಕನ್ನಡ ತಾಯಿಯ ಸೇವೆಯನ್ನು ಸಂಘದ ಮುಖಾಂತರ ಸಲ್ಲಿಸುತ್ತಾ ಬಂದಿದ್ದಾರೆ. ಅವರ ಬಗ್ಗೆ ಎಷ್ಟು ಹೇಳಿದರು ಕಡಿಮೆಯೇ ಅನ್ನುತ್ತೆ. ಅವರು ವಿದ್ಯಾರ್ಥಿಗಳಲ್ಲಿ ಹೊಸ ಚೈತನ್ಯ ಮೂಡಿಸುತ್ತಾರೆ. ಪಾಠಕ್ಕೆ ಎಷ್ಟು ಪ್ರಾಮುಖ್ಯತೆ ಕೊಡುತ್ತಾರೋ ಅಷ್ಟೇ ಪ್ರೋತ್ಸಾಹವನ್ನು ಇತರ ಚಟುವಟಿಕೆಗಳಿಗೆ ಕೊಡುತ್ತಾರೆ. ವಿದ್ಯಾರ್ಥಿ ಪ್ರತಿಭೆಗಳ ಪ್ರೋತ್ಸಾಹಿಸಲು ಕನ್ನಡ ಸಂಘ ಅನೇಕ ಸ್ಪರ್ಧೆಗಳನ್ನು ಏರ್ಪಡಿಸುತ್ತದೆ. ಕನ್ನಡ ವಿಭಾಗದ ಎಲ್ಲಾ ಅಧ್ಯಾಪಕರ ಶ್ರಮ ಹಾಗೂ ಸಂಘದ ವಿದ್ಯಾರ್ಥಿಗಳ ಸಹಕಾರ, ಕನ್ನಡ ಸಂಘವನ್ನು ಮುಂದೆ ತಂದಿದೆ.

ನಾನು ಕಂಡ 'ಕನ್ನಡ ಪುಸ್ತಕ ಮೇಳ - ೧೯೯೪'

ಎಲ್. ಮಂಜುಳ
ಮೊದಲನೆಯ ಪದವಿ

ಇತ್ತೀಚೆಗೆ ಬೆಂಗಳೂರು ನಗರದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ದಿನಾಂಕ ೩.೧೦.೯೪ ರಿಂದ ೮.೧೦.೯೪ರ ವರೆಗೆ ಕನ್ನಡ ಪುಸ್ತಕ ಮೇಳ ಜರುಗಿತು. ನಾನು ಈ ಮೇಳಕ್ಕೆ ಹೋದಾಗ ನನಗಾದ ಅನುಭವಗಳನ್ನು ತಿಳಿಸಲು ಪ್ರಯತ್ನಿಸಿದ್ದೇನೆ.

ಪುಸ್ತಕ ಮತ್ತು ಮನುಷ್ಯನ ಸ್ನೇಹ ತುಂಬಾ ಗಾಢವಾದದ್ದು. ಮನುಷ್ಯನ ಭಾವನೆಗಳನ್ನು ಹಂಚಿಕೊಳ್ಳಬಲ್ಲ ಹಾಗೂ ಸ್ನೇಹದ ಹಂಬಲವನ್ನು ತುಂಬಿಕೊಡುವ ಒಂದು ಸಾಧನವಾಗಿದೆ. ಇವು ಕೊಡುವ ನೆಮ್ಮದಿ ಮತ್ತು ಸಂತೋಷಕ್ಕೆ ಸಾಟಿಯಿಲ್ಲ. ಪುಸ್ತಕ ಸಂಸ್ಕೃತಿಗೆ ಈ ಮೇಳ ಆರಂಭವಾಗಿರುವುದು ಒಂದು ಸಂತೋಷದ ವಿಷಯವಾಗಿದೆ.

ಒಂದೇ ಭಾಷೆಯ ಪುಸ್ತಕಗಳು ಪ್ರದರ್ಶನಗೊಂಡು ಮಾರಾಟವಾಗುತ್ತಿರುವುದು ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಎಂದು ಹೇಳುತ್ತಾರೆ. ಈ ಮೇಳದಲ್ಲಿ ಸುಮಾರು ೯೪ ಪುಸ್ತಕ ಮಳಿಗೆಗಳಿದ್ದವು. ಈ ಪುಸ್ತಕ ಮಳಿಗೆಗಳಲ್ಲಿ ಗೀತಾ ಬುಕ್ ಹೌಸ್, ಐಬಿಎಚ್ ಪ್ರಕಾಶನ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಶ್ರೀ ರಾಮಕೃಷ್ಣ ಪ್ರಕಾಶನ, ಅಕ್ಷರ ಪ್ರಕಾಶನ, ತರಳಬಾಳು ಪ್ರಕಾಶನ, ಕನ್ನಡ ವಿಶ್ವ ವಿದ್ಯಾನಿಲಯ, ಭಾರತೀ ಪ್ರಕಾಶನ, ಕೇಂದ್ರ ಸಾಹಿತ್ಯ ಅಕಾಡೆಮಿ, ಕ್ರೈಸ್ಟ ಕಾಲೇಜ್ ಕನ್ನಡ ಸಂಘ ಹೀಗೆ ಅನೇಕ ಪುಸ್ತಕ ಮಳಿಗೆಗಳು ಭಾಗವಹಿಸಿದ್ದವು. ಈ ಮಳಿಗೆಗಳಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯಿಂದ ಹಿಡಿದು ಜೈನಧರ್ಮದ, ವಚನಕಾರರ ಹಾಗೂ ಆಧುನಿಕ ಕವಿತೆಗಳು, ಕಾದಂಬರಿಗಳು, ನಾಟಕಗಳು, ಜೀವನ ಚರಿತ್ರೆಗಳು, ವಿಜ್ಞಾನದ ಪುಸ್ತಕಗಳು, ಮಕ್ಕಳ ಪುಸ್ತಕಗಳು ರಿಯಾಯತಿ ದರದಲ್ಲಿ ದೊರೆಯುತ್ತಿದ್ದವು. ಪುರಾಣನಾಮ ಭಾರತ ಕೋಶ, ರತ್ನ ಕೋಶಗಳನ್ನು ಹೆಚ್ಚು ಜನಕೊಳ್ಳುತ್ತಿದ್ದರು. ಆ ಪುಸ್ತಕಗಳ ರಾಶಿಯನ್ನು ನೋಡಿದರೆ ಕನ್ನಡ ಸಾಹಿತ್ಯವೇ ಇಲ್ಲಿದೆಯೇನೋ ಎಂಬಂತೆ ಭಾಸವಾಗುತ್ತಿತ್ತು.

ಇಲ್ಲಿನ ಮತ್ತೊಂದು ಪ್ರಮುಖವಾದ ಆಕರ್ಷಣೆಯೆಂದರೆ ಚಂದ್ರಶೇಖರ್‌ರವರ ಹಳೆಯ ದಾಖಲೆಗಳ, ನಾಣ್ಯಗಳ, ಅಪರೂಪದ ಹಸ್ತ ಪ್ರತಿಗಳ ಮತ್ತು ತಾಳೆಗರಿಗಳ ಪ್ರದರ್ಶನ. ಲೇಖಕರ ಕೃತಿಗಳಲ್ಲದೆ ಅಕ್ಷರ - ಚಿಂತನಮಾಲೆಯ, ಮನೋಹರ ಗ್ರಂಥಮಾಲೆಯ ಪುಸ್ತಕಗಳು ಅನೇಕರ ಗಮನ ಸೆಳೆದವು.

ಈ ಪುಸ್ತಕ ಮೇಳವು ಕನ್ನಡ ನಾಡಿನ ಸಾಹಿತ್ಯದ ವಿವಿಧ ಮುಖಗಳ ಬೆಳವಣಿಗೆಯ ಪ್ರಮುಖ ಹೆಜ್ಜೆಗಳನ್ನು ಸೂಚಿಸುತ್ತಿತ್ತು. ಕನ್ನಡ ಪುಸ್ತಕ ಪ್ರಾಧಿಕಾರವು ನಿಜಕ್ಕೂ ಈ ಮೇಳವನ್ನು ಬಹಳ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಕನ್ನಡ ಪುಸ್ತಕ ಪ್ರೇಮಿಗಳಿಗೆ ಉಪಯುಕ್ತದ ಮೇಳವಾಗಿತ್ತು. ಈ ಮೇಳದಲ್ಲಿ ವಿದ್ಯಾರ್ಥಿಗಳಿಗೆ ವಿಚಾರ ಸಂಕಿರಣ, ರಸಪ್ರಶ್ನೆ, ಪ್ರಬಂಧ ಸ್ಪರ್ಧೆ, ಆಶು ಭಾಷಣ, ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಿ ಯುವಕರಲ್ಲಿ ಪುಸ್ತಕ ಪ್ರೀತಿ ಮೂಡುವಂತೆ ನಡೆಸಿಕೊಟ್ಟಿದ್ದರು.

ಸಾರ್ವಜನಿಕರು ನಾಟಕ, ಸಾಕ್ಷ್ಯಚಿತ್ರ ಪ್ರದರ್ಶನ, ಸಮೂಹಗಾನ, ಯಕ್ಷಗಾನ ಮುಂತಾದ ಕಾರ್ಯಕ್ರಮಗಳಿಂದ ಸಂತೋಷ ಪಟ್ಟರು. ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುತ್ತಿದ್ದರಿಂದ ಹೆಚ್ಚು ಹೆಚ್ಚು ಜನರು ಪುಸ್ತಕಗಳನ್ನು ಕೊಂಡುಕೊಳ್ಳುತ್ತಿದ್ದರು.

ಈ ಮೇಳದಲ್ಲಿ ನಮ್ಮ ಕ್ರೈಸ್ಟ್ ಕಾಲೇಜಿನ 'ಕನ್ನಡ ಸಂಘ'ದ ಮಳಿಗೆ ಇದ್ದದ್ದು ನಮಗೆ ಹೆಮ್ಮೆ ಎನಿಸಿತು. ಅಭಿರುಚಿ ನಿರ್ಮಾಣದಂತಹ ಕನ್ನಡ ಕೆಲಸಗಳಲ್ಲಿ ನಮ್ಮ ಕಾಲೇಜು ಮುಂಚೂಣಿಯಲ್ಲಿದೆ ಎಂದು ಪುಸ್ತಕ ಮೇಳಕ್ಕೆ ಬಂದಿದ್ದ ಸಾರ್ವಜನಿಕರ ಮಾತುಕತೆಗಳಲ್ಲಿ ಕೇಳಿ ಬಂದದ್ದು ಒಂದು ವಿಶೇಷ.

ದೂರದರ್ಶನದಲ್ಲಿ ಉರ್ದು ಪ್ರಸಾರ ಸುದ್ದಿ ಪ್ರಾರಂಭವಾದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಭೀಕರ ಗಲಭೆ ಪ್ರಾರಂಭವಾಗಿದ್ದರಿಂದ ಒಂದು ದಿನ ಮೊದಲೇ 'ಪುಸ್ತಕ ಮೇಳ'ವನ್ನು ನಿಲ್ಲಿಸಬೇಕಾಯಿತು. ಒಟ್ಟಿನಲ್ಲಿ 'ಕನ್ನಡ ಪುಸ್ತಕ ಮೇಳ - ೯೪' ಕ್ಕೆ ಹೋಗಿದ್ದರಿಂದ ಕನ್ನಡದಲ್ಲಿ ಆಗಿರುವ ಸಾಧನೆಯ ಪರಿಚಯವಾಯಿತು. ಇದು ಕನ್ನಡ ಸಂಸ್ಕೃತಿಯ ಶ್ರೀಮಂತಿಕೆಯನ್ನು ಸೂಚಿಸುವ ಮೇಳವಾಗಿ ಸಾರ್ವಜನಿಕ ಸ್ಮೃತಿಪಟಲದಲ್ಲಿ ಉಳಿಯುವಂತಾಯಿತು. ●

ರಸತೀರ್ಥದಲಿ ಮಿಂದವಗೆ ಭವದ ಭಯವೇಕೆ
ಪುಣ್ಯದಾಲಯ ಪೃಥ್ವಿ ಸ್ವರ್ಗವದು ಪರದೇಶಿ

- ಕುವೆಂಪು
ಪಕ್ಷಿಕಾಶಿ

ಚಲಿಸದ ಮೋಡಗಳು

ಲಲಿತ. ಆರ್.
ಮೊದಲನೆಯ ಪದವಿ

ನಾನು 'ಸವಿತ'. ಆದರೆ ಬಾಳಿನಲ್ಲಿ ಸವಿಯನ್ನು ಕಾಣದ ನಿರ್ಭಾಗ್ಯಳು. ಹುಟ್ಟಿದಾಗಲೆ ತಾಯಿಯನ್ನು ಕಳೆದುಕೊಂಡ ನತದೃಷ್ಟಳು. ಆದರೆ ನನಗೆ ಯಾರು ಇಂತಹ ಹೆಸರಿಟ್ಟರೆಂದು ತಿಳಿಯದು. ಏಕೆಂದರೆ ನನ್ನ ಬಾಳಿನ ಎಲ್ಲಾ ಘಟನೆಗಳು ನನ್ನ ಹೆಸರಿಗೆ ವಿರುದ್ಧವಾದವು. ನನ್ನನ್ನು ಸಾಕಿದವ ನನಗೆ ಜನ್ಮಕೊಟ್ಟರೂ ತಂದೆಯಾಗಲು ಪ್ರಯತ್ನಿಸಿದವನಲ್ಲ. ನಾನು ಹಾಗೂ ಹೀಗೂ ದೊಡ್ಡವಳಾದೆ. ಹೆಚ್ಚೇನು ಓದದ ಕಾರಣ ಚಿಕ್ಕ ಕಂಪನಿಯಲ್ಲಿ ಬಟ್ಟೆ ಹೊಲಿಯುವ ಕೆಲಸ ಸಿಕ್ಕಿತು. ತಿಂಗಳಿಗೆ ಆರುನೂರು ಸಂಬಳ. ಕಂಪನಿ ಮನೆಯಿಂದ ಹತ್ತಿರ ಇದ್ದದ್ದರಿಂದ ನೂರು ರೂ. ಬಸ್ಸಿಗೆ ಸಾಕಾಗುತ್ತಿತ್ತು. ಮಿಕ್ಕುತ್ತಿದ್ದ ಐದು ನೂರು ರೂಪಾಯಿಗಳಿಂದ ಸಂಸಾರ ನಡೆಸಲು ಕಷ್ಟವಾಗುತ್ತಿತ್ತು.ನಾವಿಬ್ಬರೆ ಇದ್ದದ್ದರಿಂದ ಸಂಸಾರ ಹೇಗೂ ನಡೆಸಬಹುದಿತ್ತು. ಆದರೆ ನನಗೆ ಜನ್ಮ ಕೊಟ್ಟ ತಪ್ಪಿಗಾಗಿ ಹೊಡೆದು ಬಡಿದು ನನ್ನಿಂದ ಹಣ ಕಿತ್ತುಕೊಂಡು ಸಾರಾಯಿ ಕುಡಿಯುತ್ತಿದ್ದ ನನ್ನ ಅಪ್ಪ ನನಗೆ ಇಪ್ಪತ್ತೈದು ವರುಷಗಳಾದರೂ ನನ್ನ ತಂದೆ ನನ್ನ ಮದುವೆಯ ವಿಷಯವಾಗಿ ಯಾವ ರೀತಿಯ ಚಿಂತೆಯನ್ನು ಮಾಡಲಿಲ್ಲ. ನನ್ನ ಜೊತೆಯವರಿಗೆಲ್ಲಾ ಮದುವೆಯಾಗಿತ್ತು. ಆದರೆ ನನ್ನ ಜೀವನದಲ್ಲಿ ಮದುವೆ ಎಂಬ ಪದಕ್ಕೆ ಯಾವ ಅರ್ಥವೂ ಇರಲಿಲ್ಲ. ಬಹುಶಃ ನನ್ನ ತಾಯಿ ಬದುಕಿದ್ದಿದ್ದರೆ ನನಗೂ ಮದುವೆಯಾಗಬಹುದಿತ್ತೇನೋ .... ನಾನೇ ಯಾರನ್ನಾದರೂ ಹುಡುಕಿ ಓಡಿಹೋಗಲು ಧೈರ್ಯ ನನ್ನಲ್ಲಿರಲಿಲ್ಲ.

ಕೆಲವೊಮ್ಮೆ ಜೀವನವೇ ಬೇಡವೆನಿಸುತ್ತಿತ್ತು. ನನ್ನ ಕಷ್ಟಗಳನ್ನು ಯಾರಲ್ಲಿ ತೋಡಿಕೊಳ್ಳಲಿ? ಪ್ರೀತಿಯನ್ನಂತೂ ಹುಟ್ಟಿನಿಂದಲೇ ಕಾಣದವಳು. ಬಹುಶಃ ನನ್ನ ತಾಯಿ ಅವಳ ಜೊತೆಯೇ ಅದನ್ನು ತೆಗೆದುಕೊಂಡು ಹೋದಳೆನಿಸುತ್ತದೆ. ನಾನು ಹಸಿವಿನಿಂದ ಬಳಲಿದರೂ ಅಪ್ಪನಿಗೆ ಕನಿಕರ ಹುಟ್ಟುತ್ತಿರಲಿಲ್ಲ. ತನಗೆ ಹಣ ಬೇಕಾದರೆ ಮಾತ್ರ ನನ್ನನ್ನು ಕಾಡಿ ಪಡೆಯುತ್ತಿದ್ದ. ನನಗೆ ಅವನು ತೋರುತ್ತಿದ್ದುದು ಅದೊಂದೇ ರೀತಿಯ ಪ್ರೀತಿ. ಅದಕ್ಕಾಗಿಯೇ ನನ್ನನ್ನು ಕೊಲ್ಲದೆ ಹಾಗೇ ಬಿಟ್ಟಿದ್ದು ಅನ್ನಿಸುತ್ತೆ. ನನಗೂ ಈ ಅರ್ಥವಿಲ್ಲದ ಜೀವನ ಬೇಡವೆನಿಸುತ್ತಿತ್ತು. ಅಪ್ಪನಿಗಂತೂ ಈ ಜನ್ಮದಲ್ಲಿ ಕನಿಕರ ಬರುವಂತಿರಲಿಲ್ಲ.

ಇತ್ತೀಚೆಗೆ ಅಪ್ಪನ ಕಾಟ ಅತಿಯಾಗ ತೊಡಗಿತು. ಎಷ್ಟು ಹೇಳಿದರೂ ಅರ್ಥ ಮಾಡಿಕೊಳ್ಳುತ್ತಿರಲಿಲ್ಲ, ಆ ಪ್ರಾಣಿ. ಎಷ್ಟೋ ದಿನ ಹೊಟ್ಟೆಗೆ ಬರೀ ನೀರು ಇರುತ್ತಿತ್ತು. ಕಂಪನಿಯಲ್ಲಿ ಸರಿಯಾಗಿ ಕೆಲಸ ಮಾಡಲಾಗದೆ ಮೇಲಾಧಿಕಾರಿಯಿಂದ ದಿನವೂ ಬೈಗುಳ ಕೇಳಬೇಕಾಗಿ ಬರತೊಡಗಿತು.

ಒಂದು ದಿನ ರಾತ್ರಿ ಅಪ್ಪ ಎಂದಿನಂತೆ ಹಣಕ್ಕಾಗಿ ನನ್ನನ್ನು ಕಾಡತೊಡಗಿದ. ನನ್ನಲ್ಲಿ ಬಿಡುಗಾಸಿಲ್ಲವೆಂದರೂ ಕೇಳದೆ ಕೈಗೆ ಸಿಕ್ಕದ್ದನ್ನು ತೆಗೆದು ನನ್ನನ್ನು ಹೊಡೆಯಲು ಪ್ರಾರಂಭಿಸಿದ. ದಿನವೂ ಅವನು ಕೊಡುತ್ತಿದ್ದ ಹಿಂಸೆ ತಡೆಯಲಾಗದೆ ಕೈಯಲ್ಲಿದ್ದ ಹಣ ಕೊಟ್ಟು ಬಿಡುತ್ತಿದ್ದೆ. ಆದರೆ ಅಂದು ನನ್ನ ಬಳಿ ಒಂದು ಕಾಸೂ ಇರಲಿಲ್ಲ. ಅವನ ಹೊಡೆತವನ್ನು ಸಹಿಸಲು ನನ್ನಿಂದಾಗದೆ ಸಹನೆ ಮೀರಿತ್ತು. ಅಲ್ಲಿಯೇ ಬಿದ್ದಿದ್ದ ಕೋಲನ್ನು ಕೈಗೆತ್ತಿಕೊಂಡು ಅವನ ತಲೆಯ ಮೇಲೆ ದೊಪ್ಪನೆ ಬಡಿದೆ. ಅವನ ತಲೆಯಿಂದ ರಕ್ತ ಚಿಮ್ಮತೊಡಗಿತು. ನೋವಿನಿಂದ ಅರಚಲು ತೊಡಗಿದ, ನಾನು ಏನು ಮಾಡಿದೆ ಎಂಬ ಪ್ರಜ್ಞೆ ಇರಲಿಲ್ಲ. ಭಯದಿಂದ ಅಳಲು ಪ್ರಾರಂಭಿಸಿದೆ. ಅಷ್ಟರಲ್ಲೇ ನೆರೆಮನೆಯವರು ಏನಾಯಿತೆಂದು ಗಾಬರಿಯಿಂದ ಓಡಿಬಂದರು. ಅಷ್ಟರಲ್ಲಿ ನನ್ನ ಅಪ್ಪ ಸತ್ತು ನೆಲದ ಮೇಲೆ ಬಿದ್ದಿದ್ದ. ನಾನು ಸಹಿಸುತ್ತಿದ್ದ ಹಿಂಸೆ ಸಾಲದೆಂಬಂತೆ ನನ್ನನ್ನು ಪೊಲೀಸ್ ಸ್ಟೇಷನ್, ಕೋರ್ಟು ಎಂದು ಎಳೆದುಕೊಂಡು ಹೋದರು.

ನಾನು ಮಾಡಿದ ಹತ್ಯೆಗಾಗಿ ನನಗೆ ಹತ್ತು ವರ್ಷಗಳ ಕಾಲ ಜೈಲ್ ಆಯಿತು. ನಾನು ಚಿಕ್ಕಂದಿನಿಂದ ಹಿಂಸೆಯನ್ನು ಸಹಿಸಿಕೊಂಡು ಬಂದಿದ್ದರಿಂದ ಇದೇನೂ ಭೀಕರ ಅನಿಸಲಿಲ್ಲ. ನನ್ನ ಪಾಲಿಗೆ ದೇವರು ಎಂದೋ ಸತ್ತಿದ್ದರಿಂದ ಅವನನ್ನು ದೂಷಿಸಲು ಮನ ಒಪ್ಪಲಿಲ್ಲ. ನಾನು ಸೆರೆಮನೆಯಲ್ಲಿ ಕೊಳೆಯುತ್ತಿದ್ದರೂ ದುಷ್ಟನನ್ನು ಕೊಂದ ಆತ್ಮ ಗೌರವ ನನಗಿತ್ತು. ನನ್ನ ದುಃಖಿದ ಜೀವನಕ್ಕೆ 'ಸುಖ' ಕೊನೆಗೂ ಬರಲಿಲ್ಲ.

ನಾನು ಕಂಡ ಕನ್ನಡ ಸಂಘ

ಡಾ ॥ ಗೋವಿಂದ ಹೆಗಡೆ
ವೈದ್ಯಾಧಿಕಾರಿ, ದಾಸನಕೊಪ್ಪ, ಉ. ಕ.

ನಾಲ್ಕು ವರ್ಷಗಳ ಹಿಂದಿನ ಮಾತು. ನಮ್ಮ ಪ್ರದೇಶದವರೇ ಆದ, ತಕ್ಕಷ್ಟು ಹೆಸರು ಮಾಡಿರುವ ಕವಿಯೊಬ್ಬರಿಗೆ ನನ್ನನ್ನು ಪರಿಚಯಿಸಿದ ಮಿತ್ರರು 'ಈತ ಡಾ ....' ಎಂದರು. ಆ ಕವಿ ತಮ್ಮ ಪರಿಚಯದ ಡಾಕ್ಟರ್‌ಗಳ ಬಗ್ಗೆ ವೈದ್ಯಕೀಯ ವಿದ್ಯಾರ್ಥಿಗಳ ಬಗ್ಗೆ ಹೇಳ ತೊಡಗಿದಾಗ ನಾನು ಮಾತನ್ನು ಸಾಹಿತ್ಯ ದತ್ತ ಎಳೆದೆ. 'ನನಗೆ ಸಾಹಿತ್ಯದಲ್ಲಿ ಆಸಕ್ತಿ ; ನಿಮ್ಮ ಸಂಕಲನ ಓದಿದ್ದೇನೆ' ಎಂದೆ. 'ಆಕಾಶವಾಣಿಯಲ್ಲಿ ನನ್ನ ಕವನಗಳು ಪ್ರಸಾರವಾಗಿದೆ. ಪತ್ರಿಕೆಗಳಲ್ಲಿ ಕತೆ - ಕವನಗಳು ಬೆಳಕು ಕಂಡಿವೆ' ಎಂದೆ. ಆತ 'ಇಂಪ್ರೆಸ್' ಆದಂತೆ ಕಾಣಲಿಲ್ಲ. ಕೊನೆಯಲ್ಲಿ 'ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಕವನ ಸ್ಪರ್ಧೆಯಲ್ಲಿ ನನಗೆ ಎರಡು ಸಲ ಬಹುಮಾನ ಬಂದಿದೆ' ಎಂದೆ. ಆತ ಇದ್ದಕ್ಕಿದ್ದಂತೆ ಚುರುಕಾದರು. 'ಈಗ.... ನಲ್ಲಿ ಕವಿಗೋಷ್ಠಿ ಇದೆ. ನಂದೇ ಅಧ್ಯಕ್ಷತೆ. ಖಂಡಿತ ಬನ್ನಿ. ನಮ್ಮ ಭಾಗದ ಕವಿಗಳ ಪರಿಚಯ ಆಗುತ್ತೆ. ನೀವೂ ಕವನ ಓದುವಿರಂತೆ' ಎಂಬ ಆಹ್ವಾನವನ್ನೂ ನೀಡಿದರು !

'ಕನ್ನಡ ಸಂಘ' ಸಾಹಿತಿಗಳ - ಸಾಹಿತ್ಯದ ಲೋಕಕ್ಕೆ ನನ್ನ 'ಪಾಸ್ ಪೋರ್ಟ್' ಆಗಿದ್ದುದು ಇದೇ ಮೊದಲಲ್ಲ.

೧೯೮೨ ರಲ್ಲಿ ಪ್ರಥಮ ಪಿ.ಯು.ಸಿ.ಯ ವಿದ್ಯಾರ್ಥಿಯಾಗಿ ಬೆಂಗಳೂರಿಗೆ ಬಂದವನ ಕೈಗೆ 'ಕನ್ನಡ ಸಂಘ' ಆ ಸಲದ ಬಹುಮಾನಿತ ಕವನಗಳ ಸಂಕಲನ ಕೈಗೆ ಸಿಕ್ಕಿದ್ದು ಆಕಸ್ಮಿಕವಾಗಿ. ಆಗೀಗ 'ಹುಕಿ' ಬಂದಾಗ ಗೀಚುವ, ಆ ದಾರಿಯಲ್ಲಿ ಅಂಬೆಗಾಲಿಡುತ್ತಿದ್ದವನಿಗೆ ಕ್ರೈಸ್ಟ್ ಕಾಲೇಜಿನ, ಕನ್ನಡ ಸಂಘದ ಪರಿಚಯ ಆಗಿದ್ದು ಹಾಗೆ.

ಮುಂದೆ ೧೯೮೬ ರಲ್ಲಿ ಬಹುಮಾನ ಗಳಿಸಿ, ಜನವರಿ ೩೧ರಂದು ಬಹುಮಾನ ವಿತರಣಾ ಸಮಾರಂಭಕ್ಕಾಗಿ ಕ್ರೈಸ್ಟ್ ಕಾಲೇಜಿನ ಮೆಟ್ಟಿಲು ತುಳಿದವನನ್ನು ಬರಮಾಡಿಕೊಂಡಿದ್ದು ಗಾಳಿಯಲ್ಲೇ ಇದ್ದ ಸಾಹಿತ್ಯದ ಕಂಪು....

ಡಾ ॥ ಬಿ.ಸಿ. ರಾಮಚಂದ್ರ ಶರ್ಮರ ಮೋಡಿ ಹಾಕುವ ಮಾತು, ಪ್ರೊ ॥ ರಂ. ಶ್ರೀ. ಮುಗಳಿ ಹಸ್ತಾಕ್ಷರ ನೀಡುತ್ತ ಹಾರಿಸಿದ ಚಟಾಕಿ, ಕನ್ನಡ ಸಂಘದ ಆಧಾರ ಸ್ತಂಭಗಳೇ ಆದ ಶ್ರೀ ಚಿ. ಶ್ರೀನಿವಾಸ ರಾಜು, ಪ್ರೊ ॥ ರಾಮಕೃಷ್ಣ ರಾವ್‌ರ ಆತ್ಮೀಯ ಮಾತುಗಳು, ಇನ್ನು ಕನ್ನಡ ಸಾಹಿತ್ಯದಲ್ಲಿ ಹೊಸ ದನಿಯಾಗಲಿದ್ದ ಶ್ರೀ ಅಬ್ದುಲ್ ರಶೀದ್ ಮತ್ತು ಗುರುದತ್ ಟಿ.ಎನ್. ಗಂಗಾಧರಯ್ಯ, ಗಾಯತ್ರಿ ಬಿ.ಎಸ್. ಇವರೆಲ್ಲರ ಪರಿಚಯ, ರಶೀದ್ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ .....

ಮುಂದೆ ೧೯೮೭ ರಲ್ಲಿ ಎರಡನೇ ಬಾರಿಗೆ ಬಹುಮಾನ ಗಳಿಸಿ 'ಕುವೆಂಪು'ರ ಮನೆಯಲ್ಲಿ ನಡೆದ ಸಮಾರಂಭದಲ್ಲಿ ಅವರ ಕೈಗಳಿಂದ ಬಹುಮಾನ ಸ್ವೀಕರಿಸಿದ್ದು, ಎಸ್. ಮಂಜುನಾಥರ 'ಹಕ್ಕಿಪಲ್ಟಿ' ಕವನ ಸಂಕಲದ ಬಿಡುಗಡೆ, ಗೆಳೆಯರಾದ ಸರ್ವಶ್ರೀ ಅಬ್ದುಲ್ ರಶೀದ್, ಕಮಲಾಕರ ಕಡವೆ, ಜಯರಾಂ ರಾಯಪುರ, ಗಂಗಾಧರಯ್ಯ, ಮೊಗಳ್ಳಿ ಗಣೇಶ್, ಗುರುದತ್ತರ ಮಿಲನ, ಕವಿ ಶ್ರೀ ಚಿಂತಾಮಣಿ ಕೊಡ್ಲೆಕೆರೆಯವರ ಅಧ್ಯಕ್ಷತೆಯಲ್ಲಿ 'ಗಂಗೋತ್ರಿ'ಯ 'ಗಾಂಧಿ ಕುಟೀರ'ದಲ್ಲಿ ನಡೆದ ಕವಿಗೋಷ್ಠಿ ....

ನಾನು ಮತ್ತೆ ಮತ್ತೆ ಮೆಲುಕುವ ಈ ಎಲ್ಲ ಅನುಭವ ಸಂಪತ್ತನ್ನು ನನಗೆ ತಂದು ಕೊಟ್ಟಿದ್ದು 'ಕನ್ನಡ ಸಂಘ'.

ನಿಜ, ಕನ್ನಡ ಸಂಘದ ಚಟುವಟಿಕೆಗಳು ಈ ಸ್ಪರ್ಧೆಗಳು ಮಾತ್ರವಲ್ಲ. ಅದರ ಸಾಧನೆಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಸಿಗೋದು ಸಂಘದ 'ಪ್ರಕಾಶನ' ಚಟುವಟಿಕೆಗೆ. ನೂರು ಪುಸ್ತಕಗಳನ್ನು ಹೊರ ತಂದಿರುವ ಸಂಘ ಇಲ್ಲೂ 'ವಿಭಿನ್ನ' ಅನ್ನಿಸುವುದಕ್ಕೆ ಕಾರಣಗಳಿವೆ.

ಶ್ರೀ ಸು. ರಂ. ಎಕ್ಕುಂಡಿಯವರ 'ಬಕುಲದ ಹೂವುಗಳು', ಡಾ ಎಚ್.ಎಸ್. ರಾಘವೇಂದ್ರ ರಾವ್ 'ನಿಲುವು', ರಾಮಚಂದ್ರ ಶರ್ಮರ 'ದೆಹಲಿಗೆ ಬಂದ.....' ಪುಸ್ತಕಗಳನ್ನು ಪ್ರಕಟಿಸಿದ ಸಂಘ. ಎಚ್.ಎಸ್. ಶಿವಪ್ರಕಾಶರ, ಎಸ್. ಮಂಜುನಾಥರ ಮೊದಲ ಕವನ ಸಂಕಲನಗಳನ್ನು ಹೊರ ತಂದಿದೆ. ಪ್ರತಿಭಾರ 'ರಸ್ತೆಯಂಚಿನ ಗಾಡಿ'ಯಂತೆಯೇ ಸುಧಾ ಶರ್ಮಾರ 'ಒದ್ದೆ ಕಣ್ಣುಗಳ ಪ್ರೀತಿ' ಬೆಳಕು ಕಂಡಿದೆ. ಎಚ್ಚೆನ್‌ರ 'ತೆರೆದ ಮನ' ಬರುವ ಮೊದಲೇ, ಇನ್ನಿಲ್ಲವಾದ ಪ್ರತಿಭೆ ಕಾ.ಸು. ರಾಮಚಂದ್ರರ 'ಕೃಷ್ಣ ಸಂದೇಶ' ಹೊರ ಬಂದಿದೆ. ಅಂದರೆ ಕೇವಲ ಖ್ಯಾತ ನಾಮರ ಪುಸ್ತಕಗಳನ್ನೇ ಅಲ್ಲದೆ ಎಳೆಯರ ಗ್ರಂಥಗಳನ್ನು ಬೆಳಕಿಗೆ ತರುವ ಪ್ರಶಂಸನೀಯ ಕೆಲಸ ಸಂಘದ್ದು. ಜೊತೆಗೆ, ಕತೆ - ಕಾದಂಬರಿಗಳ 'ಜನಪ್ರಿಯ' ದಾರಿಯನ್ನು ತುಳಿಯದೆ ತನ್ನ ಪ್ರಕಟಣೆಗಳ ಗುಣಮಟ್ಟದ ಬಂಡವಾಳದಿಂದಲೇ ಈ ಪುಸ್ತಕಗಳನ್ನು ಜನಪ್ರಿಯಗೊಳಿಸಿದ ಸಂಘದ ಸಾಧನೆ ಚರಿತ್ರಾರ್ಹವೆಂದರೆ ತಪ್ಪಿಲ್ಲ.

ಇನ್ನು ಸಂಘದ ಕವನ - ಲೇಖನ - ಭಾಷಾಂತರ ಸ್ಪರ್ಧೆಗಳ ಮೂಲಕ ಬೆಳಕಿಗೆ ಬಂದಿರುವ - ಬರುತ್ತಿರುವ ಬರಹಗಾರ ತಂಡ ನಾಡಿನ ತುಂಬ ಇದೆ. ಇವರು ಪರಸ್ಪರ ಭೆಟ್ಟಿಯಾದಾಗ ಸಂಘದ ಹೆಸರಿನಲ್ಲಿ ಪರಿಚಯಿಸಿಕೊಳ್ಳುವ/ನೆನಪುಗಳನ್ನು ಮೆಲುಕುವ ಪರಿ ಸಂಘಕ್ಕೆ ಹೆಮ್ಮೆ ತರುವಂಥದ್ದು. ನನ್ನ ದೃಷ್ಟಿಯಲ್ಲಿ ಹೆಚ್ಚು ಮೌಲಿಕವಾದ, ಕನ್ನಡದ ಹಲವಾರು ತರುಣ ಮನಸ್ಸುಗಳಲ್ಲಿ ಹೊಸ ಹುಮ್ಮಸ್ಸನ್ನು ಕನ್ನಡದ ಪ್ರೀತಿಯಲ್ಲಿ ಹೊಮ್ಮಿಸುವ ಕೆಲಸ ಇದು.

ಕನ್ನಡ ಸಂಘದ ಈ ಎಲ್ಲ ಚಟುವಟಿಕೆಗಳ ಹಿಂದೆ ಹಲವರ ಪ್ರೀತಿ, ಪರಿಶ್ರಮ ಇದೆ. ಆಯಾ ಕಾಲದ ಪ್ರಿನ್ಸಿಪಾಲರುಗಳ, ಅಧ್ಯಾಪಕರ, ವಿದ್ಯಾರ್ಥಿಗಳ ಸಾಮೂಹಿಕ - ಸಾಮಾಜಿಕ ಶ್ರಮ - ಶ್ರದ್ಧೆಗಳಿಲ್ಲದೆ ಈ ಕೆಲಸ ಆಗುವಂಥದ್ದಲ್ಲ. ಇವರೆಲ್ಲರಿಗೆ ನನ್ನ ಪ್ರೀತಿ ಪೂರ್ವಕ ಕೃತಜ್ಞತೆ ಸಲ್ಲುತ್ತದೆ.

ಇವೆಲ್ಲದರ ಕೇಂದ್ರದಲ್ಲಿ ಈ ಸಂಘದ 'ಆಂಕರ್' (Anchor) ಆಗಿ ನಮ್ಮ ಪ್ರೀತಿಯ 'ರಾಜು ಮೇಷ್ಟ್ರು' ಇದ್ದಾರೆ. ಆ ಬಗ್ಗೆ ಬರೆಯದೆ ಸಂಘದ ಬಗೆಗಿನ ಯಾವುದೇ ಬರಹ ಪೂರ್ಣವೆನಿಸಲಾರದು.

'ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ'ದ ಪ್ರಾಣ ಶಕ್ತಿಯೇ ಆಗಿದ್ದ ದಿ ಟಿ.ಎಸ್. ವೆಂಕಣ್ಣಯ್ಯ ಮತ್ತು ದಿ ಎ.ಆರ್. ಕೃಷ್ಣಶಾಸ್ತ್ರಿಗಳು ಆರಂಭಿಸಿದ ಈ ಕನ್ನಡದ 'ಪರಿಚಾರಿಕೆ' ದಿ. ಜಿ.ಪಿ. ರಾಜರತ್ನಂರ ಮೂಲಕ ಮುಂದುವರಿದು ಈಗ ಶ್ರೀ ಚಿ. ಶ್ರೀನಿವಾಸರಾಜು ರಲ್ಲಿ ಉತ್ತರಾಧಿಕಾರಿಯನ್ನು ಕಂಡಿದೆ - ಎಂದೇ ನನ್ನ ಭಾವನೆ.

ಕ್ರೈಸ್ಟ್ ಕಾಲೇಜಿನ ಬೆಳ್ಳಿ ಹಬ್ಬದ ಈ ಶುಭ ಸಂದರ್ಭದಲ್ಲಿ ನನ್ನ ಹಾರೈಕೆ ಇದು : ಕನ್ನಡ ಸಂಘ ಹೀಗೆಯೇ ಬೆಳೆಯುತ್ತ, ಕನ್ನಡದ ಮನಸ್ಸುಗಳನ್ನು ಅರಳಿಸುತ್ತ, ಬೆಳೆಯುತ್ತಲೇ ಇರಲಿ. ಸಂಘಕ್ಕೆ ಎಲ್ಲ ಶುಭಗಳೂ ಇರಲಿ. 'ನಾನು ಕನ್ನಡ ಸಂಘದ ನೆಲದಲ್ಲಿ ಬೆಳಕಿನ ಬೆಳೆಯನ್ನು ಕಂಡವ - ಕಾಳುಗಳನ್ನು ಉಂಡವ' ಎಂಬ ಹೆಮ್ಮೆ - ಸಂತಸದ ಕ್ಷಣಗಳನ್ನು ನನಗೆ, ನನ್ನಂತಹ ನೂರಾರು ಜನರಿಗೆ ಸಂಘ ಉಳಿಸುತ್ತಿರಲಿ.

ಬಹುಮುಖಿ ಕಥೆಯ ಬಹುಮುಖಿ ಪರಿಚ್ಛೇದ

ಕಳೆದ ಕೆಲವು ದಶಕಗಳ ಕನ್ನಡ ಬರವಣಿಗೆಯ ಕಥೆ ಬಹುಮುಖಿಯಾದದ್ದು. ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಹೊರತಂದ ಪ್ರಕಟಣೆಗಳು - ಆ ಕಥೆಯ ಒಂದು ಬಹುಮುಖ್ಯ ಪರಿಚ್ಛೇದ. ಆ ಪರಿಚ್ಛೇದದಲ್ಲಿ ನವ್ಯಯುಗದ ಮತ್ತು ಆನಂತರದ ಹಲವಾರು ಬರಹಗಾರರ ಗದ್ಯಪದ್ಯಗಳು ಸೇರ್ಪಡೆಯಾಗಿವೆ.

ಹೆಸರಾಂತರ ಬರಹಗಳನ್ನು ಹೊರತರುವುದರ ಜೊತೆ ಜೊತೆಗೆ ಚಿಗುರು ಪ್ರತಿಭೆಯ ಎಳೆಯರ ಗದ್ಯಪದ್ಯ ಬರಹಗಳನ್ನು ಬೆಳಕಿಗೆ ತರಲು ಈ ಸಂಸ್ಥೆ ಹಾಕಿಕೊಂಡ ಯೋಜನೆಗಳು ಅನುಕರಣೀಯ.

ಕ್ರೈಸ್ಟ್ ಕಾಲೇಜಿನವರು ಪ್ರಕಟಿಸುವ ಪುಸ್ತಕಗಳ ಹೊರ ಮೈ ಕೂಡ ಆಂದಿನಿಂದ ಇಂದಿನವರೆಗೂ ತನ್ನತನ ಉಳಿಸಿಕೊಂಡಿದೆ, ಬೆಳೆಸಿಕೊಳ್ಳುತ್ತಿದೆ.

೧೯೭೬ರಿಂದ ಇಲ್ಲಿಯ ತನಕ ನನ್ನ ಮೂರು ಕವಿತಾ ಗುಚ್ಛಗಳನ್ನು ಹೊರತಂದ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದವರಿಗೆ ನಾನು ವಿಶೇಷವಾಗಿ ಋಣಿ. ನನ್ನಂತಹ ಹಲವು ಬರಹಗಾರರ ಕೃತಜ್ಞತೆಗೆ ಪಾತ್ರವಾಗಿದೆ. ಆವರೆಲ್ಲರ ನಲ್ವರಕೆಗಳು ಈ ಸಂಸ್ಥೆಯೊಂದಿಗಿವೆ.

ಈ ಸಂಸ್ಥೆಯ ಸಾಧನೆಯ ಮುಖ್ಯ ಪ್ರಾಣರು ಗೆಳೆಯ ಶ್ರೀನಿವಾಸರಾಜು. ಅವರು ಶುರುಮಾಡಿರುವ ಈ ಜವಾಬ್ದಾರಿಯುತ ಕೆಲಸವನ್ನು ಮುಂದುವರೆಸುವ ವಾರಸುದಾರರು ಈ ಸಂಸ್ಥೆಗೆ ಬೇಕಾಗಿದ್ದಾರೆ. ಬಹುಶಃ ಅವರೀಗ ತಯಾರಾಗುತ್ತಿದ್ದಾರೆ.

ಎಚ್.ಎಸ್. ಶಿವಪ್ರಕಾಶ್

ಬೆಳ್ಳಿ ನೆನಪು

ಕ್ರೈಸ್ಟ್ ಕಾಲೇಜಿನಲ್ಲಿ ನಾನು ಕಳೆದ ಆ ದಿನಗಳು

ಎಂ.ಬಿ. ಪೊನ್ನಣ್ಣ
ವಾಣಿಜ್ಯ ವಿಭಾಗ

ಕಾಲೇಜು ಸೇರುವ ಹೊಂಗನಸ ಹೊತ್ತ ಆ ದಿನಗಳು! ನೂರಾರು ಆಸೆ ಆಕಾಂಕ್ಷೆಗಳ ಭಾರದ ಭಾವದಿಂದ, ಕೊಡಗಿನಿಂದ ಬೆಂಗಳೂರಿಗೆ ಬಂದು ಕ್ರೈಸ್ಟ್ ಕಾಲೇಜಿಗೆ ಸೇರಿದೆ. ೧೯೭೨ರಲ್ಲಿ ಬಿ.ಕಾಂ. ವಿದ್ಯಾರ್ಥಿಯಾಗಿದ್ದೆ. ಪ್ರಿನ್ಸಿಪಾಲರಾದ ರೆ. ಫಾ. ಮಾಣಿಜೈಲ್ಸ್ ಪ್ರೀತಿಯಿಂದ ಬರಮಾಡಿಕೊಂಡ ಮರೆಯಲಾಗದ ದಿನಗಳು.

ಈ ಕಾಲೇಜನ್ನು ಸೇರಿ ಏನೋ ಸಾಧಿಸಿದ ಹೆಮ್ಮೆ. ಆ ಕಾಲದಲ್ಲಿ ಬಿ. ಕಾಂ. ಸೇರುವುದು ; ಬಿ.ಕಾಂ. ಪಾಸು ಮಾಡುವುದೆಂದರೆ ಬ್ಯಾಂಕ್‌ನಲ್ಲಿ ಕೆಲಸ 'ಖಾಯಂ' ಎಂಬ ಮನೋಭಾವವಿತ್ತು. ಪಡೆದ ಪದವಿಗೂ ಬೆಲೆಯಿತ್ತು. ಶಾಲೆಯ ವಾತಾವರಣ, ಶಾಲೆಯಲ್ಲಿನ ತುಂಟಾಟ; ನಿಕ್ಕರ್ - ಚಡ್ಡಿ ಬಿಟ್ಟು, ಪ್ಯಾಂಟ್ - ಷರಟು ಧರಿಸಿ ಬೆಂಗಳೂರಿಗೆ ಬಂದಾಗ ಮನಸ್ಸಿಗೆ ಏನೋ ಕಸಿವಿಸಿ. ಬೆಂಗಳೂರಿನ ಆಂಗ್ಲ ವಾತಾವರಣಕ್ಕೆ ಹೊಂದಿಕೊಂಡು ಹೋಗುವುದು ಹೇಗಪ್ಪಾ ಎಂಬ ಅಳುಕು. ಪ್ರೀತಿಯ ತಂದೆ ತಾಯಿಯನ್ನು ಬಿಟ್ಟು ಬರುವ ದುಗುಡ ಒಂದು ಕಡೆ. ಬೆಂಗಳೂರಿನಲ್ಲಿ ಬಿ.ಕಾಂ. ಪದವಿ ಪಡೆದು, ಕ್ರಿಕೆಟ್ ಆಟದಲ್ಲಿ ಏನಾದರೂ ಸಾಧಿಸಬೇಕೆಂಬ ಹಂಬಲ ಇನ್ನೊಂದು ಕಡೆ. ನನ್ನ ಕಾಲೇಜು ದಿನಗಳಲ್ಲಿ ನಾನೊಬ್ಬ ಒಳ್ಳೆಯ ಕ್ರಿಕೆಟ್ ಆಟಗಾರನೂ ಆಗಿದ್ದೆ. ಕರ್ನಾಟಕವನ್ನು ಪ್ರತಿನಿಧಿಸಿದ್ದೆ. ನನ್ನ ಪ್ರಗತಿಗೆ ಸದಾ ಬೆಂಬಲ ನೀಡುತ್ತಿದ್ದವರು ರೆ. ಫಾ. ಮಾಣಿ ಜೈಲ್ಸ್. ಕಾಲೇಜ್ ಕ್ರಿಕೆಟ್ ತಂಡದ ಕ್ಯಾಪ್ಟನ್ ಆಗಿ ಕಳೆದ ದಿನಗಳನ್ನು ಮರೆಯಲು ಸಾಧ್ಯವಿಲ್ಲ.

ಕಾಲೇಜಿನ ತರಗತಿಗಳು ಪ್ರಾರಂಭವಾದವು. ಕ್ಲಾಸಿಗೆ ಚಾಚು ತಪ್ಪದೆ ಹಾಜರಾಗುತ್ತಿದ್ದೆ. ಕಾಲೇಜಿನಲ್ಲಿ ಯಾವ ನೂಕು ನುಗ್ಗಲು, ಗಲಾಟೆ, ಕಿರುಚಾಟ ಕೇಳಿ ಬರುತ್ತಿರಲಿಲ್ಲ. ಪ್ರಶಾಂತ ವಾತಾವರಣ, ಹುಡುಗಿಯರ ದರ್ಶನ ಭಾಗ್ಯವಂತೂ ಇಲ್ಲವೇ ಇಲ್ಲ. ಆಗ ಕೇವಲ ಹುಡುಗರಿಗೆ ಮಾತ್ರ ಕಾಲೇಜಿನಲ್ಲಿ ಪ್ರವೇಶ. ಕಾಲೇಜಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ (ಈಗ ಮೂರು ಸಾವಿರವನ್ನು ದಾಟಿದೆ) ಒಂದು ಸಾವಿರ ಕೂಡ ಇಲ್ಲ. ಆಗ ನನ್ನ ಅಧ್ಯಾಪಕರೆಂದರೆ ಮೇಜರ್ ಜೇಮ್ಸ್ ಅಲುಂಕಾರ ಶ್ರೀ ಎನ್. ಸೂರ್ಯನಾರಾಯಣ ಹಾಗೂ ಶ್ರೀ ಚಿ. ಶ್ರೀನಿವಾಸರಾಜು ಮುಂತಾದವರು. ನನ್ನ ಶಾಲಾ ದಿನಗಳಲ್ಲಿ ಕನ್ನಡ ಖ್ಯಾತ ಕಾದಂಬರಿಕಾರರಾದ ಶ್ರೀ ನಾರಾಯಣ ರಾವ್ (ಭಾರತೀಸುತ)ರಂತಹ ಕನ್ನಡ ಉಪಾಧ್ಯಾಯರಿದ್ದರು. ಅವರ ವಿದ್ಯಾರ್ಥಿಯಾಗಿ ಕನ್ನಡದ ಸವಿಯನ್ನು ಕಂಡು ಬಂದ ನಾನು, ಕ್ರೈಸ್ಟ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು ಹೇಗೋ, ಏನೋ ಎಂಬ ಕುತೂಹಲ. ನನ್ನ ಕುತೂಹಲ ಹುಸಿ ಹೋಗಲಿಲ್ಲ. ನನ್ನ ನೆಚ್ಚಿನ ಶ್ರೀ. ಚಿ. ಶ್ರೀನಿವಾಸರಾಜುರವರ ಶಾಂತ ಸ್ವಭಾವ, ವಿದ್ಯಾರ್ಥಿಗಳಿಗೆ ಹಿಡಿಸುವಂತೆ ಪಾಠ ಮಾಡುವ ಶೈಲಿ ಹಾಗೂ ಸ್ನೇಹಮಯ ನಡವಳಿಕೆ ಮನಸ್ಸಿಗೆ ನೆಮ್ಮದಿಯನ್ನು ತಂದಿತು. ಆಗ ಕಾಲೇಜಿನ ಎಲ್ಲಾ ಅಧ್ಯಾಪಕರು ಸೂಟು - ಬೂಟು ಧರಿಸಿ ಟಿಪ್ - ಟಾಪಾಗಿ ಬರುತ್ತಿದ್ದರು. ಅವರಲ್ಲಿ ಏನೋ ಒಂದು ರೀತಿಯ ಗತ್ತು. ವಿದ್ಯಾರ್ಥಿಗಳಿಗೆ ಅವರನ್ನು ಕಂಡರೆ ಭಯ ಮಿಶ್ರಿತ ಗೌರವ.

ನನ್ನ ಬೆಂಗಳೂರಿನ 'ಮನೆ' ಕಾಲೇಜ್ ಹಾಸ್ಟೆಲ್. ಆಗ ಹಾಸ್ಟಲ್ ಕಾಲೇಜಿನ ಎರಡನೆಯ ಮಹಡಿ. (ಇಂದಿನ ಬಿ.ಬಿ.ಎಮ್. ತರಗತಿಗಳು) ಹಾಸ್ಟೆಲ್ ಮತ್ತು ಕಾಲೇಜು ಒಂದೇ ಕಡೆ. ಅಂದಿನ ಒಡನಾಟದ ಓಡಾಟದ ದಿನಗಳು ಕಾಲೇಜಿನ ಹುಲ್ಲುಹಾಸಿನಂತೆ ಹಸುರಾಗಿದೆ. ಆಗ ಬಸ್ಸುಗಳ, ಕಾರುಗಳ ಓಡಾಟ ಅಪರೂಪ. ಸಿಟಿಗೆ ದೂರ, ಊರ ಹೊರಗೆ ಇರುವ ಕಾಲೇಜೆಂಬ ಕಾರಣದಿಂದ ಕ್ರೈಸ್ಟ ಕಾಲೇಜ್ ಅಂದರೆ ಯಾವ ಆಟೋರಿಕ್ಷಾದವನೂ ಬರಲು ಹಿಂಜರಿಯುತ್ತಿದ್ದನು. ಈಗಿರುವಂತೆ ಕ್ರೈಸ್ಟ ಕಾಲೇಜ್ ಸುತ್ತ ಮುತ್ತ ಯಾವ ಕಟ್ಟಡಗಳೂ ಇರಲಿಲ್ಲ. ದೂರದಲ್ಲಿ ಸುದ್ದಗುಂಟನ ಪಾಳ್ಯ ಚಿಕ್ಕದಾಗಿ ಕಾಣುತ್ತಿತ್ತು. ಬೆಂಗಳೂರಿನ ಪೂರ್ವಕ್ಕೆ ಕ್ರೈಸ್ಟ ಕಾಲೇಜೇ ಕೊನೆಯ ಕಟ್ಟಡ ಎನ್ನುವಂತಿತ್ತು.

ಈಗ ಕಟ್ಟಡಗಳ ಇಕ್ಕಟ್ಟಿನಿಂದ, ವಾಹನಗಳ ಓಡಾಟದ ಗದ್ದಲದಿಂದ ಆ ಪ್ರಶಾಂತ ಪರಿಸರ ಕೇವಲ ನೆನಪಾಗಿದೆ. ಎತ್ತ ನೋಡಿದರೂ ಕಾಂಕ್ರಿಟ್ ಅರಣ್ಯ ಆವರಿಸಿದೆ. ಈಗ

ಹುಡುಗರು ಮತ್ತು ಹುಡುಗಿಯರು ಕಾಲೇಜಿನಲ್ಲಿ ಓದುತ್ತಿದ್ದಾರೆ. ಸಮಾನತೆಯಿಂದ ನಡೆದುಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳ ಆತ್ಮವಿಶ್ವಾಸ, ಸ್ನೇಹ ಪರತೆ ಸಂತೋಷವನ್ನುಂಟು ಮಾಡುತ್ತದೆ.

ಈಗ ನಾನು ಇದೇ ಕಾಲೇಜಿನಲ್ಲಿ ಅಧ್ಯಾಪಕರಾಗಿ ಈ ಪರಿವರ್ತನೆಗಳನ್ನು ನೋಡುತ್ತಿರುವುದೇ ಒಂದು ಸೋಜಿಗ. ಹುಡುಗಿಯರನ್ನು ಕಂಡರೆ ಸಂಕೋಚದಿಂದ ಮುದುಡಿ ಹೋಗುತ್ತಿದ್ದ ಕಾಲಕ್ಕೂ, ಹುಡುಗಿಯರನ್ನು ಕಂಡರೆ ಪ್ರೀತಿ - ವಿಶ್ವಾಸಗಳಿಂದ ಮಾತನಾಡಿಸುವ ಕಾಲಕ್ಕೂ ಇರುವ ವ್ಯತ್ಯಾಸವನ್ನು ಯೋಚಿಸುತ್ತಾ ನೆನಪಿನ ಪುಟಗಳನ್ನು ತಿರುವಿ ಹಾಕಿದರೆ ಯುವ ಸಮಾಜದಲ್ಲಾಗಿರುವ ಬದಲಾವಣೆ ತಿಳಿಯುತ್ತದೆ. ನಮ್ಮ ಆಲೋಚನೆಯ ರೀತಿ, ತಿಳುವಳಿಕೆಯ ಹರವು, ಸಂಪರ್ಕ ಸಾಧನಗಳು ಉತ್ತಮಗೊಂಡಿವೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇರಲಿ. ಎಲ್ಲಾ ಬದಲಾಗುತ್ತದೆ. ಬದಲಾಗುತ್ತಿರುವ ಬದುಕಿಗೆ ಹೊಂದಿಕೊಂಡು ಹೋಗುವುದೇ ಸರಿಯಾದ ದಾರಿ. ಕಾಲೇಜಿನ ಅಧ್ಯಾಪಕನಾಗಿ ಹೊಸ ತಲೆಮಾರನ್ನು ಅರ್ಥಮಾಡಿಕೊಳ್ಳಬೇಕಲ್ಲವೆ?

ನಾನು ಬಿ.ಕಾಂ. ಪದವಿ ಪಡೆದ ಮೇಲೆ ಕೆಲವು ಕಾರ್ಖಾನೆಗಳಲ್ಲಿ, ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡಿದೆ. ಆದರೆ ಏನೋ ಒಂದು ಕೊರತೆ ಕಾಡುತ್ತಿತ್ತು. ಕೈತುಂಬಾ ಹಣ ಬಂದರೂ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಯುವಕರೊಂದಿಗೆ ಇರಬೇಕು, ನನ್ನ ಓದನ್ನು, ಅನುಭವವನ್ನು ಹಂಚಿಕೊಳ್ಳಬೇಕೆಂಬ ಬಯಕೆ ಉತ್ಕಟವಾಯಿತು. ನಾನು ಓದಿದ ಕಾಲೇಜಿನಲ್ಲೇ ಅಧ್ಯಾಪಕನಾಗುವ ಸಧಾವಕಾಶ ಒದಗಿ ಬಂತು. ನನ್ನ ಕನಸು ನನಸಾಯಿತು. ನನಗೆ ಕಲಿಸಿದ ಅಧ್ಯಾಪಕರೊಂದಿಗೆ ನಾನು ಅಧ್ಯಾಪಕನಾಗುವ ಅವಕಾಶ ಸಿಕ್ಕಿದ್ದು ಒಂದು ಯೋಗಾಯೋಗ. ನಾವು ಕಲಿತಿದ್ದನ್ನು, ಕಲಿಯುವುದನ್ನು ಹಂಚಿಕೊಳ್ಳುವ ಸಂತೋಷ ದೊಡ್ಡದು. ತಲೆ ತುಂಬ ಕನಸುಗಳನ್ನು ಹೊತ್ತ ಯುವಕರಿಗೆ ಬದುಕಿನ ವಾಸ್ತವಗಳನ್ನು ತಿಳಿಸುವ, ಸುತ್ತ - ಮುತ್ತಲವರಿಗೆ ಬೇಕಾದವರಾಗಿ ಬದುಕುವ ಜೀವನ ಮೌಲ್ಯಗಳನ್ನು ಗಟ್ಟಿಯಾಗಿ ರೂಢಿಸಿಕೊಳ್ಳುವ ರೀತಿಯನ್ನು ಸೂಚಿಸುವ ಅವಕಾಶದ ಸಂತೋಷ ನನ್ನ ಪಾಲಿಗೆ ಸಮಾಧಾನವನ್ನುಂಟು ಮಾಡಿದೆ.

'.... ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಬಗ್ಗೆ ಒಂದೆರಡು ಮಾತು ಹೇಳುವುದು ಅಗತ್ಯ. ತನ್ನ ಪ್ರಕಾಶನದ ನೂರನೆಯ ಪುಸ್ತಕವನ್ನು ಬಿಡುಗಡೆಮಾಡುವ ಸಂಭ್ರಮದಲ್ಲಿರುವ ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ಮಾಡಿರುವ ಕೆಲಸ ತುಂಬ ಮಹತ್ವದ್ದು. ಅನೇಕ ಪ್ರತಿಭೆಗಳನ್ನು, ವಾಗ್ವಾದಗಳನ್ನು ಬೆಳೆಸುತ್ತಿರುವ ಕನ್ನಡ ಸಂಘ ಮತ್ತು ಅದರ ಹಿಂದಿನ ಶಕ್ತಿ ಚಿ. ಶ್ರೀನಿವಾರಾಜು ಹಾಗೂ ಅವರ ಗೆಳೆಯರು ಕನ್ನಡಿಗರ ಕೃತಜ್ಞತೆಗೆ, ಅಭಿನಂದನೆಗೆ ಪಾತ್ರರು.....'

ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ
ಕೃತಿ - ಕರ್ತೃ
ಮಯೂರ : ಫೆಬ್ರವರಿ ೧೯೯೫

ಪರಂಪರೆಯ ಸಮರ್ಥ ಪ್ರತಿನಿಧಿ 'ಚಿನ್ನದ ಗೆರೆ'

ಎನ್. ಉದಯಕುಮಾರ್

ನಗರ ಸಂಚಾರ : ಪ್ರಜಾವಾಣಿ : ೩೦ ಜನವರಿ ೧೯೯೫

ಕನ್ನಡ ಸಾಹಿತ್ಯ - ಸಾಂಸ್ಕೃತಿಕ ಪರಂಪರೆಯ ಬೆಳವಣಿಗೆಯಲ್ಲಿ ಸೆಂಟ್ರಲ್ ಕಾಲೇಜು 'ಕರ್ನಾಟಕ ಸಂಘ'ವು ಒಂದು ಮಹತ್ವದ ಹೆಜ್ಜೆ ಗುರುತು. ಸೃಜನಶೀಲ ಸಾಹಿತ್ಯ ಚಟುವಟಿಕೆಗಳಿಗೆ ಒತ್ತಾಸೆಯಾಗಿ ನಿಂತು ಕಾಲೇಜಿನ ಸಂಘವೊಂದು ಸಾಧಿಸಬಹುದಾದ ಎಲ್ಲ ಸಾಧ್ಯತೆಗಳನ್ನು ತೋರಿಸಿ, ಅರ್ಥಪೂರ್ಣ ಪರಂಪರೆಯನ್ನು ಹುಟ್ಟು ಹಾಕಿದ ಕೀರ್ತಿ ಅದರದು.

ಈ ಪರಂಪರೆಯನ್ನು ಆರಂಭಿಸಿದವರು ಡಾ. ಎ.ಆರ್. ಕೃಷ್ಣಶಾಸ್ತ್ರಿಗಳಾದರೂ, ಎಳವೆಯಲ್ಲೇ ಪ್ರತಿಭಾನ್ವಿತರನ್ನು ಗುರ್ತಿಸಿ, ಅವರ ವ್ಯಕ್ತಿತ್ವವು ಸೃಜನಶೀಲತೆಯ ಮೆರುಗು ಪಡೆಯುವಂತೆ ತಿದ್ದಿ- ತೀಡಿ ಒಂದು ಆಕೃತಿಗೆ ತರುವ ಕಲೆಗಾರಿಕೆಯನ್ನು ರೂಢಿಸಿದವರು ಡಾ. ಬಿ.ಪಿ. ರಾಜರತ್ನಂ.

ರಾಜರತ್ನಂರ ಗರಡಿಯಲ್ಲಿ ಪಳಗಿದ ಅನೇಕರು ಇಂದು ಕನ್ನಡ ಸಾಹಿತ್ಯದ ಪ್ರತಿಷ್ಠಿತ ಲೇಖಕರು. ಈ ಇತಿಹಾಸ ಪ್ರಸಿದ್ಧ ಕರ್ನಾಟಕ ಸಂಘದ ಚಟುವಟಿಕೆಗಳು 'ಚಿನ್ನದ ಗೆರೆ' ಕವನ ಸಂಕಲನದ ಪ್ರಕಟಣೆಯೊಂದಿಗೆ ೧೯೬೯ರಲ್ಲಿ ಸ್ಥಗಿತಗೊಂಡವು. ಆದರೆ ಆ ಪರಂಪರೆಯ ಸಮರ್ಥ ಪ್ರತಿನಿಧಿಯಾಗಿ ಬೆಳಗುತ್ತಿರುವ 'ಚಿನ್ನದ ಗೆರೆ', ಬೆಂಗಳೂರಿನ 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ'.

ಸಾಹಿತ್ಯಾಭಿರುಚಿ ಬೆಳೆಸುವ, ಉದಯೋನ್ಮುಖ ಬರಹಗಾರರಲ್ಲಿ ಉತ್ಸಾಹ ತುಂಬಿ, ಕಥೆ-ಕವನ ಬರೆಯಿಸುವ - ಪ್ರಕಟಿಸುವ ಹಾಗೂ ಅವರನ್ನು ಚಿಂತನೆಗೆ ಹಚ್ಚುವ ಕಾಯಕದಲ್ಲಿ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದ ಸಾಧನೆಯು ಸ್ಫೂರ್ತಿ ನೀಡಿದ ಕರ್ನಾಟಕ ಸಂಘದ ಹಿರಿಮೆಗಿಂತ ಕಡಿಮೆಯೇನೂ ಅಲ್ಲ.

ಯಾತ್ರೆ: ಮೊಗಳ್ಳಿ ಗಣೇಶ್, ಅಬ್ದುಲ್ ರಷೀದ್, ನಟರಾಜ ಹುಳಿಯಾರ್, ಪ್ರತಿಭಾ ನಂದಕುಮಾರ್, ತೇಜಸ್ವಿನಿ ನಿರಂಜನರಂಥ ತರುಣ ಲೇಖಕ - ಲೇಖಕಿಯರ ಸಾಹಿತ್ಯ ಯಾತ್ರೆ ಇಲ್ಲಿಂದಲೇ ಆರಂಭವಾದದ್ದು. ಪ್ರೊ. ಎ.ಎನ್. ಮೂರ್ತಿ ರಾಯರ 'ಸಮಗ್ರ ಲಲಿತ ಪ್ರಬಂಧಗಳು', ಡಾ. ಎಚ್. ನರಸಿಂಹಯ್ಯನವರ 'ತೆರೆದ ಮನ' ಸೇರಿದಂತೆ ಹಿರಿಯ - ಕಿರಿಯ ತಲೆಮಾರಿನ ಅನೇಕರ, ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಪ್ರತಿನಿಧಿಸುವ ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಇದರಲ್ಲಿ ಹಲವು ವಿವಿಧ ಪ್ರಶಸ್ತಿ - ಪುರಸ್ಕಾರಗಳಿಗೂ ಪಾತ್ರವಾಗಿವೆ.

ಕರ್ನಾಟಕ ಸಂಘ ಎಂದೊಡನೆ ಅದಕ್ಕೆ ಜೀವಕಳೆ ತಂದ ರಾಜರತ್ನಂರ ನೆನಪಿನ ಸುರುಳಿ ಬಿಚ್ಚಿಕೊಳ್ಳುವಂತೆ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಎಂದಾಕ್ಷಣ ಅದರ ಜೀವಾಳವಾಗಿರುವ ಪ್ರೊ. ಬಿ. ಶ್ರೀನಿವಾಸರಾಜು ಅವರ ಚಿತ್ರ ಕಣ್ಣ ಮುಂದೆ ಸುಳಿಯುತ್ತದೆ. ಸ್ವತಃ ಕವಿಯೂ ನಾಟಕಕಾರರೂ ಆಗಿರುವ, ವೈಯಕ್ತಿಕವಾಗಿ ತಮ್ಮನ್ನು ಅಥವಾ ತಮ್ಮ ಕೃತಿಗಳನ್ನು ಎಂದೂ ಮುಂದುಮಾಡಿಕೊಳ್ಳದೆ, ವಾದ-ಪಂಥಗಳ ಗೊಡವೆಗೆ ಹೋಗದೆ ಹಿಂದೆ ನಿಂತು ಸಂಘವನ್ನು ಹೆಮ್ಮರವಾಗಿ ಬೆಳೆಸಿದ್ದಾರೆ ಶ್ರೀನಿವಾಸರಾಜು.

'ಈಗ ವಾಮನನಾಗಿರುವ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವು ಪಾಲ್ಗೊಳ್ಳುವಿಕೆಯಲ್ಲಿ ತ್ರಿವಿಕ್ರಮನಾಗುವ ಬಗ್ಗೆ ಸಂದೇಹವಿಲ್ಲ' ಎಂಬ ರಾಜರತ್ನಂರ ಖಚಿತ ಭರವಸೆಯನ್ನು ಪ್ರೊ. ರಾಜು ಅತಿ ಕಡಿಮೆ ಕಾಲದಲ್ಲೇ ಈಡೇರಿಸಿದ್ದಾರೆ. ಕಾಲೇಜಿಗೇ ಸೀಮಿತವಾಗದೆ ಇಡೀ ಕರ್ನಾಟಕವನ್ನು ಸಂಘದ ಕರ್ಮ ಭೂಮಿಯನ್ನಾಗಿ ಸ್ವೀಕರಿಸಿ ಸದ್ದು-ಗದ್ದಲವಿಲ್ಲದೆ ಸಾಹಿತ್ಯ ಪರಿಚಾರಿಕೆಯ ಕೆಲಸವನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ.

ಮತ್ತೊಂದು ಗರಿ : ಸಂಘದ ಹಿರಿಮೆಗೆ ವರಕವಿ ದ.ರಾ.ಬೇಂದ್ರೆ ಹುಟ್ಟಿದ ದಿನವಾದ ಜನವರಿ ೩೧ ರಂದು ಮತ್ತೊಂದು ಗರಿ ಮೂಡಲಿದೆ. ಕಾರಣ- ಅಂದು ಸಂಘದ ನೂರನೇ ಪುಸ್ತಕ ಬಿಡುಗಡೆ. ಇಲ್ಲಿ ಮೊದಲ ಪುಸ್ತಕ ಪ್ರಕಟಿಸಿದ ಅನೇಕರು ಇಂದು ಪ್ರಸಿದ್ಧರು. ಅವರಲ್ಲಿ ಖ್ಯಾತ ವಿಮರ್ಶಕ ಡಾ. ಎಚ್.ಎಸ್. ರಾಘವೇಂದ್ರರಾವ್ ಅವರೂ ಒಬ್ಬರು. ಕಾಕತಾಳೀಯ ಎಂಬಂತೆ ಎಚ್ಚೆಸ್ಸಾರ್ ಅವರ ಪಿ.ಎಚ್ ಡಿ ಪ್ರಬಂಧ 'ಹಾಡೆ ಹಾದಿಯ ತೋರಿತು' ಈಗ ನೂರನೇ ಪುಸ್ತಕವಾಗಿ ಬಿಡುಗಡೆ ಆಗುತ್ತಿದೆ.

ಸಂಘದ ಮೊದಲ ಕೃತಿ ಬಿಡುಗಡೆ ಮಾಡಿದ ಹಿರಿಯ ಕವಿ ಪ್ರೊ. ಜಿ.ಎಸ್. ಶಿವರುದ್ರಪ್ಪ ಅವರು ನೂರನೇ ಪುಸ್ತಕವನ್ನೂ ಬಿಡುಗಡೆ ಮಾಡುತ್ತಿದ್ದಾರೆ. ಅಂದು ಅಧ್ಯಕ್ಷತೆ ವಹಿಸಿದ್ದ ವಿಚಾರವಾದಿ ಡಾ. ಎಚ್. ನರಸಿಂಹಯ್ಯ ಅವರದೇ ಈಗಲೂ ಅಧ್ಯಕ್ಷತೆ.

ಬರೀ ಐನೂರು ರೂಪಾಯಿ ಬಂಡವಾಳದಿಂದ ಇಪ್ಪತ್ತೆರಡು ವರ್ಷಗಳ ಹಿಂದ ಸಂಘ ಆರಂಭವಾಯಿತು. ಅದೂ ಅಕಾಲ ಮರಣಕ್ಕೆ ತುತ್ತಾದ ಸಿ.ಕೆ. ಲಕ್ಷ್ಮಣಗೌಡ ಎಂಬ ವಿದ್ಯಾರ್ಥಿಯ ನೆನಪಿನಲ್ಲಿ ಅವರ ಮನೆಯವರು ನೀಡಿದ ಕೊಡುಗೆ. ಆಗ ಪುಸ್ತಕ ಪ್ರಕಟಿಸಲು ಪ್ರಮುಖ ಲೇಖಕರು ಹಸ್ತಪ್ರತಿ ಕೊಡಲು ಹಿಂದು - ಮುಂದು ನೋಡಿದರು. ಕೊನೆಗೆ 'ಹಾಳಾಗಿ ಹೋಗಲಿ' ಎಂದು ಹಸ್ತ ಪ್ರತಿ ಕೊಟ್ಟವರು ಕ.ವೆಂ. ರಾಜಗೋಪಾಲರು. ಅವರ 'ನದಿ ಮೇಲಿನ ಗಾಳಿ' ನಮ್ಮ ಮೊದಲ ಪ್ರಕಟಣೆ ಎಂದು ಶುರುವಿನ ದಿನಗಳನ್ನು ನೆನೆಯುತ್ತಾರೆ ಪ್ರೊ. ರಾಜು. ಈಗ ಕ್ರೈಸ್ಟ ಕಾಲೇಜು ಕನ್ನಡ ಸಂಘದಲ್ಲಿ ಕೃತಿ ಪ್ರಕಟಿಸುವುದು ಹೆಮ್ಮೆಯ ಸಂಗತಿ. ಎಷ್ಟೊಂದು ಅಂತರ.!

ನೆನಪು : 'ಓದುಗರನ್ನು ಸೃಷ್ಟಿಸಬೇಕು. ಪುಸ್ತಕಗಳೇ ಅವರ ಬಳಿ ಹೋಗಬೇಕು. ಹೊಸ ಬರಹಗಾರರನ್ನು ಹುಟ್ಟು ಹಾಕಬೇಕು ಎಂಬ ಆಸೆಯಿಂದ ಸಂಘ ಸ್ಥಾಪನೆ ಆಯಿತು. ದುಡ್ಡು - ರಕ್ತ ನಿಂತಲ್ಲೇ ನಿಂತರೆ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬ ರಾಜರತ್ನಂರ ಮಾತಿನಂತೆ ಬಂದ ಹಣವನ್ನೆಲ್ಲಾ ಪ್ರಕಟಣೆಯಲ್ಲಿ ತೊಡಗಿಸುತ್ತಿದ್ದೇವೆ. ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರೆ ದುಡ್ಡು ತಾನಾಗಿಯೇ ಬರುತ್ತದೆ. ಪ್ರಾಮಾಣಿಕತೆ ಉಳಿಸಿಕೊಳ್ಳಬೇಕು ಅಷ್ಟೆ' ಎಂದು ಈ ಬಗ್ಗೆ ವಿನಮ್ರವಾಗಿ ನುಡಿಯುವ ಅವರು, ಕಾಲೇಜಿನ ಹಳೇ ವಿದ್ಯಾರ್ಥಿಗಳು, ಪ್ರಾಂಶುಪಾಲರ ತುಂಬು ಸಹಕಾರವನ್ನು ಸ್ಮರಿಸಲು ಮರೆಯುವುದಿಲ್ಲ.

ಕ್ರೈಸ್ಟ ಕಾಲೇಜ್ ಕನ್ನಡ ಸಂಘವು ಕರ್ನಾಟಕ ಸಂಘದ ನೆರಳಿನಂತೆ ಕಂಡರೂ ಇನ್ನೂ ವ್ಯಾಪಕ - ವಿಸ್ತೃತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅ.ನ.ಕೃ ನೆನಪಿನಲ್ಲಿ ೨೨ ವರ್ಷದಿಂದ ಅಂತರ್ ಕಾಲೇಜು ಲೇಖನ ಸ್ಪರ್ಧೆ, ಬೇಂದ್ರೆ ಸ್ಮರಣಾರ್ಥ ೧೩ ವರ್ಷಗಳಿಂದ ರಾಷ್ಟ್ರಮಟ್ಟದ ಕನ್ನಡ ಕವನ ಸ್ಪರ್ಧೆಯನ್ನು ಸತತವಾಗಿ ನಡೆಸಿಕೊಂಡು ಬರುತ್ತಿದೆ. ಸ್ಪರ್ಧೆಗಳಲ್ಲಿ ಆಯ್ಕೆಯಾದ ಲೇಖನ - ಕವನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ. ಕಾವ್ಯದ ಹುಚ್ಚು ಹತ್ತಿಸಿಕೊಂಡ ನಮ್ಮ ಬಹುತೇಕ ಯುವ ಜನರಿಗೆ ಕ್ರೈಸ್ಟ ಕಾಲೇಜು ಕನ್ನಡ ಸಂಘದ ಬಹುಮಾನ ಬಹು ಪ್ರತಿಷ್ಠಿತ !

ಬಹುಮಾನ ವಿತರಣಾ ಸಮಾರಂಭ ಪ್ರತಿ ವರ್ಷ ಬೇಂದ್ರೆ ಹುಟ್ಟು ಹಬ್ಬದಂದು ನಾಡಿನ ಹಿರಿಯ ಬರಹಗಾರರೊಬ್ಬರ ಮನೆಯಲ್ಲಿ ನಡೆಯುವುದು ವಾಡಿಕೆ. ಕುವೆಂಪು, ಬೇಂದ್ರೆ, ಮಾಸ್ತಿ, ಅಡಿಗ, ಕಾರಂತ, ಗೋಕಾಕ್ ಮೊದಲಾದವರ ಮನೆಗಳಲ್ಲಿ ಇಂಥ ಸಮಾರಂಭಗಳು ನಡೆದು ಹಳೆಯ - ಹೊಸ ತಲೆಮಾರಿನ ಬರಹಗಾರರ ಸಮಾಗಮಕ್ಕೆ ವೇದಿಕೆಯನ್ನು ಒದಗಿಸಿವೆ.

ಬೇಂದ್ರೆಯವರ ನಿಧನದ ನಂತರ ಅವರ ನೆನಪಿಗಾಗಿ **'ಬೇಂದ್ರೆ ನಮನ'** ವಿಶೇಷ ಉಪನ್ಯಾಸ ಮಾಲೆ ಏರ್ಪಡಿಸಿ ಈ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಹಾಗೆಯೇ ಪ್ರತಿ ತಿಂಗಳ ಹತ್ತರಂದು ನಗರದ ವಿವಿಧ ಕಾಲೇಜುಗಳಲ್ಲಿ **'ಕುವೆಂಪು ನಮನ'** ಎಂಬ ವಿಶೇಷ ಉಪನ್ಯಾಸ ಮಾಲೆಯನ್ನೂ ಈಗಾಗಲೆ ಆರಂಭಿಸಿದೆ.

ಕಾಲೇಜು ವಿದ್ಯಾರ್ಥಿಗಳಿಗಾಗಿ **'ನಾಟಕ ಅಭಿರುಚಿ ಕೇಂದ್ರ'**ವನ್ನು ತೆರೆದಿದ್ದು, ರಾಷ್ಟ್ರೀಯ ನಾಟಕ ಶಾಲೆ ಮತ್ತು ರಂಗಾಯಣದಲ್ಲಿ ತರಬೇತಿ ಪಡೆದ ತಜ್ಞರಿಂದ ತರಬೇತಿ ಕೊಡಿಸುತ್ತಿದೆ. ವರ್ಷದ ಕೊನೆಗೆ ನಾಟಕಗಳ ಪ್ರದರ್ಶನವೂ ಇರುವುದು. ಅಂತರ್ ಕಾಲೇಜು ನಾಟಕ ಸ್ಪರ್ಧೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಸತತ ಪ್ರಶಸ್ತಿ ಗಳಿಸಿ ಕಾಲೇಜಿನ ತಂಡ ಹ್ಯಾಟ್ರಿಕ್ ಸಾಧಿಸಿದೆ.

ಗಮಕ, ಭಾವಗೀತೆ, ಸಮೂಹಗಾನ ತರಬೇತಿಗಾಗಿ **'ನಾದಲೀಲೆ ವೇದಿಕೆ'**, ವಿಚಾರ ಸಂಕಿರಣ, ಚರ್ಚೆ, ಲೇಖನ ಕಲೆ ರೂಢಿಸಿಕೊಳ್ಳಲು **'ಅನಿಕೇತನ ವೇದಿಕೆ'** ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳು ಅದರವು.

ಹೊಸ ಯೋಜನೆ : 'ಜನಸಾಮಾನ್ಯರೂ ಕಲೆಯ ಬಗ್ಗೆ ತಿಳಿಯಲು ಅನುವಾಗುವಂತೆ ವರ್ಷಕ್ಕೆ ಐದರಂತೆ ಕಲೆಗೆ ಸಂಬಂಧಿಸಿದ ೧೦ ಪುಸ್ತಕಗಳನ್ನು ತರಲು ಯೋಜಿಸಿದ್ದೇವೆ. ಇದಕ್ಕೆ ಹಸ್ತ ಪ್ರತಿಗಳೂ ಸಿದ್ಧವಾಗುತ್ತಿವೆ. ಜೊತೆಗೆ ಜ್ಞಾನಪೀಠ ಪ್ರಶಸ್ತಿ ಗ್ರಂಥ ಮಾಲೆ ಆರಂಭವಾಗುವ ಸಿದ್ಧತೆಯಲ್ಲಿದೆ.

'ಅಲ್ಲದೇ ಕನ್ನಡದ ಕಣ್ವ ಬಿ.ಎಂ. ಶ್ರೀ. ಅವರಿಂದ ಹಿಡಿದು ಈ ಶತಮಾನದ ಕೊನೆಯವರೆಗಿನ ಕನ್ನಡ ಕವಿಗಳ ಸಾವಿರ ಅತ್ಯುತ್ತಮ ಕವನಗಳನ್ನು ಸಂಗ್ರಹಿಸಿ ೨೦೦೦ ಇಸವಿಗೆ ಪ್ರಕಟಿಸಬೇಕೆಂಬ ಉದ್ದೇಶವೂ ಇದೆ' ಎಂದು ಮಹಾತ್ವಾಕಾಂಕ್ಷೆಗಳನ್ನು ಮುಂದಿಡುತ್ತಾರೆ ರಾಜು ಅವರು.

ಹೊರಗಿನ ನೆರವಿಲ್ಲದೆ ತನ್ನಷ್ಟಕ್ಕೆ ತಾನೇ ಸಂಪನ್ಮೂಲಗಳನ್ನು ರೂಢಿಸಿಕೊಂಡು ಒಂದು ಅಕಾಡೆಮಿ ಮಾಡಬಹುದಾದ ಕೆಲಸಗಳನ್ನು ಖಾಸಗಿ ಕಾಲೇಜಿನ ಭಾಷಾ ಸಂಘವೊಂದು ಮಾಡಿ ತೋರಿಸಿರುವುದು ಹೆಗ್ಗಳಿಕೆಯೇ ಸರಿ.

ಮೇಷ್ಟ್ರುಗಳು ಸಮಯಕ್ಕೆ ಸರಿಯಾಗಿ ತರಗತಿಗಳಿಗೆ ಬಂದು ಶ್ರದ್ಧೆಯಿಂದ ಪಾಠ ಹೇಳಿದರೆ ಸಾಕು. ಅದೇ ಮಹಾ ಭಾಗ್ಯ ಅನ್ನುವ ಈಗಿನ ಸಂದರ್ಭದಲ್ಲಿ, ವೈಯಕ್ತಿಕ ಬದುಕು-ಬರಹಗಳನ್ನು ಬದಿಗೊತ್ತಿ ಇಷ್ಟೊಂದು ಚಟುವಟಿಕೆಗಳಿಗೆ ಹೆಗಲುಕೊಟ್ಟಿರುವ ಶ್ರೀನಿವಾಸರಾಜು ಅಂಥವರು ಬಹಳ ವಿರಳ. ರಾಜ್ಯದ ಪ್ರತಿ ಕಾಲೇಜಿನಲ್ಲೂ ಇಂಥ ಮೇಷ್ಟು ಹಾಗೂ ಸಂಘವೊಂದು ಇದ್ದಿದ್ದರೆ ಕನ್ನಡ ಸಾಹಿತ್ಯ-ಪ್ರಕಟಣಾ ಲೋಕ ಇನ್ನೆಷ್ಟು ಶ್ರೀಮಂತವಾಗುತ್ತಿತ್ತು ?

ಪ್ರೇಮದಿಂದಲೆ ಬಂದು,
ಪ್ರೇಮದಲ್ಲಿಯೆ ನಿಂದು,
ಪ್ರೇಮದಲ್ಲಿಯೆ ಸಂದು,
ಹೋಗುವೆಮಗೆಲ್ಲ
ಪ್ರೇಮವೇ ಹರಿಯೆಂದು
ರಸಋಷಿಯೇ ಬಲ್ಲ

ಕುವೆಂಪು
ಷೋಡಶಿ

ಕ್ರೈಸ್ಟ್ ಕಾಲೇಜಿನ ರಜತೋತ್ಸವ ವರ್ಷ

ಕನ್ನಡ ಸಂಘದ ೧೦೦ನೇ ಕುಸುಮ ಬಿಡುಗಡೆ ಇಂದು

ಗಣೇಶ ಅಮೀನಗಡ

'ಸಂಯುಕ್ತ ಕರ್ನಾಟಕ ; ೩೧ ಜನವರಿ ೧೯೯೫

ಕರ್ನಾಟಕದ ಸಣ್ಣ-ಪುಟ್ಟ ಊರುಗಳಲ್ಲೂ ಕಾಲೇಜುಗಳಿವೆ. ಇವುಗಳಲ್ಲಿನ ಕನ್ನಡ ವಿಭಾಗದ ಕಾರ್ಯವೈಖರಿ ಬೆಳಕಿಗೆ ಬರುವುದು ಅಪರೂಪ. ಬೆಂಗಳೂರಿನಲ್ಲೂ ನೂರಾರು ಕಾಲೇಜುಗಳಿವೆ. ಅದರಲ್ಲೂ ಹೊಸೂರು ರಸ್ತೆಯಲ್ಲಿನ ಕ್ರೈಸ್ಟ್ ಕಾಲೇಜು ವಿಶಿಷ್ಟವಾದುದು. ಯಾಕೆ ವಿಶಿಷ್ಟವೆಂದರೆ ಇಲ್ಲಿಯ ಕನ್ನಡ ಸಂಘದ ಸಾಧನೆ ಅಚ್ಚರಿ ಹುಟ್ಟಿಸುವಷ್ಟಿದೆ. ಪ್ರತಿವರ್ಷ ಬೇಂದ್ರೆ ಹುಟ್ಟಿದ (ಜನವರಿ ೩೧) ದಿನವನ್ನು 'ಕವಿ ದಿನ'ವನ್ನಾಗಿ ಆಚರಿಸಿ ಕಾವ್ಯ ಹಾಗೂ ಲೇಖನ ಸ್ಪರ್ಧೆಗಳನ್ನು ಗೆದ್ದವರಿಗೆ ಬಹುಮಾನ ಕೊಡುವುದರ ಜೊತೆಗೆ ಹೊಸ ಪುಸ್ತಕಗಳನ್ನು ಬಿಡುಗಡೆಗೊಳಿಸುವ ಜಂಟಿ ಕಾರ್ಯಕ್ರಮವನ್ನು ನಾಡಿನ ವಿವಿದೆಡೆ ಕನ್ನಡ ಸಂಘ ಹಮ್ಮಿಕೊಂಡಿರುತ್ತದೆ.

ಆದರೆ ಈ ವರ್ಷದ ಸಮಾರಂಭದ ವಿಶಿಷ್ಟತೆಯೆಂದರೆ ತನ್ನ ಇಪ್ಪತ್ತೆರಡು ವರ್ಷದಲ್ಲಿ ನೂರನೇ ಪುಸ್ತಕವಾಗಿ ಎಚ್.ಎಸ್. ರಾಘವೇಂದ್ರರಾವ್ರ ಪಿ.ಎಚ್.ಡಿ. ಪ್ರಬಂಧವನ್ನು ಬಿಡುಗಡೆಗೊಳಿಸುತ್ತಿದೆ.

ಈ ಸಂಭ್ರಮದಿಂದ ಬೀಗದೆ, ಏರದೆ ಎಂದಿನಂತೆ ತಮ್ಮ ಸಂಘದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರು ಕನ್ನಡ ಸಂಘದ ರೂವಾರಿ ಚಿ. ಶ್ರೀನಿವಾಸರಾಜು. ಆತ್ಮೀಯರಲ್ಲಿ 'ರಾಜು'. ಎಂದೇ ಕರೆಯಲ್ಪಡುವ ಸಂಕೋಚ ಸ್ವಭಾವದ, ತಮ್ಮ ಚಟುವಟಿಕೆಗಳಿಗೆ ಪ್ರಚಾರ ಬಯಸದ 'ಅಪತ್ರಿಕಾ ವಾರ್ತಾ'ಗಾರರು. ಕನ್ನಡದ ಪ್ರಸಿದ್ಧ ಲೇಖಕರಿಂದ ಹಿಡಿದು ಈ ಹೊತ್ತು ಬರೆಯುತ್ತಿರುವವರ - ಬರೆದು ಪ್ರಸಿದ್ಧಿಗೆ ಬಂದಿರುವವರ ಸಂಕಲನಗಳನ್ನೆಲ್ಲ ತಂದ ಹೆಗ್ಗಳಿಕೆ ರಾಜು ಅವರದು.

ಇಂದು ತಮ್ಮ ಮೊದಲ ಸಂಕಲನ ಕನ್ನಡ ಸಂಘದಿಂದ ಬರಲೆಂದು ತುಡಿತಗೊಳ್ಳುವವರಲ್ಲಿ ಯುವ ಲೇಖಕರಷ್ಟೇ ಅಲ್ಲ ಪ್ರಸಿದ್ಧ ಲೇಖಕರೂ ಇದ್ದಾರೆ. ಇದರಿಂದ ಲೇಖಕರಿಗೆ ಅನೇಕ ಲಾಭಗಳಾಗುತ್ತವೆ. ಸಂಕಲನ ತರುವುದೆಂದರೆ ಮಗುವನ್ನು ಹೆತ್ತ ಸಂಭ್ರಮ, ಸಂಕಟದ ಕ್ಷಣಗಳನ್ನು ಎದಿರಿಸುವ ಲೇಖಕರು ಕೇವಲ ಸಂಕಲನ ಹೊರ ಬರುತ್ತಿರುವ ಸಂಭ್ರಮವನ್ನು ತಮ್ಮದಾಗಿಸಿಕೊಡು ಉಳಿದ ಸಂಕಟವನ್ನು ಕನ್ನಡ ಸಂಘಕ್ಕೆ ವರ್ಗಾಯಿಸಿ ಬಿಡುತ್ತಾರೆ. ಪ್ರೂಫ್ ರೀಡಿಂಗ್ ನಿಂದ ಹಿಡಿದು ಮುಖಪುಟ ಚಿತ್ರ, ಪುಸ್ತಕದ ಮುದ್ರಣದವರೆಗೂ ಜವಾಬ್ದಾರಿ ಹೊತ್ತು ಶ್ರಮಿಸುತ್ತಿದೆ.

ಇಂಥ ಅಪರೂಪದ ಕನ್ನಡ ಸಂಘ ಹುಟ್ಟಿಕೊಂಡಿದ್ದು ಇಪ್ಪತ್ತೆರಡು ವರ್ಷಗಳ ಹಿಂದೆ. ಲಕ್ಷ್ಮಣಗೌಡ ಎನ್ನುವ ರಾಜು ಅವರ ವಿದ್ಯಾರ್ಥಿ ಆಕಸ್ಮಿಕವಾಗಿ ತೀರಿಕೊಂಡ. ಅವರ ತಾಯಿ ಕನ್ನಡ ಸಂಘಕ್ಕೆ ೨೫೦೦ ರೂ. ಕೊಡಲು ಬಂದಾಗ ರಾಜು ಹೇಳಿದ್ದು "೨೦೦೦ ರೂ. ಕಾಲೇಜಿಗೆ ಕೊಡಿ, ೫೦೦ ರೂ. ಮಾತ್ರ ಸಂಘಕ್ಕೆ ಕೊಡಿ". ಹೀಗೆ ೫೦೦ ರೂ.ನಲ್ಲಿ ಕ.ವೆಂ. ರಾಜಗೋಪಾಲರ 'ನದಿಯ ಮೇಲಿನ ಗಾಳಿ' ಕವನ ಸಂಕಲನ, ಸಂಘದ ಮೊದಲ ಪುಸ್ತಕವಾಗಿ ಹೊರ ಬಂತು.

ಅಂದಿನಿಂದ ಕಾವ್ಯ, ಕಥೆ, ನಾಟಕ, ವಿಮರ್ಶೆ, ಪ್ರಬಂಧ ಹೀಗೆ ಎಲ್ಲ ಬಗೆಯಲ್ಲೂ ಪುಸ್ತಕಗಳನ್ನು ತರುವ ಜವಾಬ್ದಾರಿ ಹೊತ್ತಿರುವ ಶ್ರೀನಿವಾಸರಾಜು ಅವರ ವೈಯಕ್ತಿಕ ಬರವಣಿಗೆ ಕುಂಠಿತಗೊಂಡಿದೆ. ಪ್ರಕಟಿಸಬೇಕಾದ ನಾಟಕ, ಕಾದಂಬರಿ ಹಾಗೇ ಉಳಿದಿದೆಯಾದರೂ ಆ ಕುರಿತು ಕೊರಗಿಲ್ಲ ಅವರಿಗೆ.

ಸಂಘದಿಂದ ಎರಡನೆಯ ಪುಸ್ತಕವಾಗಿ ಕ್ರಿಸ್ತನ ಕುರಿತಾಗಿ 'ಕ್ರಿಸ್ತಾಂಜಲಿ' ಬಂತು. ಬೇಂದ್ರೆ ತೀರಿಕೊಂಡ ನಂತರ 'ಬೇಂದ್ರೆ ನಮನ' ಉಪನ್ಯಾಸ ಮಾಲೆಯಡಿಯಲ್ಲಿ ಈಗಾಗಲೇ ಆರು ಕಿರು ಹೊತ್ತಿಗೆಗಳು ಬಂದಿವೆ. ಈಗ 'ಕುವೆಂಪು ನಮನ' ಉಪನ್ಯಾಸ ಮಾಲೆ ಶುರುವಾಗಿದೆ.

ಪ್ರತಿವರ್ಷ ಲೇಖನ ಹಾಗೂ ಕಾವ್ಯ ಸ್ಪರ್ಧೆಗಳಲ್ಲಿ ಬಹುಮಾನಿತ ಲೇಖನ ಹಾಗೂ ಕವಿತೆಗಳನ್ನು ಪ್ರಕಟಿಸುತ್ತಲಿದೆ. ಹೀಗೆ ವಿದ್ಯಾರ್ಥಿದೆಸೆಯಲ್ಲಿದ್ದಾಗ ಕಾವ್ಯ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು ಮುಂದೆ ತಮ್ಮ ಮೊದಲ ಸಂಕಲನವನ್ನು ಈ ಸಂಘದಿಂದಲೇ ಪ್ರಕಟ ಪಡಿಸಿದ್ದಾರೆ. ಇಂಥವರ ಪಟ್ಟಿ ಸಾಕಷ್ಟು ದೊಡ್ಡದಿದೆ. ಹೀಗೆ ತಾವು ಕನ್ನಡ ಸಂಘವನ್ನು ಬೆಳೆಸಿದೆ ಎನ್ನುವುದಕ್ಕಿಂತ ಕನ್ನಡ ಸಂಘವೇ ತಮ್ಮನ್ನು ಬೆಳೆಸಿತು ಎನ್ನುತ್ತಾರೆ ರಾಜು. ಅವರ ಗೆಳೆಯರು,ಮನೆ, ಕಾಲೇಜು, ವಾತಾವರಣದಿಂದ ಕನ್ನಡ ಸಂಘ ಬೆಳೆದಿರುವುದನ್ನು ಸ್ಮರಿಸುತ್ತಾರೆ.

ಮೊದಲು ಬಿಎಸ್ಸಿ ಮುಗಿಸಿಕೊಂಡು ಹೊಟ್ಟೆಪಾಡಿಗೆ ಟ್ರಾನ್ಸಪೋರ್ಟ್ ಸೂಪರ್‌ವೈಸರಾಗಿ, ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ಸ್ಟಾಕ್ ಯಾರ್ಡ ಮ್ಯಾನೇಜರ್ ರಾಗಿ ನಂತರ ಸಾಹಿತ್ಯಾಸಕ್ತಿಯಿಂದ ಎಂ.ಎ ಮುಗಿಸಿಕೊಂಡು ಕ್ರೈಸ್ಟ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ಅಂದಿನಿಂದ ಪಠ್ಯಕ್ಕೇ ಅಂಟಿಕೊಳ್ಳದೆ ಕಾಲೇಜಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಪ್ರತಿವರ್ಷ ಲೇಖನ ಹಾಗೂ ಕಾವ್ಯ ಸ್ಪರ್ಧೆ ನಡೆಸುತ್ತಾ ಹೊಸ ಪ್ರತಿಭೆಗಳನ್ನು ಹೆಕ್ಕಿ ತೆಗೆಯುತ್ತಿದ್ದಾರೆ. ಇದರೊಂದಿಗೆ ಪ್ರಸಿದ್ಧರಲ್ಲದ ಹೊಸಬರ ಸಂಕಲನಗಳನ್ನು ಪ್ರಕಟಿಸುವ ಜವಾಬ್ದಾರಿ ಹೊರುವುದು ಕನ್ನಡ ಸಂಘಕ್ಕೀಗ ನಿತ್ಯದ ಕಾಯಕವಾಗಿದೆ. ಪ್ರತಿಯೊಂದು ಹೊಸ

ಪುಸ್ತಕ ಬಂದಾಗಲೂ ಥ್ರಿಲ್ ಗೊಳ್ಳುವ ರಾಜು ಅವರನ್ನು ಪುಸ್ತಕ ಮಾರಾಟದ ಬಗ್ಗೆ ಕೇಳಿದರೆ 'ಪುಸ್ತಕ ಮಾರಾಟವಾಗುವುದು ಜನರ ಕೈಗೆಟುಕುವ ಬೆಲೆಯಿದ್ದಾಗ ಜೊತೆಗೆ ಜನರ ಬಳಿಗೆ ಹೋದಾಗ ಎನ್ನುತ್ತಾರೆ. ಇವರೊಂದಿಗೆ ಸಾಥಿಯಾಗಿ ಬಸವರಾಜ ವಕ್ಕುಂದ, ಶಿವಾರೆಡ್ಡಿ, ಶಿವಪ್ರಸಾದ್ ಜೊತೆಗೆ ಇತರ ಭಾಷಾ ವಿಭಾಗದವರೂ ನೆರವಾಗುತ್ತಾರೆ.

ಈ ದೇಶಕ್ಕೆ ಕ್ರೈಸ್ತರ ಆಗಮನದಿಂದ ಮಹತ್ವದ ಬದಲಾವಣೆಗಳಲ್ಲಿ ಮುದ್ರಣದ ಪ್ರಗತಿಯೂ ಒಂದು. ಇದು ನೆನಪಾಗಲು ಕಾರಣ ಈ ಹೊತ್ತು ಕನ್ನಡ ಸಂಘದ ಸಾಧನೆಯ ಹಿಂದೆ ಬೆಳ್ಳಿಹಬ್ಬ ಆಚರಿಸುತ್ತಿರುವ ಕ್ರೈಸ್ತ ಕಾಲೇಜಿನ ನೆರವು ನಿರಂತರವಾಗಿದೆ. ನಾಯಿಕೊಡೆಗಳಂತೆ ಹುಟ್ಟಿಕೊಂಡು ಕಡಿಮೆ ಅವಧಿಯಲ್ಲಿ ಅಸ್ಥಿತ್ವವಿಲ್ಲದಂತಾಗುವ ಅನೇಕ ಸಂಘಗಳ ಉದಾಹರಣೆಗಳು ನಮ್ಮ ಕಣ್ಮುಂದಿವೆ. ತನ್ನದೇ ಆದ ಮಿತಿಗಳಲ್ಲಿ ಕೆಲಸ ನಿರ್ವಹಿಸುತ್ತಾ ಸಾಹಿತ್ಯದ ಪುಸ್ತಕಗಳನ್ನು ತರುತ್ತಾ 'ಸಾಂಸ್ಕೃತಿಕ' ಕಾರ್ಯವನ್ನು ಕೈಗೊಂಡಿರುವ ಕನ್ನಡ ಸಂಘದ ವತಿಯಿಂದ ಎಚ್.ಎಸ್. ರಾಘವೇಂದ್ರರಾವ್‌ರ ಪಿ.ಎಚ್.ಡಿ. ಪ್ರಬಂಧ 'ಹಾಡೆ ಹಾದಿಯ ತೋರಿತು' ನೂರನೆಯ ಪುಸ್ತಕವಾಗಿ ಪ್ರಕಟಗೊಳ್ಳುತ್ತಲಿದೆ.

ಇತಿಹಾಸದಲ್ಲಿ ೧೨೯ರ ವಿಶೇಷ

೧) ಹಿಟ್ಲರ್ ಜನಿಸಿದ್ದು		೧೮೮೯
ನೆಪೋಲಿಯನ್ ಜನಿಸಿದ್ದು		೧೭೬೦
	ವ್ಯತ್ಯಾಸ	೧೨೯ ವರ್ಷಗಳು
೨) ಹಿಟ್ಲರ್ ಅಧಿಕಾರಕ್ಕೆ ಬಂದಿದ್ದು	೧೯೩೩	
ನೆಪೋಲಿಯನ್ ಅಧಿಕಾರಕ್ಕೆ ಬಂದಿದ್ದು	೧೮೦೪	
	ವ್ಯತ್ಯಾಸ	೧೨೯ ವರ್ಷಗಳು
೩) ಹಿಟ್ಲರ್ ವಿಯಾನ ಆಕ್ರಮಿಸಿದ್ದು		೧೯೩೮
ನೆಪೋಲಿಯನ್ ವಿಯಾನ ಆಕ್ರಮಿಸಿದ್ದು		೧೮೦೪
	ವ್ಯತ್ಯಾಸ	೧೨೯ ವರ್ಷಗಳು
೪) ಹಿಟ್ಲರ್ ರಷ್ಯಾಗೆ ಮುತ್ತಿಗೆ ಹಾಕಿದ್ದು		೧೯೪೧
ನೆಪೋಲಿಯನ್ ರಷ್ಯಾಗೆ ಮುತ್ತಿಗೆ ಹಾಕಿದ್ದು		೧೮೧೨
	ವ್ಯತ್ಯಾಸ	೧೨೯ ವರ್ಷಗಳು
೫) ಹಿಟ್ಲರ್ ಯುದ್ಧದಲ್ಲಿ ಸೋತಿದ್ದು		೧೯೪೫
ನೆಪೋಲಿಯನ್ ಯುದ್ಧದಲ್ಲಿ ಸೋತಿದ್ದು		೧೮೧೬
	ವ್ಯತ್ಯಾಸ	೧೨೯ ವರ್ಷಗಳು

ನಾಗೇಶ
ಮೊದಲನೆಯ ಪಿ.ಯು.ಸಿ.

ಕ್ರೈಸ್ಟ್ ಕಾಲೇಜಿನಲ್ಲೊಬ್ಬ 'ಸಾಹಿತ್ಯ ಪರಿಚಾರಕ'

ಬಾಬು ಕೃಷ್ಣಮೂರ್ತಿ

ಸಂವಾದಕರ ಸಂವಾದ ; ಮಂಗಳ ; ೧೫ ಮಾರ್ಚ ೧೯೯೫

ಅವು ಸುಮಾರು ೧೯೬೩-೬೪ರ ದಿವಸಗಳು. ನನಗೆ ಒಬ್ಬ ವಿದ್ಯಾರ್ಥಿಯ ಪರಿಚಯ ಆಯಿತು. ಅಗಲವಾದ ಮುಖ, ಸದೃಢ ಶರೀರ. ಏನೇ ಆದರೂ ಉದ್ರೇಕಕ್ಕೆ ಒಳಗಾಗದ ಮನಃಸ್ಥಿತಿ. ಮಾತನಾಡಿದರೆ ಸಾಕು ಈತ ಒಬ್ಬ ಕನಸುಗಾರ ಎಂದು ಭಾಸವಾಗುತ್ತಿತ್ತು. ಆಗ ಆತ ಬಿ.ಎಸ್ಸಿ ವಿದ್ಯಾರ್ಥಿ. ಬಹುಶಃ ಕೊನೆಯ ವರ್ಷದಲ್ಲಿ ಓದುತ್ತಿದ್ದರು. ಇನ್ನೊಮ್ಮೆ ಸಿಕ್ಕಿದಾಗ ತಾನು ಬಿ.ಎಸ್ಸಿಗೆ ನಮಸ್ಕಾರ ಹೊಡೆದು ಬಿ.ಎ.ಗೆ ದಾಖಲಾಗಿರುವುದಾಗಿ ಹೇಳಿದ್ದರು.

ನನಗೆ ಅವರ ಬಗ್ಗೆ ಆಗ ಮೂಡಿದ ಅಭಿಪ್ರಾಯ ಸ್ವಲ್ಪ ಗೊಂದಲಮಯವೆಂದೇ ಹೇಳಬಹುದು. ಬಹಳ ಒಳ್ಳೆಯ ವಿದ್ಯಾರ್ಥಿ, ಶಿಸ್ತಿನ ಮನುಷ್ಯ. ಅನವಶ್ಯಕವಾಗಿ ಒಂದೇ ಒಂದು ಮಾತನ್ನು ಆಡುವವರಲ್ಲ. ಪೈಜಾಮಾ, ಜುಬ್ಬ ಧರಿಸಿ ಓಡುಡುತ್ತಿದ್ದ ಅವರ ಬಗ್ಗೆ ಒಂದು ಕಡೆ ಗೌರವ ಮೂಡಿದರೆ ಇನ್ನೊಂದು ಕಡೆ ಬಿ.ಎಸ್ಸಿ ಬಿಟ್ಟು ಬಿ.ಎಗೆ ಸೇರಿದ್ದ ಅವರ ಬಗ್ಗೆ ಕೌತುಕವೂ ಉಂಟಾಗಿತ್ತು.

ಆನಂತರ ಒಮ್ಮೆ **ವಿಮೋಚನಾ** ಎಂಬ ವಾರಪತ್ರಿಕೆ ಆರಂಭಿಸಿದ್ದೀನಿ ಎಂದರು. ಪ್ರತಿ ಗಳನ್ನು ಕೊಟ್ಟರು. ನಾಟಕಗಳನ್ನು ಬರೆದು ಗೆಳೆಯರಿಗೆ ಓದಿ ಹೇಳುವುದರಲ್ಲಿ ಖುಷಿ ಪಡೆಯುತ್ತಿದ್ದರು.

ಆದರೆ ಅವರ ನೆನಪಾದಾಗಲೆಲ್ಲ ಗೌರವದ ಭಾವನೆ ಮೂಡುವುದು ಮಾತ್ರ ಮುಂದುವರೆದಿತ್ತು.

ಅವರು ಇಂದು ಎ.ಆರ್. ಕೃ., ಜಿ.ಪಿ. ರಾಜರತ್ನಂರ ವಾರಸುದಾರರಾಗಿದ್ದಾರೆ ಎಂಬುದು ಭಾಸವಾದಾಗ ಅವರ ಬಗೆಗಿನ ಗೌರವ ಅದರ ನೂರುಪಟ್ಟು ಹೆಚ್ಚುತ್ತದೆ.

ಅವರೇ ಬೆಂಗಳೂರು ಕ್ರೈಸ್ಟ ಕಾಲೇಜಿನ ಕನ್ನಡ ಅಧ್ಯಾಪಕ ಪ್ರೊ. ಚಿ. ಶ್ರೀನಿವಾಸ ರಾಜು. ಇಂದು ಅವರು ಏರಿರುವ ಎತ್ತರವನ್ನು ಕಂಡಾಗ ಅವರು ಬಿ.ಎಸ್ಸಿ ಬಿಟ್ಟು ಬಿ.ಎ. ಸೇರಿದ ಘಟನೆ ಎಷ್ಟು ಅರ್ಥಪೂರ್ಣ ಎಂಬುದು ಅರಿವಾಗುತ್ತದೆ. ಅವರು ಎಷ್ಟು ಆಳವಾಗಿ ಯೋಚಿಸಿ, ತಮ್ಮ ಜೀವನ ಸಾರ್ಥಕ ಮಾಡಿಕೊಳ್ಳುವ ದಾರಿಯನ್ನು ಆಯ್ಕೆ ಮಾಡಿ ಕೊಂಡರು ಎಂಬುದು ಮನಸ್ಸಿಗೆ ತಟ್ಟುತ್ತದೆ.

ಇತ್ತೀಚೆಗೆ ಕ್ರೈಸ್ಟ ಕಾಲೇಜು ತನ್ನ ಬೆಳ್ಳಿ ಹಬ್ಬವನ್ನು ಆಚರಿಸಿತು. ಬೆಂಗಳೂರಿನಿಂದ ಹೊಸೂರಿಗೆ ಹೋಗುವ ರಸ್ತೆಯಲ್ಲಿ ಕ್ರೈಸ್ತ ಸಂಸ್ಥೆಗೆ ಸೇರಿದ ವಿಶಾಲವಾದ ಪ್ರದೇಶದಲ್ಲಿರುವ ಕ್ರೈಸ್ಟ ಕಾಲೇಜು ಇಂದು ಕನ್ನಡ ಸಾರಸ್ವತ ಲೋಕದಲ್ಲಿ ಹೆಸರು ಮಾಡಿರುವುದಕ್ಕೆ ಒಂದೇ ಕಾರಣ ಅಲ್ಲಿನ ಕನ್ನಡ ಸಂಘದ ನಿರಂತರ ಚಟುವಟಿಕೆ. ಕ್ರೈಸ್ಟ ಕಾಲೇಜಿನ ಬೆಳ್ಳಿ ಹಬ್ಬದ ಜೊತೆ ಕನ್ನಡ ಸಂಘ ತನ್ನ 'ನೂರನೆ ದೀಪ'ವನ್ನು ತೇಲಿಬಿಟ್ಟಿತು. ಡಾ. ಹೆಚ್.ಎಸ್. ರಾಘವೇಂದ್ರರಾವ್ ಅವರ 'ಹಾಡೆ ಹಾದಿಯ ತೋರಿತು' ಎಂಬ ಮಹಾಪ್ರಬಂಧವೇ ನೂರನೆಯ ದೀಪ. ಬೇಂದ್ರೆ, ಕುವೆಂಪು, ಪು.ತಿ.ನ. ಕವಿತೆಗಳ ವಿಶಿಷ್ಟತೆಯ ಅಧ್ಯಯನ ಈ ಮಹಾ ಪ್ರಬಂಧ.

ಕ್ರೈಸ್ತ ಸಮುದಾಯದ ಏಳಿಗೆಗಾಗಿ ರೂಪು ಗೊಂಡಿರುವ ಸಿ.ಎಂ.ಐ. ಆಶ್ರಯದಲ್ಲಿ ೧೯೬೯ರಲ್ಲಿ ಕ್ರೈಸ್ಟ್ ಕಾಲೇಜು ಸ್ಥಾಪಿತವಾಯಿತು. ಸುಮಾರು ಇಪ್ಪತ್ತೈದು ಎಕರೆ ಭೂಪ್ರದೇಶ ಈ ಕಾಲೇಜಿಗೆ ಸೇರಿದೆ. ಚಿ. ಶ್ರೀನಿವಾಸರಾಜು ಈ ಕಾಲೇಜಿಗೆ ಕನ್ನಡ ಅಧ್ಯಾಪಕರಾಗಿ ಸೇರಿದರು. ೧೯೭೨ರ ಡಿಸೆಂಬರ್ ೨೧ರಂದು ಕ್ರೈಸ್ಟ ಕಾಲೇಜ್ ಕನ್ನಡ ಸಂಘ ಹುಟ್ಟಿಕೊಂಡಿತು. ಯುವ ಬರಹಗಾರರಿಗೆ ಒತ್ತಾಸೆ, ಉತ್ತಮ ಸಾಹಿತ್ಯಾಭಿರುಚಿ ನಿರ್ಮಾಣ, ಕನ್ನಡ ಸಾಂಸ್ಕೃತಿಕ ಕ್ಷೇತ್ರದ ಉತ್ತಮಗೊಳಿಸುವಿಕೆ ಇದರ ಗುರಿ.

ಈ ಶತಮಾನದ ಆರಂಭದ ದಶಕಗಳಲ್ಲಿ ಕನ್ನಡ ಸಾಹಿತ್ಯ ಚಟುವಟಿಕೆಗಳು ವಿವಿಧ ರೂಪಗಳಲ್ಲಿ ಪ್ರಕಟಗೊಂಡವು. ಆ ತಲೆಮಾರಿನ ಟಿ.ಎಸ್. ವೆಂಕಣ್ಣಯ್ಯ, ಬೆಳ್ಳಾವೆ ವೆಂಕಟನಾರಣಪ್ಪ, ಡಾ.ಎ.ಆರ್ ಕೃಷ್ಣಶಾಸ್ತ್ರಿ, ಬಿ.ಎಂ. ಶ್ರೀ, ಡಿ.ವಿ.ಜಿ. ಮುಂತಾದವರು ಕ್ರಮಬದ್ಧವಾಗಿ ಕನ್ನಡವನ್ನು ಬೆಳೆಸಿದರು.

ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಸ್ವಾಭಿಮಾನ ಹಾಗೂ ಅದರ ಸಾಂಸ್ಕೃತಿಕ ಶ್ರೀಮಂತಿಕೆ ಬಗ್ಗೆ ಜಾಗೃತಿ ಮೂಡಿಸಬೇಕಾಗಿತ್ತು. ಅದಕ್ಕಾಗಿ ೧೯೧೪ರಲ್ಲಿ ಎ.ಆರ್.ಕೃ. ಅವರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘವನ್ನು ಪ್ರಾರಂಭಿಸಿದರು. ಆಗಿಲ ಕಾಲದ ಹಲವಾರು ಮುಖ್ಯ ಪುಸ್ತಕಗಳು ಬೆಳಕು ಕಂಡಿದ್ದೇ ಕರ್ನಾಟಕ ಸಂಘದಿಂದ. ಡಿ.ವಿ.ಜಿ, ಬಿ.ಎಂ.ಶ್ರೀ, ಎಂ.ಆರ್. ಶ್ರೀನಿವಾಸಮೂರ್ತಿ, ಕುವೆಂಪು. ಜಿ.ಪಿ. ರಾಜರತ್ನಂ ಮುಂತಾದ ಹಲವು ಹತ್ತು ಸಾಹಿತ್ಯ ದಿಗ್ಗಜರ ಪುಸ್ತಕಗಳು ಕರ್ನಾಟಕ ಸಂಘದಿಂದ ಪ್ರಕಟಗೊಂಡವು.

ಎ.ಆರ್.ಕೃ. ಆರಂಭಿಸಿದ ಈ ಕೈಂಕರ್ಯವನ್ನು ಮುಂದುವರಿಸಿಕೊಂಡು ಮುಂದಿನ ಪೀಳಿಗೆಗೆ ದೀವಿಗೆಯಾದವವು, ತಮ್ಮನ್ನು ಸಂತೋಷದಿಂದ 'ಸಾಹಿತ್ಯ ಪರಿಚಾರಕ' ಎಂದು ಪರಿಚಯಿಸಿಕೊಳ್ಳುವುದರಲ್ಲಿ ಹೆಮ್ಮೆ ಪಟ್ಟುಕೊಂಡವರೂ ಆದ ಜಿ.ಪಿ. ರಾಜರತ್ನಂ. ೧೯೫೨ರಲ್ಲಿ ಸೆಂಟ್ರಲ್ ಕಾಲೇಜ್ ಕನ್ನಡ ಸಂಘಕ್ಕೆ ಪುನರ್ಜನ್ಮ ನೀಡಿದರು. ಕೆ.ವಿ. ಅಯ್ಯರ್, ಎಸ್.ಜಿ. ಶಾಸ್ತ್ರಿ, ವಿ.ಸೀ. ಮಂಜೇಶ್ವರ, ಗೋವಿಂದ ಪೈ, ಬಿ.ಜಿ.ಎಲ್. ಸ್ವಾಮಿ ಮುಂತಾದವರ ಪುಸ್ತಕಗಳು ಹೊರ ಬಂದವು.

ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು ಕಾಲೇಜ್ ಬರವಣಿಗೆ ಎಂಬ ಮಾಲೆಯನ್ನೇ ಆರಂಭಿಸಿದರು. ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದಿಂದ ಆ ದಿನಗಳಲ್ಲೇ ಅನೇಕ ಕರ್ನಾಟಕ ಸಂಘಗಳು ಹುಟ್ಟಿಕೊಂಡವು. ಮೈಸೂರು ಮಹಾರಾಜಾ ಕಾಲೇಜ್ ಕರ್ನಾಟಕ ಸಂಘ, ಶಿವಮೊಗ್ಗ ಕರ್ನಾಟಕ ಸಂಘ, ಚಿಕ್ಕಮಗಳೂರು ಕರ್ನಾಟಕ ಸಂಘ ಮುಂತಾದವು ಕೆಲವು.

ಜಿ.ಪಿ. ರಾಜರತ್ನಂರ ಸಾಹಿತ್ಯ ಪರಿಚಾರಿಕೆಯ ದೀಕ್ಷೆಯನ್ನು ನೇರವಾಗಿ ಅವರಿಂದಲೇ ಪಡೆದ ಶ್ರೀನಿವಾಸರಾಜು ಅವರ ಗುರು ನುಡಿದ ಭವಿಷ್ಯವನ್ನು ನಿಜ ಮಾಡುವುದರಲ್ಲಿ ಸಂಪೂರ್ಣ ತಮ್ಮನ್ನು ತೊಡಗಿಸಿಕೊಂಡಿದ್ದಾರೆ; **"ಈಗ ವಾಮನನಾಗಿರುವ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವು ಕಾಲಕ್ರಮದಲ್ಲಿ ತ್ರಿವಿಕ್ರಮನಾಗುವ ಬಗ್ಗೆ ಸಂದೇಹವಿಲ್ಲ".** ಬಹುಶಃ ಅವರಿಗೆ ಈ ಭರವಸೆ ಮೂಡಿದ್ದು ತಮ್ಮ ಶಿಷ್ಯ ಶ್ರೀನಿರಾಸರಾಜು ಅದರ ಬೆನ್ನೆಲುಬಾಗಿದ್ದುದೇ ಕಾರಣವಿರಬಹುದು.

ಶ್ರೀನಿವಾಸರಾಜು ತಮ್ಮ ಗುರುಗಳ ಮಾತನ್ನು ಸಾರ್ಥಕಗೊಳಿಸಿದ್ದಾರೆ. ನೂರು ಉತ್ತಮ ಪುಸ್ತಕಗಳನ್ನು ಹೊರತಂದಿದ್ದಾರೆ. ಅಲ್ಲಿ ಗುಣಕ್ಕೆ ಪೂಜ್ಯತೆ. ಕನ್ನಡದಲ್ಲಿ ಉತ್ತಮ ಪುಸ್ತಕವನ್ನು ಯಾರೇ ರಚಿಸಿದರೂ ಅದನ್ನು ಪ್ರಕಟಿಸಿದ್ದಾರೆ. ಹೆಸರಿಗೆ ಕಾಲೇಜ್ ಕನ್ನಡ ಸಂಘವಾದರೂ ಕಾರ್ಯ ಮಾತ್ರ ಕರ್ನಾಟಕ ವ್ಯಾಪ್ತಿ. ೧೭ ಕೃತಿಗಳಿಗೆ ಪ್ರಶಸ್ತಿಗಳು ಬಂದಿವೆ. (ಶ್ರೀನಿವಾಸರಾಜು ಅವರ ನಾಟಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. ಆದರೆ ಅದು ಕ್ರೈಸ್ಟ ಕಾಲೇಜ್ ಕನ್ನಡ ಸಂಘದ ಪುಸ್ತಕಗಳ ಪಟ್ಟಿಯಲ್ಲಿಲ್ಲ. ಬಹುಶಃ ತಮ್ಮ ಪುಸ್ತಕವನ್ನು ತಾವೇ ಸಂಚಾಲಕರಾಗಿರುವ ಸಂಸ್ಥೆಯಿಂದ ಪ್ರಕಟಿಸುವುದು ಅವರಿಗೆ ಸರಿಗಾಣದಿರಬಹುದು.)

ಎ.ಆರ್. ಕೃ., ಜಿ.ಪಿ. ರಾಜರತ್ನಂ, ಶ್ರೀನಿವಾಸರಾಜು ಆವರ ಪರಂಪರೆ ಬೆಳೆಯಬೇಕು. ಅದು ಎಷ್ಟು ಬೆಳೆದರೆ ಅಷ್ಟು ಕನ್ನಡಕ್ಕೆ ಆರೋಗ್ಯಕರ. ಪ್ರಸಿದ್ಧಿ, ಕೀರ್ತಿ, ಹೆಸರು, ವೇದಿಕೆ, ಭಾಷಣ ಮುಂತಾದವು ಶ್ರೀನಿವಾಸರಾಜು ಅವರಿಗೆ ವರ್ಜ್ಯ. ಕೇವಲ ಕನ್ನಡದ ಕಾಯಕದಲ್ಲೇ ಅವರು ಸಂತೋಷ ಕಾಣುವವರು. ಆದರೆ ಅವರು ಶಾಂತ, ಸದ್ದುಗದ್ದಲವಿಲ್ಲದ ಕೆಲಸದಿಂದಲೇ ಸಾಹಿತ್ಯಾಸಕ್ತರ ಗಮನ ಸೆಳೆದಿದ್ದಾರೆ. ಗೌರವ ಗಳಿಸಿದ್ದಾರೆ.

'..... ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಂದರೆ ಅಶೈಕ್ಷಣಿಕ ವಾತಾವರಣವಿರುವ ಸ್ಥಳಗಳೆಂದು (ಕೆಲವೊಮ್ಮೆ ಸರಿಯಾಗಿ) ವರ್ಣಿಸುವ ಪ್ರವೃತ್ತಿ ನಮ್ಮಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆ. ಇಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲಿ ಆಶಾಭಾವನೆಯನ್ನು ಹುಟ್ಟಿಸುವಂತೆ ಬೆಂಗಳೂರಿನ ಕ್ರೈಸ್ಟ ಕಾಲೇಜಿನ ಕನ್ನಡ ಸಂಘ ನಿರಂತರ ಚಟುವಟಿಕೆಗಳಲ್ಲಿ ತೊಡಗಿದೆ. ಉತ್ತಮ ಸಾಹಿತ್ಯ ಕೃತಿಗಳನ್ನು ಪ್ರಕಾಶಿಸುವುದರ ಜೊತೆಗೆ ವಿದ್ಯಾರ್ಥಿಗಳನ್ನು ಉತ್ತೇಜಿಸುವ ಸ್ಪರ್ಧೆಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಸಂಘದ ಸಾರಥಿಯಾದ ಶ್ರೀನಿವಾಸರಾಜು ಅವರು ನಾಡಿನ ಎಲ್ಲ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಉಪನ್ಯಾಸಕರಿಗೆ ಮಾರ್ಗದರ್ಶಿಯಾಗಿದ್ದಾರೆ.....'

ಎ.ಆರ್. ನಾಗಭೂಷಣ
ಸಾಪ್ತಾಹಿಕ ಪುರವಣಿ
ಪ್ರಜಾವಾಣಿ
೨೧.೦೮.೧೯೯೪

ನಾಟಕ ಅಭಿರುಚಿ ಕೇಂದ್ರದಲ್ಲಿ ನನ್ನ ಅನುಭವಗಳು

ಎಸ್. ಶ್ರೀಧರ್
ಎರಡನೆಯ ಪದವಿ

ನನ್ನ ಮತ್ತು ಕನ್ನಡ ನಾಟಕ ಅಭಿರುಚಿ ಕೇಂದ್ರದ ಸಂಬಂಧ, ಕ್ರೈಸ್ಟ್ ಕಾಲೇಜ್ ಮತ್ತು ನಾಟಕಾಭಿರುಚಿ ಕೇಂದ್ರದ ಸಂಬಂಧದಷ್ಟೇ ಹಳೆಯದು, ಅಂದರೆ ಮೂರು ವರ್ಷದ್ದು. ನನಗೆ ಚಿಕ್ಕಂದಿನಿಂದ ನಟನೆಯಲ್ಲಿ ಆಸಕ್ತಿ ಯಿತ್ತು. ಆದರೆ ನಾಟಕಾಭಿರುಚಿ ಕೇಂದ್ರ ಸೇರುವವರೆಗು ನನಗೆ ಆ ಅವಕಾಶ ದೊರಕಿರಲಿಲ್ಲ.

ನಾನು ನಾಟಕಾಭಿರುಚಿ ಕೇಂದ್ರ ಸೇರಿ ದಾಗಿನಿಂದ ಮೂರು ನಾಟಕಗಳಲ್ಲಿ ಅಭಿನ ಯಿಸಿದ್ದೇನೆ. ನನ್ನ ಮೊದಲ ನಾಟಕ ಚೈತನ್ಯ ನಿರ್ದೇಶಿಸಿದ, ಪ್ರಸನ್ನರವರ ನಾಟಕ **"ದಂಗೆಯ ಮುಂಚಿನ ದಿನಗಳು"** ಆದರ ನಂತರ, ಕಳೆದ ವರ್ಷ ನಾನು, ಚೈತನ್ಯನೇ ನಿರ್ದೇಶಿ ಸಿದ, ಪಿ. ಲಂಕೇಶ್‌ರವರ **"ಸಂಕ್ರಾಂತಿ"** ಯಲ್ಲಿ ಅಭಿನಯಿಸಿದೆ.

ಈ ಎರಡೂ ನಾಟಕಗಳಲ್ಲಿ ನನಗೆ ದೊರೆ ತದ್ದು ಸಣ್ಣ ಪಾತ್ರಗಳು. ಆದ್ದರಿಂದ ಮೊದಲು ನನಗೆ ಬೇಜಾರಾಯಿತು. ಆದರೆ, ದಿನಗಳು ರುಳಿದಂತೆ ಅಲ್ಲಿನ ಜನರ ಪ್ರೀತಿ, ವಿಶ್ವಾಸ ಗಳಲ್ಲಿ ಮಿಂದ ನನ್ನ ಮನಸ್ಸಿಗೆ ಆ ಬೇಜಾರಿನ ಗುರುತು ಇಲ್ಲದಂತಾಯಿತು. ಆದರೆ ನಾನು ಒಂದು ದೊಡ್ಡ ಪಾತ್ರಕ್ಕೆ ಇನ್ನೂ ಹೆಚ್ಚು ಕಾಯಬೇಕಾಗಿರಲಿಲ್ಲ. ಅಂದರೆ ಈ ವರ್ಷ ನನಗೆ ಅರವಿಂದ್ ಎಸ್.ಡಿ ನಿರ್ದೇಶಿಸಿದ ಚಂದ್ರಶೇಖರ ಕಂಬಾರರ **"ಜೋಕುಮಾರ ಸ್ವಾಮಿ"** ಯಲ್ಲಿ ಗುರ್ವನ ಪಾತ್ರ ದೊರೆ ಯಿತು. ಈ ಪ್ರಸಂಗ ನನಗೆ ತಾಳ್ಮೆಯನ್ನು ಹೇಳಿಕೊಟ್ಟಿತು.

ನನ್ನ ಹಿಂದಿನ ಅನುಭವಗಳ ಹಿನ್ನೆಲೆ ಯಲ್ಲಿ ನಾನು ನಾಟಕಾಭಿರುಚಿ ಕೇಂದ್ರದಲ್ಲಿ ಒಂದು ರೀತಿಯ ಏಕಾಧಿಪತ್ಯವನ್ನು ನಿರೀಕ್ಷಿ ಸಿದ್ದೆ. ಆದರೆ ಅಲ್ಲಿ ನಾನು ಕಂಡದ್ದೆ ಬೇರೆ. ನಾಟಕದಲ್ಲಿ ಕೆಲಸ ಮಾಡುತ್ತಿದ್ದವರೆಲ್ಲರಲ್ಲಿಯೂ ಸಮಾನತೆ ಇತ್ತು. ನಾಟಕದ ಅತಿ ದೊಡ್ಡ ಪಾತ್ರ ನಿರ್ವಹಿಸುತ್ತಿದ್ದವನಿಂದ ಹಿಡಿದು ಬ್ಯಾಕ್ ಸ್ಟೇಜ್ ಕೆಲಸ ಮಾಡುವವನವರೆಗೂ ಎಲ್ಲರಿಗೂ ಸಮಾನ ಮರ್ಯಾದೆ ದೊರೆಯುತ್ತಿತ್ತು.

ನಾನು ಕಂಡ ಮೂರು ತಂಡಗಳಲ್ಲಿ ಹುಡುಗರು - ಹುಡುಗಿಯರು ಸೇರಿ ಸುಮಾರು ೩೦-೪೦ ಜನರಿದ್ದೆವು. ಇಷ್ಟು ಜನರಲ್ಲಿ ಪ್ರತಿಯೊಬ್ಬರು ಬೇರೆ ಬೇರೆ ಮನೆತನಗಳಿಂದ, ಹಿನ್ನೆಲೆಯಿಂದ ಬಂದಿದ್ದವರಾಗಿದ್ದರೂ ಪ್ರತಿ ಯೊಬ್ಬರೂ ಮಿಕ್ಕವರ ಜೊತೆ ಹಾಲಿನಲ್ಲಿ ಸಕ್ಕರೆ ಬೆರೆತಂತೆ ಬೆರೆತು ಹೋಗಿದ್ದರು.

ಇಂತಹ ವಾತಾವರಣದಲ್ಲಿ ಪ್ರತಿದಿನ ಸಾಯಂಕಾಲ ಕಳೆಯುತ್ತಿದ್ದ ನನ್ನಲ್ಲಿ, ಸ್ವಯಂ ಪ್ರಜ್ಞೆಯಿಲ್ಲದ ನನ್ನ ವ್ಯಕ್ತಿತ್ವದಲ್ಲಿ ಅನೇಕ ಬದಲಾವಣೆಗಳಾದವು. ೩೦-೪೦ ಜನರ ಜೊತೆ ದಿನಾ ಬೆರೆಯುತ್ತಿದ್ದ ನನ್ನಲ್ಲಿ ಭ್ರಾತೃತ್ವದ ಭಾವನೆ ಬೆಳೆಯಿತು, ನನ್ನ ಆತ್ಮವಿಶ್ವಾಸ ಹೆಚ್ಚಿತು. ಅಳುಕು ನನ್ನನ್ನು ಕಂಡರೆ ಅಳುಕುವಂತಾ ಯಿತು. ನಾಟಕಾಭಿರುಚಿ ಕೇಂದ್ರದಲ್ಲಿ ನಾನು ಕಲಿತ ಇನ್ನೆರಡು ಸದ್ಗುಣಗಳೆಂದರೆ ಶಿಸ್ತು ಮತ್ತು ಸಮಯಪಾಲನೆ.

ಆದರೆ ಎಲ್ಲದಕ್ಕಿಂತ ಮಿಗಿಲಾದ ಬದ ಲಾವಣೆಯೆಂದರೆ ಬದಲಾದ ನನ್ನ ದೃಷ್ಟಿ ಕೋನ. ನಾಟಕಾಭಿರುಚಿ ಕೇಂದ್ರದಲ್ಲಾದ ಅನು ಭವಗಳ ನಂತರ ನನಗೆ ಜೀವನದ ಘಟನೆ ಗಳಲ್ಲಿ, ಸಂಬಂಧಗಳಲ್ಲಿ ಎಲ್ಲದರಲ್ಲಿಯೂ ಒಂದು ರೀತಿಯ ಅರ್ಥವಂತಿಕೆ ಕಾಣುತ್ತಿದೆ. ಒಂದೇ ಮಾತಿನಲ್ಲಿ ಹೇಳಬೇಕಾದರೆ ಹುಡು ಗಾಟಿಕೆಯಿಂದ ನಾಟಕಾಭಿರುಚಿ ಕೇಂದ್ರ ಸೇರಿದ ನಾನು, ಕೇಂದ್ರದ ಜೊತೆಯೇ ಬೆಳೆದು ಜವಾಬ್ದಾರಿ ಅರಿತ ಹುಡುಗನಾದೆ.

ನನಗಿಲ್ಲಾದ ಇನ್ನೊಂದು ಅನುಭವವೆಂ ದರೆ ಯಶಸ್ಸಿನ ಸುಖದ ಅನುಭವ. ನಮ್ಮ ತಂಡ ಹೋದೆಡೆಯಲ್ಲೆಲ್ಲಾ ಜಯಭೇರಿ ಹೊಡೆ ಯಿತು. "ದಂಗೆಯ ಮುಂಚಿನ ದಿನಗಳು" ಮತ್ತು "ಸಂಕ್ರಾಂತಿ"ಯ ಮೂಲಕ ಕಾಲೇಜು ಹಂತದಲ್ಲಿ, ಆಗಲೇ ದಂಗೆ ಎಬ್ಬಿಸಿದ್ದ ನಾವು "ಜೋಕುಮಾರ ಸ್ವಾಮಿ"ಯ ಮಹಿಮೆಯಿಂದ ಹದಿನಾರು ಪ್ರಶಸ್ತಿಗಳ ಸುಗ್ಗಿಯನ್ನು ಕಂಡೆವು.

ನಾಟಕ ಅಭಿರುಚಿ ಕೇಂದ್ರ "ದಂಗೆಯ ಮುಂಚಿನ ದಿನಗಳು" ಅಲ್ಲಿ ಚಿಗುರಿ, "ಸಂಕ್ರಾಂತಿ"ಗೆ ಪ್ರಶಸ್ತಿಗಳ ಸುಗ್ಗಿಯನ್ನು ತಂದು ಕೊಟ್ಟು, "ಜೋಕುಮಾರ ಸ್ವಾಮಿ"ಯ ಪಲ್ಲೆ ಯನ್ನುಂಡು, ಕನ್ನಡ ರಂಗಕ್ಕೆ ಅನೇಕ ಪ್ರತಿ ಭಾವಂತ ರಂಗ ಕಲಾವಿದರನ್ನು ಕೊಟ್ಟಿದೆ.

ನಾಟಕಾಭಿರುಚಿ ಕೇಂದ್ರದ ಈ ವಿಜಯ ಯಾತ್ರೆಯ ಮಾರು ವರ್ಷದ ಪ್ರಯಾಣವನ್ನು ಕಂಡು, ಕೇಂದ್ರದೊಡನೆಯೇ ಬೆಳೆದ ನನ್ನ ಅನುಭವಗಳ ಮೌಲ್ಯ ಪದಗಳಿಗೆ ಮೀರಿದ್ದು. ಈಗ ನಾಟಕ ಮತ್ತು ನನ್ನ ಜೀವನ, ಒಂದ ನ್ನೊಂದು ಹೆಣೆದುಕೊಂಡಿದೆ. ●

ಹಿರಿಯರ ಹರಕೆ

ಶಾಂತರಸ
ರಾಯಚೂರು

ನೀವು ಪ್ರೀತಿಯಿಟ್ಟು ಕಳಿಸಿದ ನೂರನೆಯ ಪುಸ್ತಕದ ಬಿಡುಗಡೆ ಸಮಾರಂಭದ ಆಮಂತ್ರಣ ಪತ್ರಿಕೆ ಬಂದಿದೆ.

ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ಒಂದು ನೂರು ಉತ್ತಮ ಗ್ರಂಥಗಳನ್ನು ಪ್ರಕಟಿಸಿದ್ದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ದೊಡ್ಡ ಮತ್ತು ಆದರ್ಶಮಯವಾದ ದಾಖಲೆಯಾಗಿದೆ. ದೊಡ್ಡ ದೊಡ್ಡ ಪ್ರಕಾಶಕರು, ಪ್ರಕಟನಾಲಯಗಳು ಗ್ರಂಥ ಪ್ರಕಟನೆ ಮತ್ತು ಅವುಗಳ ಮಾರಾಟದಲ್ಲಿ ಯಶಸ್ಸು ಕಾಣದೆ ಒದ್ದಾಡುತ್ತಿರುವಾಗ ಒಂದು ಕಾಲೇಜಿನ ಸಂಘ ಯಾವ ಅಡೆತಡೆಗಳಿಲ್ಲದೆ ನಿರಾಯಾಸವಾಗಿ ಒಂದು ನೂರು ಪುಸ್ತಕಗಳನ್ನು ಪ್ರಕಟಿಸಿ ಮುಂದುವರೆಯುತ್ತಿರುವುದು ರಾಜ್ಯಮಟ್ಟದಲ್ಲಿ ಅಷ್ಟೇ ಅಲ್ಲ ರಾಷ್ಟ್ರಮಟ್ಟದಲ್ಲಿ ಇದೊಂದು ಮಹಾಕಾರ್ಯ. ಅನ್ಯಪ್ರಕಾಶಕರಂತೆ ನಿಮ್ಮ ಪ್ರಕಾಶನ ಅಲ್ಲ; ಅದು ಗ್ರಂಥಗಳ ಆಯ್ಕೆಯಲ್ಲಿ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿದೆ. ಬಹುಶಃ ಭಾರತದ ಯಾವ ಕಾಲೇಜೂ ಇಂಥ ಕಾರ್ಯವನ್ನು ಮಾಡಿಲ್ಲ.

ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದಿಂದ ಪುಸ್ತಕ ಪ್ರಕಟವಾಗುವುದು ತಮಗೆ ಗೌರವದ ಸಂಗತಿಯೆಂದು ಕರ್ನಾಟಕದ ಸಾಹಿತಿಗಳು, ಕವಿಗಳು ಭಾವಿಸಿದ್ದಾರೆ. ಪ್ರಸಿದ್ಧರಿಗಷ್ಟೇ ಅಲ್ಲ ಉದಯೋನ್ಮುಖ ಸಾಹಿತಿಗಳಿಗೆ ನೀವು ನೀಡುತ್ತಿರುವ ಪ್ರೋತ್ಸಾಹ ಆರೋಗ್ಯಪೂರ್ಣವಾದುದು, ಅವರು ಬೆಳೆಯುವ ಮಾರ್ಗ ಸೂಚಿಯಾದುದು. ಉದಯೋನ್ಮುಖರಿಗೆ ನಿಮ್ಮಿಂದ ದೊರಕಿದಷ್ಟು ಪ್ರೋತ್ಸಾಹ ಬೇರೆಡೆ ಎಲ್ಲಿಯೂ ಕಂಡುಬರುವುದಿಲ್ಲ.

ಕನ್ನಡ ಸಂಘಕ್ಕೆ ನೀವು ಮೂಲಶಕ್ತಿ, ಜೀವ ಧನ; ನಿಮ್ಮ ಸೇವೆ, ಕಾರ್ಯವಿಧಾನ, ಸಂಘಟನಾ ಚಾತುರ್ಯ ಯಾರೂ ಅನುಕರಣೆ ಮಾಡುವಂತಹುದು. ವ್ಯರ್ಥ ಟಾಮ್ ಟಾಮ್, ಅಬ್ಬರದ ಪ್ರಚಾರ ಯಾವುದೂ ಇಲ್ಲದೆ ಮೌನವಾಗಿ ಹೂವರಳಿದಂಥ ಕಾರ್ಯ ನಿಮ್ಮದು ಮತ್ತು ನಿಮ್ಮ ಸಂಘದ್ದು; ನಿಮ್ಮ ಜೊತೆಗೆ ನಿಂತು ಸಹಕರಿಸುತ್ತಿರುವ ಪ್ರಾಧ್ಯಾಪಕ ವೃಂದವನ್ನು ಮರೆಯುವಂತಿಲ್ಲ, ಇದರಂತೆ ಪ್ರಾಂಶುಪಾಲರಾದ ರೆ ॥ ಫಾ ॥ ಡಾ ॥ ಅಂತೋಣಿ ಕರಿಯಲ್ ಅವರನ್ನು ಮರೆಯುವಂತಿಲ್ಲ.

ಸಾಹಿತ್ಯ ಸಂಸ್ಕೃತಿಯ ಅಭಿವೃದ್ಧಿಯೇ ನನ್ನ ದೃಷ್ಟಿಯಲ್ಲಿ ನಾಡಿನ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಗೆ ಮೂಲಧನವಾದುದು. ಈ ಸಂವರ್ಧನೆಗೆ ಬೇಕಾದುದು ಶ್ರದ್ಧೆ, ನಿರಂತರ ಸೇವೆ, ನಿರ್ಮಲ ಹೃದಯ, ಜನ ಬದುಕಬೇಕು, ಚೆನ್ನಾಗಿ ಬದುಕಬೇಕು ಎಂಬ ಹಂಬಲ, ಉದಾಸೀನ ರಹಿತ ಮನಸ್ಸಿನ ಒಲವು, ಧ್ಯೇಯ ಧೋರಣೆಗೆ ಆಪತ್ತು ಸಂಭವಿಸಿದಾಗ ರಾಜಿ ಮಾಡಿಕೊಳ್ಳದ ಎದೆಗಾರಿಕೆ. ಈ ಎಲ್ಲ ಗುಣ ವಿಶೇಷಗಳು ನಿಮ್ಮಲ್ಲಿವೆ. ಅಂತೆಯೇ ನೀವು ಕನ್ನಡ ಸಂಘ ಕಟ್ಟಿದಿರಿ, ಸ್ನೇಹಿತರನ್ನು ಬೆಳೆಸಿದಿರಿ ; ಕಾಲೇಜಿಗೆ ಕೀರ್ತಿ ತಂದಿರಿ. ಕನ್ನಡ ನಾಡು ನುಡಿಯ ಸೇವೆ ಮಾಡುತ್ತೇವೆ ಎಂದು ಒದರಾಡುವ, ಚೀರಾಡುವ, ಗುದ್ದಾಡುವ, ಇವುಗಳಲ್ಲೇ ಬಿದ್ದು ಒದ್ದಾಡುವ ಮುಂದಾಳುಗಳು, ರಾಜಕಾರಣಿಗಳು, ನಿಮ್ಮತ್ತ, ನಿಮ್ಮ ಕಾಲೇಜಿನತ್ತ ದೃಷ್ಟಿಹಾಯಿಸಬೇಕು; ಪಾಠ ಕಲಿಯಬೇಕು.

ನಾನು ನಿಮ್ಮನ್ನು ಹೊಗಳುತ್ತಿಲ್ಲ. ಸತ್ಯವನ್ನು ಸತ್ಯವೆಂದು ನಾವು ಹೇಳಲು ಹಿಂದೆ ಮುಂದೆ ನೋಡಬಾರದು. ಒಳಿತನ್ನು ಸತ್ಯವನ್ನು ಅರಿಯಲಾರದೆ ಗುರುತಿಸಲಾರದೆ ನಾವು ಕೆಟ್ಟಿದ್ದೇವೆ; ನಾಡನ್ನು ಕೆಡಿಸಿದ್ದೇವೆ. ಕೀರ್ತಿಶನಿಯಿಂದ ನೀವು ದೂರ, ಬಹಳ ದೂರ. ಹೀಗೆಂದು ನಿಮ್ಮ ವ್ಯಕ್ತಿತ್ವವನ್ನು ಮೆಚ್ಚಿ ನೆನೆಯದೆ ಇರಲಿಕ್ಕಾದೀತೆ ?

ನೂರನೆಯ ಪುಸ್ತಕ ಬಿಡುಗಡೆಯಾಗುವ ಈ ಸಂದರ್ಭದಲ್ಲಿ ನನ್ನ ಹಾರ್ದಿಕ ಅಭಿನಂದನೆಗಳನ್ನು ದಯವಿಟ್ಟು ಸ್ವೀಕರಿಸಿ; ನಿಮ್ಮ ಸಹೋದ್ಯೋಗಿಗಳಿಗೆ ನನ್ನ ಅಭಿನಂದನೆಗಳನ್ನು ತಿಳಿಸಿರಿ.


ಒಂದು ವಿನಮ್ರ ಸಲಹೆ : ಈಗ ಬೇಂದ್ರೆ ಶತಮಾನೋತ್ಸವದ ಸಂಭ್ರಮ. ಹಿಂದೆ ನೀವು ಅವರ ಬಣ್ಣದ ಭಾವಚಿತ್ರ ಪ್ರಕಟಿಸಿದ್ದಿರಿ. ಮತ್ತೊಮ್ಮೆ ಪ್ರಕಟಿಸಿ. ಲಕ್ಷ ಸಂಖ್ಯೆಯಲ್ಲಿ ಅವು ಜನರನ್ನು ಮುಟ್ಟಬೇಕು.

ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿಸೈ ಮನುಜಮತಕೆ
ಓ, ಬನ್ನಿ, ಸೋದರರೆ, ವಿಶ್ವಪಥಕೆ

ಕುವೆಂಪು
ಕೋಗಿಲೆ

ಅನಂತಮೂರ್ತಿ ಅವರಿಗೆ ಜ್ಞಾನಪೀಠ ಪ್ರಶಸ್ತಿ

ಈ ಮೊದಲು ಕನ್ನಡದ ಸಾಹಿತಿಗಳಾದ ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ವಿನಾಯಕ ಕೃಷ್ಣ ಗೋಕಾಕ್ ಅವರಿಗೆ ಈ ಪ್ರಶಸ್ತಿ ಲಭಿಸಿದೆ.



'ತುಂಬ ಹಿರಿಯರಿಗೆ ಸಿಕ್ಕಿದ್ದ ಗೌರವ ಇದು. ನನಗೆ ಬಹಳ ಸಂತೋಷವಾಗಿದೆ. ಏನು ಹೇಳ ಬೇಕೋ ಗೊತ್ತಾಗುತ್ತಿಲ್ಲ. ಆದರೆ, ಓದುಗರಿಗೂ, ಬರಹಗಾರರಿಗೂ ಒಂದು ಸರಳವಾದ ಸಂಬಂಧ ಇರುತ್ತದೆ. ಇಂಥ ದೊಡ್ಡ ಗೌರವಗಳು ಆ ಸಂಬಂಧವನ್ನು ಕ್ಲಿಷ್ಟಗೊಳಿಸುವುದೇನೊ....' ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ನಮೂದಿಸಿರುವ ಭಾಷೆಯಲ್ಲಿ ಬರೆಯುವ ಭಾರತೀಯ ಬರಹಗಾರರ ಸೃಜನಶೀಲ ಬರವಣಿಗೆಯನ್ನು ಗೌರವಿಸಿ, ಗಣನೀಯ ಕೊಡುಗೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈ ಬಾರಿಯ ಪ್ರಶಸ್ತಿಯೊಂದಿಗೆ ಒಟ್ಟು ೩೨ ಮಂದಿಗೆ ಈ ಗೌರವ ದೊರೆತಂತಾಗುತ್ತದೆ.

ಅನಂತಮೂರ್ತಿಯವರ ಮೊದಲ ಸಣ್ಣಕತೆಗಳ ಸಂಕಲನ 'ಎಂದೆಂದೂ ಮುಗಿಯದ ಕಥೆ' ೧೯೫೫ ರಲ್ಲಿ ಪ್ರಕಟವಾಯಿತು. ೧೯೬೫ ರಲ್ಲಿ ಬಿಡುಗಡೆಯಾದ ಅವರ ಮೊದಲ ಕಾದಂಬರಿ 'ಸಂಸ್ಕಾರ' ಅವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿತು. ಇದು ಚಲನಚಿತ್ರ ಆದುದಲ್ಲದೆ ಶ್ರೇಷ್ಠ ಕಥೆ ಪ್ರಶಸ್ತಿಯನ್ನು ಗಳಿಸಿತು. ಇದನ್ನು ಅನಂತರ ಹಲವು ಭಾರತೀಯ ಮತ್ತು ಐರೋಪ್ಯ ಭಾಷೆಗಳಿಗೆ ಭಾಷಾಂತರಿಸಲಾಗಿದೆ. ಅಮೆರಿಕದ ಕೆಲವು ವಿಶ್ವ ವಿದ್ಯಾಲಯಗಳಲ್ಲಿ ಇದು ಪಠ್ಯವಾಗಿತ್ತು.

ಪ್ರೊ. ಅನಂತಮೂರ್ತಿ ಅವರು ಈವರೆಗೆ ಒಟ್ಟು ಮೂರು ಕವನ ಸಂಕಲನ, ನಾಲ್ಕು ಸಣ್ಣ ಕಥೆಗಳ ಸಂಕಲನ, ನಾಲ್ಕು ವಿಮರ್ಶಾ ಲೇಖನಗಳ ಸಂಗ್ರಹ ಮತ್ತು ನಾಲ್ಕು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ಭಾರತೀಪುರ' ಮತ್ತು 'ಅವಸ್ಥೆ' ಅವರ ಇನ್ನೆರಡು ಜನಪ್ರಿಯ ಕಾದಂಬರಿಗಳು. 'ಭವ' ಅವರ ಇತ್ತೀಚಿನ ಕಾದಂಬರಿ.

೧೯೭೪ ಮತ್ತು ೧೯೯೩ ರ ಮಧ್ಯೆ ಪ್ರಕಟವಾದ ಅವರ ಪ್ರಮುಖ ಕೃತಿಗಳಲ್ಲಿ 'ಆಕಾಶ ಮತ್ತು ಬಿಕ್ಕು', 'ಪ್ರಜ್ಞೆ ಮತ್ತು ಪರಿಸರ', 'ಸನ್ನಿವೇಶ', 'ಸಮಕ್ಷಮ' ಮತ್ತು 'ಪೂರ್ವಾಪರ' ಪ್ರಮುಖವಾದವು. 'ತಾವೋ ಪದ್ಯಗಳು' ಅನುವಾದ ಇತ್ತೀಚೆಗೆ ಪ್ರಕಟವಾಗಿದೆ. ಇದಲ್ಲದೆ ಅನಂತಮೂರ್ತಿ ಅವರು ಸಾಹಿತ್ಯ ಮತ್ತು ಸಂಸ್ಕೃತಿಗಾಗಿಯೇ ಮೀಸಲಾಗಿರುವ 'ರುಜುವಾತು' ಎಂಬ ಕನ್ನಡ ನಿಯತಕಾಲಿಕ ಪ್ರಕಟಿಸುತ್ತಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕರಾಗಿದ್ದ ಅನಂತಮೂರ್ತಿ ಅವರು ಕೇರಳದ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿಯೂ ಸೇವೆ ಸಲ್ಲಿಸಿದ್ದಾರೆ. ತಮ್ಮ ಸೃಜನಶೀಲ ಬರಹಕ್ಕಾಗಿ ಅವರು ದೇಶ ವಿದೇಶಗಳಲ್ಲಿ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಶೈಕ್ಷಣಿಕವಾಗಿ ಅತ್ಯುನ್ನತ ಸಾಧನೆ ಮಾಡಿದ ಅನಂತಮೂರ್ತಿ ಅವರು ಬರ್ಮಿಂಗ್ ಹ್ಯಾಂ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಅಲ್ಲದೆ ಆಯೋವಾ ವಿಶ್ವವಿದ್ಯಾಲಯದಿಂದ ಗೌರವ ಫೆಲೋಷಿಪ್ ಅನ್ನೂ ತಮ್ಮದಾಗಿಸಿಕೊಂಡಿದ್ದಾರೆ. ಪ್ರಸ್ತುತ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾರೆ.

ಸೃಜನಶೀಲ ಚಿಂತನೆಯ ಮೂಲಕ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಮೇಲೆ ಕಳೆದ ಮೂರು ದಶಕಗಳಿಂದ ಪ್ರಭಾವ ಬೀರಿದವರು.

೧೯೬೨ ರಲ್ಲಿ ಕನ್ನಡ ಮತ್ತು ಬಂಗಾಳಿ ಹಾಗೂ ೧೯೭೩ ರಲ್ಲಿ ಕನ್ನಡ ಮತ್ತು ಒರಿಯಾ ಭಾಷೆಗಳು ಈ ಪ್ರಶಸ್ತಿಯನ್ನು ಹಂಚಿಕೊಂಡಿವೆ. ಈ ಮೊದಲು, ಕನ್ನಡ ಮತ್ತು ಹಿಂದಿ ಭಾಷೆಗಳು ತಲಾ ಐದು ಬಾರಿ ಜ್ಞಾನಪೀಠ ಪ್ರಶಸ್ತಿ ಪಡೆದಿವೆ. ಬಂಗಾಳಿ ನಾಲ್ಕು ಬಾರಿ; ಮಲಯಾಳಂ ಮತ್ತು ಒರಿಯಾಗಳು ತಲಾ ಮೂರು ಬಾರಿ; ಗುಜರಾತಿ, ಮರಾಠಿ, ತೆಲುಗು ಮತ್ತು ಉರ್ದು ಗಳು ಎರಡು ಬಾರಿ ಹಾಗೂ ಅಸ್ಸಾಮಿ ಭಾಷೆ ಒಂದು ಬಾರಿ ಜ್ಞಾನಪೀಠ ಪ್ರಶಸ್ತಿ ಪಡೆದಿವೆ. ●

ಕನ್ನಡ ಐಚ್ಛಿಕ ತರಗತಿಗಳ ಪ್ರಾರಂಭ

ಇತಿಹಾಸ ನಿರ್ಮಿಸಿದ ಸಮಾರಂಭ

ಶ್ರೀನಿವಾಸ ಬಿ.ಕೆ., ರಾಜಮ್ಮ ಜೆ., ಮಂಜುಳ. ಎಲ್
ಮೊದಲನೆಯ ಪದವಿ

ನಮ್ಮ ಕಾಲೇಜಿನಲ್ಲಿ ಆಗಸ್ಟ್ ೧೬, ೧೯೯೪ರಂದು ಮಧ್ಯಾಹ್ನ ಮೂರು ಗಂಟೆಗೆ, ಕನ್ನಡ ಐಚ್ಛಿಕ ತರಗತಿಗಳು ೨೦೬ನೇ ಕೊಠಡಿಯಲ್ಲಿ ಪ್ರಾರಂಭವಾಯಿತು. ಅಂದು ಸಮಾರಂಭಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ|| ಹಂ. ಪ. ನಾಗರಾಜಯ್ಯ ಅವರು ಆಗಮಿಸಿದ್ದರು. ಕನ್ನಡ ಪ್ರೇಮಿಗಳು ಹಾಗೂ ನಮ್ಮ ಕಾಲೇಜಿನ ಪ್ರಿನ್ಸಿಪಾಲರಾದ ರೆ|| ಫಾ|| ಆಂತೋಣಿ ಕರಿಯಲ್ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾಲೇಜಿನ ಭಾಷಾ ವಿಭಾಗದ ಅಧ್ಯಾಪಕರು ಸಮಾರಂಭಕ್ಕೆ ಬಂದಿದ್ದರು.

ಕನ್ನಡ ಗೀತೆಯೊಂದಿಗೆ ಪ್ರಾರಂಭವಾದ ಈ ಸಮಾರಂಭ ಸುಸೂತ್ರವಾಗಿ ನಡೆಯಿತು. ಮೊದಲು ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರಾ|| ಚಿ. ಶ್ರೀನಿವಾಸರಾಜು ಅವರು ಸ್ವಾಗತ ಭಾಷಣವನ್ನು ಮಾಡಿ, ಕನ್ನಡ ಐಚ್ಛಿಕ ವಿಷಯವನ್ನು ತೆಗೆದುಕೊಳ್ಳುವುದರಿಂದ ನಮಗಾಗುವ ಅನುಕೂಲಗಳನ್ನು ತಿಳಿಸಿದರು. ನಂತರ ಡಾ|| ಹಂ. ಪ. ನಾಗರಾಜಯ್ಯ ಅವರು ತಮ್ಮ ಮಾತುಗಳಿಂದ ನಮ್ಮನ್ನೆಲ್ಲ ಬೆರಗುಗೊಳಿಸಿದರು. ಕನ್ನಡ ಭಾಷೆಗೆ ಯಾವ ರೀತಿಯಲ್ಲಿ ಕೆಲಸ ಮಾಡಬಹುದೆಂದು ತಿಳಿಸಿದರು. ಕನ್ನಡದಿಂದ ಅವರು ಹೇಗೆ ಮುಂದೆ ಬಂದರು ಎಂಬುದನ್ನು ವಿವರಿಸಿದರು. ಶ್ರದ್ಧೆಯಿಂದ, ಪ್ರೀತಿಯಿಂದ ಕನ್ನಡವನ್ನು ಕಲಿತರೆ ಏನನ್ನಾದರೂ ಸಾಧಿಸಬಹುದೆಂದರು. ನಮ್ಮ ಕಾಲೇಜಿನ ಪ್ರಿನ್ಸಿಪಾಲರು ಕೆಲವು ನಿಮಿಷಗಳು ಮಾತನಾಡಿ, ಕನ್ನಡ ಐಚ್ಛಿಕ ತರಗತಿಗಳನ್ನು ಪ್ರಾರಂಭಿಸಿದ ಹಿನ್ನೆಲೆಯನ್ನು, ಸಂತೋಷವನ್ನು ವ್ಯಕ್ತಪಡಿಸಿದರು. ಕನ್ನಡ ಐಚ್ಛಿಕವನ್ನು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸುವ ಹಾಗೂ ಕಾಲಾಂತರದಲ್ಲಿ ಕನ್ನಡ ಎಂ.ಎ., ತರಗತಿಗಳನ್ನು ಪ್ರಾರಂಭಿಸುವ ಭರವಸೆಯನ್ನು ನೀಡಿದರು. ಡಾ|| ಹಂ. ಪ. ನಾಗರಾಜಯ್ಯ ಅವರು ಹನ್ನೊಂದು ಜನ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಡಾ|| ರಂ. ಶ್ರೀ ಮುಗಳಿ ಅವರ 'ಕನ್ನಡ ಸಾಹಿತ್ಯ ಚರಿತ್ರೆ' ಪುಸ್ತಕವನ್ನು ನೀಡಿ, "ಒಳ್ಳೆಯ ಸಮಯದಲ್ಲಿ ಸಾಹಿತ್ಯ ಚರಿತ್ರೆಯ ಪುಸ್ತಕವನ್ನು ಕೊಡುತ್ತಿದ್ದೇನೆ. ನೀವು ಚೆನ್ನಾಗಿ ಓದಿ, ಇಡೀ ಕನ್ನಡ ಸಾಹಿತ್ಯದ ಹಕ್ಕುದಾರರಾಗಿ" ಎಂದು ಹೇಳಿದರು.

ನಾವು ಮೊದಲು ಕನ್ನಡ ಐಚ್ಛಿಕವನ್ನು ತೆಗೆದುಕೊಳ್ಳಲು ಹಿಂಜರಿಯುತ್ತಿದ್ದೆವು. ಆಗ ಕನ್ನಡ ವಿಭಾಗದ ಎಲ್ಲ ಅಧ್ಯಾಪಕರು ನಾವು ಕನ್ನಡ ಐಚ್ಛಿಕವನ್ನು ತೆಗೆದುಕೊಳ್ಳುವಂತೆ ಪ್ರೀತಿಯ ಒತ್ತಾಯ ಮಾಡಿದರು. ಅದು ಒಳ್ಳೆಯದೇ ಆಯಿತು. ಪ್ರೊ|| ಚಿ. ಶ್ರೀನಿವಾಸರಾಜು ಅವರು ಕನ್ನಡ ಐಚ್ಛಿಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕನ್ನಡ ವಿಭಾಗದಲ್ಲಿ ಗ್ರಂಥಭಂಡಾರವನ್ನು ಪ್ರಾರಂಭಿಸುವುದಾಗಿ ಹೇಳಿದರು. ಈ ಐತಿಹಾಸಿಕ ಸಮಾರಂಭದಲ್ಲಿ ಉಳಿದ ಭಾಷಾ ಅಧ್ಯಾಪಕರು ಭಾಗವಹಿಸಿದ್ದು ನಮ್ಮ ಕಾಲೇಜಿನ ಭಾಷಾ ಮಧುರ ಬಾಂಧವ್ಯಕ್ಕೆ ಸಾಕ್ಷಿ.

ಡಾ|| ಹಂ. ಪ. ನಾಗರಾಜಯ್ಯ ಅವರಿಗೆ ಮತ್ತು ಪ್ರಿನ್ಸಿಪಾಲರಿಗೆ ಗಂಧದ ಹಾರಗಳನ್ನು ವಿದ್ಯಾರ್ಥಿಗಳು ಹಾಕಿದರು. ಶ್ರೀ ಬಸವರಾಜ ವಕ್ಕುಂದ ಅವರು ವಂದನಾರ್ಪಣೆಯನ್ನು ಮಾಡಿದರು. ಶ್ರೀ ಕೆ.ಸಿ. ಶಿವರೆಡ್ಡಿ ಮತ್ತು ಶ್ರೀ ವೈ.ಎಸ್. ಶಿವಪ್ರಸಾದ್ ಅವರು ಸಮಾರಂಭದ ವ್ಯವಸ್ಥೆಗೆ ಮದುವೆ ಮನೆಯಲ್ಲಿ ಓಡಾಡುವಂತೆ ಓಡಾಡಿದರು.

ಸಾಮಾನ್ಯವಾಗಿ ಕನ್ನಡ ಭಾಷೆಯ ಐಚ್ಛಿಕ ತರಗತಿಗಳನ್ನು ಕ್ರಿಶ್ಚಿಯನ್ ಕಾಲೇಜುಗಳಲ್ಲಿ ಪ್ರಾರಂಭಿಸುವುದು ಅಪರೂಪ. ಆದರೆ ಕಾಲೇಜಿನ ಬೆಳ್ಳಿಹಬ್ಬದ ಸಂದರ್ಭಕ್ಕೆ ಐಚ್ಛಿಕ ಕನ್ನಡ ತರಗತಿಗಳನ್ನು ಪ್ರಾರಂಭಿಸಿ, ಪ್ರಾದೇಶಿಕ ಭಾಷೆಯ ಬಗ್ಗೆ ತಮಗಿರುವ ಒಲವನ್ನು ವ್ಯಕ್ತಪಡಿಸಿದ್ದಾರೆ. ಕನ್ನಡ ವಿಭಾಗ ಅಧ್ಯಾಪಕ ಬಳಗದವರು ಮೊದಲ ವರ್ಷದ ಎಲ್ಲಾ ಐಚ್ಛಿಕ ಪುಸ್ತಕಗಳನ್ನು, ಹನ್ನೊಂದು ಜನ ವಿದ್ಯಾರ್ಥಿಗಳಿಗೂ ಉಚಿತವಾಗಿ ನೀಡಿದರು. ಕನ್ನಡಕ್ಕಾಗಿ ಕೈ ಎತ್ತಿದ ಕಾಲೇಜಿಗೆ ಶುಭವಾಗಲಿ.

ಪುಸ್ತಕ ಪ್ರೀತಿಯ ಪ್ರವಾಸ

ನ. ರವಿಕುಮಾರ್
ಬೆಂಗಳೂರು.

ಈ ವರ್ಷ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಮತ್ತು ಪ್ರತಿಭಾ ಯುವವೇದಿಕೆ ಸಂಯುಕ್ತವಾಗಿ ನಾಲ್ಕು ಕಡೆ ಪುಸ್ತಕ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಆಯೋಜಿಸಿತ್ತು. ಮಂಡ್ಯದ ೬ಳನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಮ್ಮ ಮಿತಿಗಳಲ್ಲಿ ಸುಮಾರು ೬,೦೦೦/- ರೂಪಾಯಿಗಳ ಮೊತ್ತದ ಪುಸ್ತಕಗಳನ್ನು ಮಾರಲಾಯಿತು. ೧೯೯೪ರ ಅಕ್ಟೋಬರ್‌ನಲ್ಲಿ ಪುಸ್ತಕ ಪ್ರಾಧಿಕಾರ ಏರ್ಪಡಿಸಿದ್ದ ಪುಸ್ತಕ ಮೇಳ ಉರ್ದು ಗಲಾಟೆಯಿಂದ ಪೂರ್ಣವಾಗಿ ನಡೆಯದೇ ಹೋದರೂ ಹತ್ತು ಹಲವು ಅನುಭವಗಳನ್ನು ತಂದುಕೊಟ್ಟಿತು. ಪುಸ್ತಕ ಮೇಳ ಆರಂಭವಾಗುವ ಹಿಂದಿನ ರಾತ್ರಿ ಭಾರೀ ಮಳೆ. ನಮ್ಮ ನಿದ್ದೆಯಲ್ಲೆಲ್ಲಾ ಅಲ್ಲಿಟ್ಟಿರುವ ಪುಸ್ತಕಗಳದೇ ಚಿಂತೆ. ಮಂಡ್ಯದಲ್ಲಿ ಕೂಡ ಮಳೆಯಿಂದಾಗಿ ಕೆಲವು ಪುಸ್ತಕಗಳನ್ನು ಕಳ ಕೊಂಡಿದ್ದ ನಮಗೆ ಇಲ್ಲಿಯೂ ಹಾಗಾಗ ಬಹುದೆಂದುಕೊಂಡಿದ್ದೆವು. ಆದರೆ ಬೆಳಿಗ್ಗೆಯೇ ಹೋಗಿ ಪುಸ್ತಕಗಳನ್ನು ಕಂಡಾಗ ಅಚ್ಚರಿಯ ಸಂಗತಿಯೆಂದರೆ ಒಂದು ಹನಿ ನೀರು ಕೂಡ ಪುಸ್ತಕಗಳನ್ನು ಸೋಕಿರಲಿಲ್ಲ. ಪುಸ್ತಕ ಪ್ರಾಧಿಕಾರದವರನ್ನು ಈ ವ್ಯವಸ್ಥೆಗಾಗಿ ಅಭಿನಂದಿಸ ಲೇಬೇಕು. ಮಧ್ಯಾನ್ಹ ೨ ರಿಂದ ರಾತ್ರಿ ೮ರ ವರೆಗೂ ನಡೆಯುತ್ತಿದ್ದ ಈ ಮೇಳಕ್ಕೆ ಬಾಗಿಲು ತೆರೆಯುವ ಮುಂಚೆ ಜನ ಕಾಯುತ್ತಿದ್ದದ್ದೂ, ಮುಚ್ಚುವ ವೇಳೆಯಲ್ಲೂ ಕೂಡ ಬರುತ್ತಿದ್ದದ್ದೂ ಅಪರೂಪದ, ಆನಂದದ ಸಂಗತಿ.

ಕ್ರೈಸ್ಟ್ ಕಾಲೇಜ್ ಸ್ಟಾಲ್ ಬಳಿ ಬಂದ ಕೆಲವರದು ಹಲವು ಮಾತು 'ಕ್ರೈಸ್ಟ್ ಕಾಲೇಜಿನ ಪುಸ್ತಕಗಳಲ್ಲಿ ಏನಿರುತ್ತೆ, ಬರೀ ಕ್ರಿಸ್ತನ ಪುಸ್ತಕಗಳು' - ಯುವಕರಿಬ್ಬರ ನಂಬಿಕೆ.

'ಈ ಪುಸ್ತಕ ಮಳಿಗೆಗಳಲ್ಲೆಲ್ಲಾ, ಬರೀ ಒಳ್ಳೆಯ ಪುಸ್ತಕಗಳಿರೋದು ಇಲ್ಲಿ ಮಾತ್ರ' ಸ್ನೇಹಿತನೊಬ್ಬನ ಪ್ರಶಂಸೆ.

'ಕ್ರೈಸ್ಟ್ ಕಾಲೇಜಿನ ಪ್ರಕಟಣೆಗಳು ಒಂದ ನ್ನಾದರೂ ಕೊಂಡುಕೊಳ್ಳಲೇಬೇಕು atleast ಯಾರಿಗಾದರೂ Gift ಕೊಡಲಿಕ್ಕೆ' - ಮೂವತ್ತರ ಯುವಕನ ಹಂಬಲ.

ಸುಮಾರು ಎಪ್ಪತ್ತು ವರ್ಷದ ಪುಸ್ತಕಾ ಸಕ್ತರು ಮುಖಕ್ಕೆ ಮಫ್ಲರ್ ಸುತ್ತಿಕೊಂಡು ಬಂದ ಅನುಭವವೇ ಬೇರೆ. ಎಲ್ಲಾ ಪುಸ್ತಕಗಳನ್ನು ನೋಡುತ್ತಾ ಬಂದರು. ಯಾಕೋ ಸಮಾಧಾನ ಎನಿಸಲಿಲ್ಲ ಅನ್ನಿಸುತ್ತದೆ. ಸಿ.ಪಿ. ರವಿಕುಮಾರರ **'ದಂತಪಂಕ್ತಿ'** ನೋಡಿದ ತಕ್ಷಣ ಕೈಗೆತ್ತಿಕೊಂಡರು - ಮುಖದಲ್ಲಿ ಖುಷಿಯ ಅಲೆ. ಒಳಪುಟಗಳನ್ನು ಆಸಕ್ತಿಯಿಂದ ತಿರುವಿ ಹಾಕತೊಡಗಿದರು. ಪಾಪ ಅಷ್ಟೇ ರಭಸ ದಿಂದ ಕೆಳಗಿಟ್ಟು ನಡೆದುಬಿಟ್ಟರು. ಬಹುಶಃ ಅವರು ಹಲ್ಲುಗಳ ಬಗೆಗಿನ ಪುಸ್ತಕವೆಂದು ತಿಳಿದಿದ್ದರೆಂದು ಕಾಣುತ್ತದೆ.

ದೂರದರ್ಶನದಲ್ಲಿ ಉರ್ದು ಪ್ರಸಾರದಿಂದ ಉಂಟಾದ ಗಲಾಟೆಯಿಲ್ಲದಿದ್ದರೆ ಕೊನೆಯೆ ರಡು ದಿನಗಳು ಮತ್ತಷ್ಟು ಆಸಕ್ತರನ್ನು ನಮ್ಮಲ್ಲಿಗೆ ತಂದುಕೊಡುತ್ತಿತ್ತೇನೋ. ಕೊನೆ ಯೆರಡು ದಿನಗಳಲ್ಲಿ ಬಂದವರೆಲ್ಲರೂ ನಮ್ಮ ಎಲ್ಲಾ ಪುಸ್ತಕಗಳ ಒಂದೊಂದು ಎರಡೆರಡು ಪ್ರತಿ ಕೊಂಡುಕೊಳ್ಳುವುದನ್ನು ಕಂಡ ಅಕ್ಕಪಕ್ಕದ ಸ್ಟಾಲ್‌ನವರಿಗೆ ಅಚ್ಚರಿ. ಅಸೂಯೆ. ಸುಮಾರು ೮,೦೦೦/-ರೂ.ಗಳ ಪುಸ್ತಕ ಮಾರಾಟದ ಖುಷಿ.

ಚಿತ್ರದುರ್ಗದ ಚಳ್ಳಕೆರೆಯಲ್ಲಿ ೫ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲೂ ನಾವು ನಿರೀಕ್ಷಿಸಿ ರದ ಮಾರಾಟ (ಸುಮಾರು ೪,೫೦೦/-). ಜನಪ್ರಿಯ ಪುಸ್ತಕಗಳ ಮಳಿಗೆ ಪಕ್ಕದಲ್ಲಿ ದ್ದರೂ ನಮ್ಮ ಪುಸ್ತಕಗಳನ್ನು ಕೊಂಡವರೇ ಹೆಚ್ಚು. ಎರಡನೇ ದಿನಕ್ಕೆ ಪುಸ್ತಕಗಳೇ ಇಲ್ಲದಂತಾಯಿತು.

೮ ಮಾರ್ಚ್ ೧೯೯೫ ರಂದು ಲಂಕೇಶ ರಿಗೆ ೬೦ ವರ್ಷ ತುಂಬಿದ ಸಂದರ್ಭದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣ ಮೈಸೂರಿ ನಲ್ಲಿ ನಡೆಯಿತು. ಅಲ್ಲಿ ಪುಸ್ತಕ ಮಾರಾಟ ಮಾಡಲು ನಿರ್ಧರಿಸಿದೆವು. 'ಇಷ್ಟೊಂದು ಪುಸ್ತಕಗಳು ಖರ್ಚಾಗುತ್ತವೆಯೇ?' ಎಂಬ ಅಳುಕಿನಿಂದಲೇ ನಾಲ್ಕು ಭಾರವಾದ ಬ್ಯಾಗುಗ ಳೊಡನೆ ಶತಮಾನೋತ್ಸವ ಭವನವನ್ನು ತಲುಪಿದ ಕೂಡಲೇ, ಬಕಪಕ್ಷಿಗಳಂತೆ ಬಂದ ಜನ ಪುಸ್ತಕಗಳಿಗೆ ಮುಗಿಬಿದ್ದರು. ಕವನ ಸಂಕಲನಗಳಿಗಂತೂ ಎಲ್ಲಿಲ್ಲದ ಡಿಮ್ಯಾಂಡ್. ಮೊದಲನೇ ದಿನವೇ ಇದ್ದಬದ್ದ ಎಲ್ಲಾ ಕವನ ಸಂಕಲನಗಳೂ ಖಾಲಿ. ಕವನ ಸಂಕಲನ ಮಾರಾಟವಾಗುವುದು ಕಡಿಮೆ ಎಂದು ಬಗೆದಿದ್ದ ನಮಗೆ ಕುತೂಹಲದ ಅಚ್ಚರಿ.

ಎಲ್ಲಾ ಪುಸ್ತಕ ಮಾರಾಟ ಕೇಂದ್ರಗಳಲ್ಲೂ Hot Cake ಎಂದರೆ ಡಾ॥ ಎಚ್. ನರಸಿಂಹಯ್ಯನವರ **'ತೆರೆದ ಮನ'** ಪುಸ್ತಕ,

ಪುಸ್ತಕದ ಕಡಿಮೆ ಬೆಲೆ, ಅದರ ಅಚ್ಚುಕಟ್ಟು ತನ ಮತ್ತು ವೈಜ್ಞಾನಿಕ ಮನೋಧರ್ಮದ ಬಗೆಗಿನ ಚಿಂತನೆ, ಅವರ ಪ್ರಾಧ್ಯಾಪಕ ವೃತ್ತಿ ಮತ್ತು ಜನಪ್ರಿಯತೆಯ ಕಾರಣದಿಂದಲೇ ಕನ್ನಡದಲ್ಲಿ ಎಲ್ಲಾ ಲೇಖಕರನ್ನು ಬದಿಗೊತ್ತಿ (೫೦೦೦ ಪ್ರತಿಗಳು ಒಂದು ವರ್ಷದಲ್ಲೇ ಖರ್ಚಾದದ್ದು) ಮಾರಾಟವಾಗಿದ್ದು ವಿಶೇಷ. ನಂತರದ್ದು ಈಚೆಗಿನ ಡಾ॥ ಎಚ್. ಎಸ್. ರಾಘವೇಂದ್ರರಾಯರ ಪುಸ್ತಕ, ***'ಹಾಡೆ ಹಾದಿಯ ತೋರಿತು'***. ಬೇಂದ್ರೆ, ಕುವೆಂಪು, ಪುತಿನ ಒಂದಲ್ಲ ಒಂದು ಕಾರಣಕ್ಕೆ ಹಲವರ ಮೆಚ್ಚಿನ ಲೇಖಕರು. ಅಷ್ಟೇ ಅಲ್ಲದೆ ಒಂದಲ್ಲಾ ಒಂದು ವಿಶ್ವವಿದ್ಯಾಲಯದಲ್ಲಿ ಈ ಕವಿಗಳ ಅಧ್ಯಯನ ಇದ್ದೇ ಇರುತ್ತದೆ. ಜೊತೆಗೆ ರಾಘವೇಂದ್ರರಾಯರಂತಹ ಉತ್ತಮ ವಿಮರ್ಶಕರು ಬರೆದಿರುವ ಪುಸ್ತಕವೆಂದ ಮೇಲೆ ಕೇಳಬೇಕೆ?

ಮತ್ತೊಂದು ವಿಶೇಷವೆಂದರೆ ಮಳಿಗೆಗೆ ಬಂದ ಹಿರಿಯ ಸಾಹಿತಿಗಳೆಲ್ಲರೂ ನಮ್ಮಮಳಿಗೆಯಲ್ಲಿ ಕುಳಿತು ಸ್ವಲ್ಪ ಹೊತ್ತು ಹರಟೆ ಹೊಡೆದು, ಹೋಗುತ್ತಿದ್ದದ್ದು. ಕಣವಿ, ಜಿ.ಎಸ್.ಎಸ್., ಚಿದಾನಂದ ಮೂರ್ತಿ, ಕ.ವೆಂ., ಸಿದ್ಧಲಿಂಗಯ್ಯ ಮಲ್ಲೇಪುರಂ, ಕಿ.ರಂ ಹೀಗೆ.... ಇದನ್ನೆಲ್ಲಾ ಕಂಡ ಶ್ರೀನಿವಾಸರಾಜು ಅವರು ತಮಾಷೆಯಾಗಿ ಹೇಳುತ್ತಿದ್ದದ್ದು 'ಮುಂದಿನ ಬಾರಿ ನಾವು ಎರಡು ಮಳಿಗೆ ತೆಗೆದುಕೊಳ್ಳಬೇಕು. ಒಂದು ಪುಸ್ತಕ ಮಾರಾಟಕ್ಕೆ, ಮತ್ತೊಂದು ಬಂದವರು ಈ ರೀತಿ ಕುಳಿತು ಮಾತನಾಡಲು'.

ಈ ಹೊತ್ತು ಪುಸ್ತಕ ಮಾರಾಟ ನಿಕೃಷ್ಟ ಸ್ಥಿತಿಗಿಳಿದಿದೆ ಎಂಬ ಮಾತುಗಳೂ ಸುಳ್ಳಾಗುತ್ತಿದೆ. ಮೊದಲಿಗೆ ಹೋಲಿಸಿದರೆ ಈಗ ಕನ್ನಡ ಪುಸ್ತಕಗಳ ಮಾರಾಟ ಹೆಚ್ಚಿದೆ. (ಸ್ವಪ್ನಾದಲ್ಲಿ ಒಂದು ತಿಂಗಳ ಕನ್ನಡ ಪುಸ್ತಕಗಳ ಮಾರಾಟ ೫೦,೦೦೦/- ದಿಂದ ಒಂದು ಲಕ್ಷವಂತೆ). ಆದರೆ ಒಳ್ಳೆಯ ಪುಸ್ತಕಗಳನ್ನು ಓದುಗರಿಗೆ ತಲುಪಿಸುವ ವ್ಯವಸ್ಥೆಯಾಗಬೇಕು. ಮಕ್ಕಳ ಪುಸ್ತಕ ಮತ್ತು ವೈಜ್ಞಾನಿಕ ಚಿಂತನೆಯ ಪುಸ್ತಕಗಳು ಈಚೆಗೆ ಹೆಚ್ಚು ಮಾರಾಟವಾಗುತ್ತಿರುವ ಪುಸ್ತಕಗಳೆಂದು ಕೇಳಿದ್ದೇನೆ. (ಆಸಕ್ತ ವರ್ಗದಲ್ಲಿ). ಈ ವಿಷಯ ಕುರಿತು ಕನ್ನಡದಲ್ಲಿ ವಿರಳವಾಗಿ ಪ್ರಕಟವಾಗುತ್ತಿರುವುದನ್ನು ಕಂಡು ಆ ಸ್ಥಳಗಳಲ್ಲಿ ಇಂಗ್ಲೀಷ್ ಪುಸ್ತಕಗಳು ಆಕ್ರಮಿಸಿಕೊಳ್ಳುತ್ತಿರುವುದು ದುರಾದೃಷ್ಟಕರ. ನಾವೆಲ್ಲರೂ ಈ ಬಗ್ಗೆ ಯೋಚಿಸಬೇಕಿದೆ.

ಏರುತ್ತಿರುವ ಮುದ್ರಣ ವೆಚ್ಚ, ಕಾಗದದ ಬೆಲೆಯ ಮಧ್ಯೆ ಕೂಡ ನಮ್ಮ ಆಸಕ್ತಿಯನ್ನು ಕಾಯ್ದುಕೊಳ್ಳುವ, ಜೊತೆಗೆ ಅದರ ಆರೋಗ್ಯವನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಹೆಚ್ಚಿನದು. ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ ರೂಪಿಸಿ, ನಮ್ಮ ಆಕಾಂಕ್ಷೆಗಳಿಗೆ ಗರಿಮೂಡಿಸಿದೆ. ಆದರೆ ಅದು ಕೇವಲ ಪುಸ್ತಕ ಪ್ರಕಟಣಾ ಏಜೆನ್ಸಿಯಂತೆ ಕೆಲಸ ಮಾಡಬಾರದು. ಒಟ್ಟಾರೆ ಪುಸ್ತಕ ಮಾಧ್ಯಮದ ಎಲ್ಲಾ ಅಂಶಗಳ ಕಡೆಗೂ (ಮಾರಾಟ ವ್ಯವಸ್ಥೆ, ಒಳ್ಳೆಯ ಪುಸ್ತಕಕ್ಕೆ ಪ್ರೋತ್ಸಾಹ ಇತ್ಯಾದಿ) ಗಮನ ಹರಿಸಬೇಕು. ಅದು ಎಲ್ಲಾ ವರ್ಗದ ಓದುಗರ ಆಶೋತ್ತರಗಳನ್ನು ಈಡೇರಿಸುವ ಸಂಸ್ಥೆಯಾಗಬೇಕು.

ಒಲುಮೆಗಿಂತಲು ಬೇರೆ ಪರಮಾರ್ಥವಿನ್ನಿಲ್ಲ
ನರರ ಬದುಕಿನಲಿ ; ಮೇಣರ್ಥಹೀನಂ ಬಾಳ್ಕೆ
ಒಲುಮೆಯಿಲ್ಲದಿರೆ. ಹೂವಿಂದೆ ಸಾರ್ಥಕವಹುದು
ಗಿಡದ ಬಾಳಂತೆ ಬಾಳ್ಗಿಡಕೆ ಒಲುಮೆಯೆ ಹೂವು.
ಒಲಿದೊಮ್ಮೆ ಮರಳಿಯೊಲಿಯದಿರೆ ಒಲುಮೆಗದೆ ಕೊಲೆ

ಕುವೆಂಪು
ಚಿತ್ರಾಂಗದ

ಹಚ್ಚಿದೆವು ಕನ್ನಡದ ನೂರು ದೀಪ

ಚಿ. ಶ್ರೀನಿವಾಸರಾಜು
ಕನ್ನಡ ವಿಭಾಗ

ಕನ್ನಡ ಸಂಘದ ಮೊದಲನೆಯ ಪುಸ್ತಕವನ್ನು ಹಾಗೂ ಐವತ್ತನೆಯ ಪುಸ್ತಕವನ್ನು ಬಿಡುಗಡೆ ಮಾಡಿದ್ದ ಡಾ॥ ಜಿ.ಎಸ್. ಶಿವರುದ್ರಪ್ಪನವರೇ ಕನ್ನಡ ಸಂಘದ ನೂರನೆಯ ಪುಸ್ತಕವಾದ **'ಹಾಡೆ ಹಾದಿಯ ತೋರಿತು'** ವಿಮರ್ಶಾ ಕೃತಿಯನ್ನು ೩೧ ಜನವರಿ ೧೯೯೫ರಂದು ಬಿಡುಗಡೆ ಮಾಡಿದರು. ಇಪ್ಪತ್ತೆರಡು ವರ್ಷಗಳಲ್ಲಿ ನೂರು ಪುಸ್ತಕಗಳನ್ನು ಪ್ರಕಟಿಸಿರುವುದು ನಮಗೆ ಆನಂದದ ಸಂಗತಿ. ಈ ವಿಶೇಷ ಸಮಾರಂಭಕ್ಕೆ ಡಾ॥ ಎಚ್. ನರಸಿಂಹಯ್ಯ ಅವರು ಅಧ್ಯಕ್ಷರಾಗಿದ್ದರು. ಡಾ॥ ಎಚ್.ಎಸ್. ಬಿಳಿಗಿರಿ, ಡಾ॥ ಎಚ್.ಎಸ್. ರಾಘವೇಂದ್ರರಾವ್ ಮತ್ತು ಪ್ರೊ॥ ಮಾನಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಂದು ಮೊದಲನೆಯ ಪುಸ್ತಕದ ಕವಿ ಪ್ರೊ॥ ಕ.ವೆಂ. ರಾಜಗೋಪಾಲ, ಮೊದಲನೆಯ ಪುಸ್ತಕದ ಮುದ್ರಕರಾದ ಶ್ರೀ ಶೇಷನಾರಾಯಣ, ಮುದ್ರಕರಾದ ಶ್ರೀ ಮುನಿಧರ್ಮಯ್ಯ ಮತ್ತು ಶ್ರೀ ಬಿ. ಗುರುಮೂರ್ತಿ ಅವರುಗಳನ್ನು ಕಾಲೇಜಿನ ಪ್ರಾಂಶುಪಾಲರು ಸನ್ಮಾನಿಸಿದರು. ಜೊತೆಗೆ ಬೆಂಗಳೂರು **ಫೋರಂ ಬುಕ್ ಹೌಸ್ ಗ್ರಂಥಮಾಲೆ**ಯ ದಾನಿಗಳಾದ ಶ್ರೀ ಹನುಮಂತರಾಜು ಅವರು ಹಾಗೂ ಸಂಘದ ಉಪಾಧ್ಯಕ್ಷರಾಗಿದ್ದ, ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ॥ ಎಚ್.ಆರ್. ರಾಮಕೃಷ್ಣರಾವ್ ಅವರುಗಳು, ನೂರನೆಯ ಪುಸ್ತಕವನ್ನು ಡಾ॥ ಜಿ.ಎಸ್. ಶಿವರುದ್ರಪ್ಪನವರಿಂದ ಸ್ವೀಕರಿಸಿದರು. ಅಚ್ಚುಕಟ್ಟಾದ ವ್ಯವಸ್ಥೆಯ ಆ ಸುಂದರ ಸಂಜೆಯ ಕಾರ್ಯಕ್ರಮ ಹಲವಾರು ವರ್ಷಗಳು ಸ್ಮೃತಿಪಟಲದಲ್ಲಿರುತ್ತದೆ.

ಕನ್ನಡ ಸಂಘ ಈ ವರ್ಷವೂ ಡಾ॥ ಅ.ನ.ಕೃ. ಸ್ಮಾರಕ ಲೇಖನ ಸ್ಪರ್ಧೆ ಮತ್ತು ಡಾ॥ ದ.ರಾ. ಬೇಂದ್ರೆ ಸ್ಮೃತಿ ಕವನ ಸ್ಪರ್ಧೆಯನ್ನು ಏರ್ಪಡಿಸಿತ್ತು. ಸ್ಪರ್ಧೆಗಳಿಗೆ ನಲವತ್ತ ಮೂರು ಲೇಖನಗಳು ಮತ್ತು ಇನ್ನೂರ ನಲವತ್ತೆಂಟು ಕವನಗಳು ಬಂದಿದ್ದವು. ಲೇಖನಗಳಿಗೆ ಡಾ॥ ವನಮಾಲ ವಿಶ್ವನಾಥ್ ಮತ್ತು ಪ್ರೊ॥ ಜಿ. ಅಬ್ದುಲ್ ಬಷೀರ್; ಕವನಗಳಿಗೆ ಶ್ರೀ ಕೆ.ಎನ್. ವಿಜಯಲಕ್ಷ್ಮಿ ಮತ್ತು ಶ್ರೀ ಗಣೇಶ ಅಮೀನಗಡ ತೀರ್ಪುಗಾರರಾಗಿದ್ದರು. ಇವರುಗಳಿಗೆ ಕನ್ನಡ ಸಂಘ ಕೃತಜ್ಞವಾಗಿದೆ.

ಡಾ॥ ವೀಣಾ ಶಾಂತೇಶ್ವರ ಅವರ **'ಬಿಡುಗಡೆ'** ಮತ್ತು ಶ್ರೀ ಚೆನ್ನವೀರ ಕಣವಿ ಅವರ **'ಶಿಶಿರದಲ್ಲಿ ಬಂದ ಸ್ನೇಹಿತ'** ಪುಸ್ತಕಗಳು, ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರದೊಂದಿಗೆ, ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ೧೮ ಸೆಪ್ಟೆಂಬರ್ ೧೯೯೪ರಂದು ಬಿಡುಗಡೆ ಮಾಡಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎನ್ಕೆ ಕುಲಕರ್ಣಿಯವರು ವಹಿಸಿದ್ದರು. ಪ್ರೊ॥ ಕೀರ್ತಿನಾಥ ಕುರ್ತಕೋಟಿಯವರು ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಡಾ॥ ಗಿರಡ್ಡಿ ಗೋವಿಂದರಾಜ ಮತ್ತು ಡಾ॥ ಗುರುಲಿಂಗ ಕಾಪಸೆಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ರಾಷ್ಟ್ರಕವಿ ಕುವೆಂಪು ಅವರು ೧೦ ನವೆಂಬರ್ ೧೯೯೪ರಂದು ನಿಧನರಾದರು. ಅವರ ಅಂತಿಮಯಾತ್ರೆಯಲ್ಲಿ ಕನ್ನಡ ಸಂಘದ ಪರವಾಗಿ ಭಾಗವಹಿಸಲು ಶ್ರೀ ಕೆ.ಸಿ. ಶಿವಾರೆಡ್ಡಿ ಮತ್ತು ಶ್ರೀ ವೈ. ಎಸ್. ಶಿವಪ್ರಸಾದ್ ಮೈಸೂರಿಗೆ ಹೋಗಿದ್ದರು. ಹತ್ತುವರ್ಷಗಳ ಹಿಂದೆ ನಡೆಸಿದ 'ಬೇಂದ್ರೆ ನಮನ'ದ ಕಾರ್ಯಕ್ರಮದಂತೆ 'ಕುವೆಂಪು ನಮನ' ಕಾರ್ಯಕ್ರಮವನ್ನು ೧೦ ಡಿಸೆಂಬರ್ ೧೯೯೪ರಂದು, ಬೆಂಗಳೂರಿನ ವಾಸವಿ ವಿದ್ಯಾನಿಕೇತನ ಮಹಿಳಾ ಕಾಲೇಜಿನಿಂದ ಪ್ರಾರಂಭಿಸಲಾಯಿತು. ಕಾರ್ಯಕ್ರಮವನ್ನು ಡಾ॥ ಹಾ.ಮಾ. ನಾಯಕ ಅವರು ಉದ್ಘಾಟಿಸಿ ಡಾ॥ ಎಚ್. ನರಸಿಂಹಯ್ಯ ಅವರ 'ತೆರೆದ ಮನ' ಪುಸ್ತಕದ ಎರಡನೆಯ ಆವೃತ್ತಿಯನ್ನು ಬಿಡುಗಡೆ ಮಾಡಿದರು. ಕನ್ನಡಕ್ಕೆ ಆರನೆಯ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಡಾ॥ ಯು.ಆರ್. ಅನಂತಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಅಂದು ಮುಖ್ಯ ಅತಿಥಿಗಳಾಗಿ ಶ್ರೀ ರಾಮಕೃಷ್ಣ ಹೆಗಡೆ ಭಾಗವಹಿಸಿದ್ದರು. ಡಾ॥ ಕೆ.ವಿ. ನಾರಾಯಣ ಅವರು ಮೊದಲ ವಿಶೇಷ ಉಪನ್ಯಾಸವನ್ನು (ಕುವೆಂಪು ಅವರ ಕನ್ನಡ ಪರ ಚಿಂತನೆಗಳು) ನೀಡಿದರು. ಪ್ರಾಂಶುಪಾಲರು ಈ ವಿಶೇಷ ಕಾರ್ಯಕ್ರಮದಂದು ಕನ್ನಡದಲ್ಲಿ ಶುಭಕೋರಿದರು. 'ಕುವೆಂಪು ನಮನ' ಕಾರ್ಯಕ್ರಮವನ್ನು **ಸಂಕುಲ** ಪತ್ರಿಕೆಯ ಸಹಾಯದಿಂದ ಮುಂದುವರೆಸಲಾಗುತ್ತಿದೆ. ಜೊತೆಗೆ ಸಂಚಯ, ಅಭಿನವ ಮತ್ತು ಅಂಕಣ ಪತ್ರಿಕೆಗಳು ಸಹಕಾರ ನೀಡುತ್ತಿವೆ. ಈಗಾಗಲೇ ಡಾ॥ ಎಚ್.ಎಸ್. ವೆಂಕಟೇಶಮೂರ್ತಿ (ಶೇಷಾದ್ರಿಪುರಂ ಪದವಿ ಕಾಲೇಜು) ಡಾ॥ ಬಸವರಾಜ ಕಲ್ಗುಡಿ (ಸೆಂಟ್ ಜೋಸೆಫ್ ಕಾಮರ್ಸ್ ಕಾಲೇಜು) ಡಾ॥ ವನಮಾನ

ವಿಶ್ವನಾಥ್ (ಗಾಂಧಿ ಸಾಹಿತ್ಯ ಸಂಘ) ಡಾ॥ ಸುಮಿತ್ರಾಬಾಯಿ (ಗೋಖಲೆ ಸಾರ್ವ ಜನಿಕ ಸಂಸ್ಥೆ) ಅವರುಗಳು ವಿಶೇಷ ಉಪ ನ್ಯಾಸಗಳನ್ನು ನೀಡಿದ್ದಾರೆ. ಈ ಸಂದರ್ಭ ದಲ್ಲಿ ಶ್ರೀ ಕೆ. ನರಸಿಂಹಮೂರ್ತಿ, ಡಾ॥ ಜಿ.ಎಸ್. ಶಿವರುದ್ರಪ್ಪ, ಪ್ರೊ॥ ಕ.ವೆಂ. ರಾಜ ಗೋಪಾಲ, ಡಾ॥ ಪ್ರಭುಶಂಕರ ಅವರುಗಳ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಹಡ ಪದ್, ಶ್ರೀ ಶೇಷಾದ್ರಿಗವಾಯಿ, ಶ್ರೀಮತಿ ರತ್ನಮಾಲ ಪ್ರಕಾಶ್, ಶ್ರೀ ಶ್ರೀನಿವಾಸ ಉಡುಪ, ಶ್ರೀ ಸಿ.ಆರ್. ಸಿಂಹ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮಗಳನ್ನು ಚೆನ್ನಾಗಿ ನಡೆಸಿಕೊಟ್ಟಿದ್ದಾರೆ.

ಡಾ॥ ತೇಜಸ್ವಿನಿ ನಿರಂಜನ ಮತ್ತು ಡಾ॥ ಸೀಮಂತಿನಿ ನಿರಂಜನ ಅವರು ಸಂಪಾ ದಿಸಿದ ***'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ'*** ಪುಸ್ತಕವನ್ನು ೧೪ ಆಗಸ್ಟ್ ೧೯೯೪ರಂದು ಶ್ರೀಮತಿ ಹೇಮಲತಾ ಮಹಿಷಿ ಅವರು ರವೀಂದ್ರ ಕಲಾಕ್ಷೇತ್ರದಲ್ಲಿ ಬಿಡುಗಡೆ ಮಾಡಿ ದರು. ಡಾ॥ ಬಿ.ಎಸ್. ಸುಮಿತ್ರಾಬಾಯಿ ಅವರು ಕೃತಿಯನ್ನು ಕುರಿತು ಮಾತನಾಡಿ ದರು. ಈ ಕಾರ್ಯಕ್ರಮವನ್ನು ಕರ್ನಾಟಕ ಲೇಖಕಿಯರ ಸಂಘದ ಸಹಕಾರದೊಂದಿಗೆ ನಡೆಸಲಾಯಿತು.

ಕನ್ನಡ ಸಂಘದ ನಾಟಕ ಅಭಿರುಚಿ ಕೇಂದ್ರ, ಮೂವತ್ತು ಜನ ವಿದ್ಯಾರ್ಥಿಗಳಿಗಾಗಿ ಶ್ರೀ ಸುರೇಂದ್ರನಾಥ್ ಅವರ ನಿರ್ದೇಶನ ದಲ್ಲಿ ಒಂದು ನಾಟಕ ಕಮ್ಮಟವನ್ನು ನಡೆಸ ಲಾಯಿತು. ಈ ಕಮ್ಮಟವನ್ನು ಪ್ರೊ॥ ಜಿ.ಕೆ. ಗೋವಿಂದರಾವ್ ಅವರು ೨೦ ಸೆಪ್ಟೆಂಬರ್ ೧೯೯೪ರಂದು ಉದ್ಘಾಟಿಸಿದರು. ಸಂಚಾಲ ಕನಾಗಿ ಶ್ರೀ ಎಸ್.ಡಿ. ಅರವಿಂದ ನಾಟಕ ಕಮ್ಮಟವನ್ನು ಮತ್ತು ನಾಟಕ ಅಭಿರುಚಿ ಕೇಂದ್ರ ವನ್ನು ಈ ವರ್ಷ ಯಶಸ್ವಿಯಾಗಿ ನಡೆಸಿ ದನು. ಡಾ॥ ಚಂದ್ರಶೇಖರ ಕಂಬಾರರ ***'ಜೋಕುಮಾರಸ್ವಾಮಿ'*** ನಾಟಕದ ಯಶ ಸ್ಸಿಗೆ ಕಾರಣರಾದ ಎಲ್ಲರಿಗೂ ಸಂಘ ಕೃತಜ್ಞ ವಾಗಿದೆ. ಕರ್ನಾಟಕ ನಾಟಕ ಅಕಾಡೆಮಿ ನಾಟಕ ಕಮ್ಮಟಕ್ಕೆ ನೆರವು ನೀಡಿತು.

ಕ್ರೈಸ್ಟ್ ಕಾಲೇಜ್ ಆಡಳಿತವರ್ಗ ತನ್ನ ಬೆಳ್ಳಿಹಬ್ಬದ ಕೊಡುಗೆಯಾಗಿ **ಕನ್ನಡ ಐಚ್ಛಿಕ ತರಗತಿಗಳನ್ನು** ಪ್ರಾರಂಭಿಸಿತು. ಈಗ ಹನ್ನೊಂದು ಜನ ವಿದ್ಯಾರ್ಥಿಗಳು ಆ ವಿಭಾ ಗದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಕನ್ನಡ ಸಂಘದ ಸಂಪ್ರದಾಯದಂತೆ ಈ ವರ್ಷವೂ ಕನ್ನಡದ ಹಿರಿಯ ವಿದ್ಯಾರ್ಥಿಗಳು ಕನ್ನಡ ಪುಸ್ತಕಗಳನ್ನು ಕಾಲೇಜು ಗ್ರಂಥ ಭಂಡಾರಕ್ಕೆ ಕೊಡುಗೆಯಾಗಿ ಕೊಟ್ಟರು.

ಪ್ರೊ॥ ಕ.ವೆಂ. ರಾಜಗೋಪಾಲ ಅವರು ತಮ್ಮ ಗ್ರಂಥ ಭಂಡಾರದ ಸುಮಾರು ಹತ್ತು ಸಾವಿರ ರೂಪಾಯಿಗಳ ಕನ್ನಡ ಮತ್ತು ಇಂಗ್ಲೀಷ್ ಪುಸ್ತಕಗಳನ್ನು ಕಾಲೇಜಿನ ಗ್ರಂಥ ಭಂಡಾರಕ್ಕೆ ಉದಾರವಾಗಿ ನೀಡಿದರು. ಇವು ಅಪರೂ ಪದ, ಅಮೂಲ್ಯವಾದ ಪುಸ್ತಕಗಳು. ಈ ಕೊಡುಗೆಗೆ ಕಾಲೇಜು ಪ್ರೊ॥ ಕ.ವೆಂ. ಅವರಿಗೆ ಕೃತಜ್ಞವಾಗಿದೆ.

ಕನ್ನಡ ಸಂಘ, ಮುಂದಿನ ವರ್ಷ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳುವ ಉತ್ಸಾಹ ದಲ್ಲಿದೆ. ಅದಕ್ಕೆ ಆಡಳಿತ ವರ್ಗದ, ಕನ್ನಡ ಸಂಘದ ಅಭಿಮಾನಿಗಳ ಮತ್ತು ವಿದ್ಯಾರ್ಥಿ ಗಳ ಸಹಾಯ, ಸಹಕಾರವನ್ನು ಬಯಸು ತ್ತದೆ. ಈ ವರ್ಷದ ಎಲ್ಲಾ ಕಾರ್ಯಕ್ರಮ ಗಳಲ್ಲಿ ಕನ್ನಡ ವಿಭಾಗದ ಮಿತ್ರರಾದ ಶ್ರೀ ಬಸವರಾಜ ವಕ್ಕುಂದ, ಶ್ರೀ ಕೆ.ಸಿ. ಶಿವಾರೆಡ್ಡಿ ಮತ್ತು ಶ್ರೀ ವೈ.ಎಸ್. ಶಿವ ಪ್ರಸಾದ್ ಅವರುಗಳು ತುಂಬು ಸಹಕಾರ ನೀಡಿದ್ದಾರೆ.


ಮಾನವನೆ, ನಾರಾಯಣನು ಗುಡಿಯೊಳಿಲ್ಲ
ಫಲಪುಷ್ಪವನು ಕೊಟ್ಟರದು ಭಕ್ತಿಯಲ್ಲ.
ಬಡನರನೆ ದೇವನಿಹ ದೇಗುಲವು, ಮುಕ್ತಿ ;
ಬಡ ಜನರ ಸೇವೆಯನು ಮಾಡುವುದೆ ಭಕ್ತಿ.

ಕುವೆಂಪು
ಹಾಳೂರು

हिन्दी विभाग

संपादक

जार्ज जोसफ



I scribble and cancel it again
O heavenly critic, to pass your test.

I choose a word, only to change it,
Hoping to find one you'd like the best.

I beg your pardon again, and again;
Lord, let not my words go waste.

Says Tuka, Please, talk back at least
So that this Poem will have something to say.

TUKARAM

Says Tuka (Selected Poetry of Tukaram)

Tr : Dilip Chitre

वांषयसूचो

प्रेम की कली	.....	१६६
दहेज	.....	१६६
जीवन का मुखडा	.....	१६७
प्रकृति का आहवान	.....	१६७
लडाइ	.....	१६८
इनसान	.....	१६९
अजीत के लतीफे	.....	१७०



प्रेम की कली

जिन्दगी की फुलवारी में खिली
छोटी सी कलियाँ हैं हम,
अलग रंगों से अलग भावों से
बनी सुन्दर सुष्टियाँ हैं हम
चाहे छोटे हो या बडे
प्रभु की दुष्टि में बराबर है हम ।

कली का खिलना ज़रूरी है
तभी तो फैला सके वह सुगंध,
हमारा भी खिलना ज़रूरी है
सारी दुनिया को देने सुगन्ध
सच्चा प्रेम है सुगन्ध वह
सारे जीवन का ऐश्वर्य है वह ।

सब हम जानते हैं दूजों की पीडा
और जब पोंछते हैं आँसूओ की बून्दें
जब मन में आती है त्याग की भावना
तब वहाँ खिलती है कली प्रेम की ।

जीना है प्रेम से हमें
दया से, करुणा से, त्याग से हमें,
तब जियेंगा इश्वर हम में
हम भी जियेंगे इश्वर में
हर पल गुज़र जाता है हम से
हर दिन विदा लेता हे हम से
कभी गुजर न जाए प्रेम हम से
वह अनमोला है, अनन्त है ।

द्वारा : जॉली जॉण
प्रथम वर्ष बी.ए.

दहेज

दहेज लेने वालो, मेरी फरियाद तो लेते जाओ,
जलाया है जिन बहुओं को, उनकी याद तो लेते
जाओ, किसी मजबूर इनसान के, जज्बात तो लेते
जाओ, बिना दहेज़ के कोई बारात तो लेते जाओ ।

कब तक संभालोगे इन, कागज के टुकडो को कब
तक खिलने न दोगे, तुम उदास मुखडों को मजबूरी
के आगे तुम कभी तो, सर झुका दिया
करो किसी की बुरी हालत के आगे, दो पल के
खातिर यह प्रथा रुका दिया करो

यह दहेज जहर का प्याला है, इसे करीब न रखो
दौलत तो हँसी सपना है, उस पर नसीब न रखो
किसी के अरमान से, यह दौलत मूल्यवान नो नहीं
सिर्फ कागज के टुकडों से होता, किसी का कप्याण
तो नहीं जिन्दगी की हसीन राहों की मत रोको,
दौलत की दीवारों से सदियों पुरानी इस रीत को
तुम, आज तोड दो नफरत के पीछे छिपी प्रीत को
तुम, आज जोड दो

द्वारा :- शकुन्तला बादव
एच.ई.पी
प्रथम वर्ष बी.ए

जीवन का मुखडा

जीवन एक बहती नदी सा है
जो कभी सागर सा शान्त
तो कभी हवा की तेजी से गरज उठता है
कुछ भी हो वह बहती रहती है।

मार्ग पर मिले कुछ साथ ले जाते अन्त तक,
तो कुछ पीछे छोड जाते है।
कुछ भी हो वह बहती रहती है।

कभी धारा बनकर अकेला हो जाता है,
तो कभी विशाल समुन्द्र में गुम हो जाता है।
कुछ भी हो वह बहती रहती है।

कोई न जाने किस मंजिल की और
उसे मंजिल मिले या न मिले,
. वह तो बहती रहती है।

विनिता
द्वितीय वर्ष
बी.एस.सी

प्रकृति का आहवान

न तो मरूस्थल है या मरीचिका इस संसार
जो हम बनाते हैं वही हो यह जगत ।
दे दिया भगवान ने सब सुविधाऐ मानवों को
खो लिया न समझते इस महान दान को ।

भूल गया मानवों ने इस सुन्दर प्रकृति को
बना लिया मरुभूमि स्वार्थता की पूर्ति में
सोचा कभी न उसमे अपनी पीडे को
क्या दे उन्हें अपने जीवन निर्वाह को?

न बनाया विधाता कहीं सीमाएँ जगत में
नर बनाया सीमाऐं हृदयों को भेंटकर ।
दिया उसे नाम शब्द और सामान्य
झेला अनेक झगडाएँ विस्तृत बनाने उसे।

अवतार लिया देवों ने मानवों को बचाने
जन्म लिया संत् लोग उन्हें मसझाने
ले आये वे यार का सन्देश हाथों में
हटा लिया कान, नाकि उन्हें न सुन पाये ।

उजडे मूल्यों को मानव उस संसार से
बन गया मानव स्वार्थी अपनी ही लालसा से
ज जाने कौन आये अब मुक्त बनाने उन्हें
निर्भर हे तुम पर रक्षा प्रकृति माता की।

शाजु .पी.डी.,
प्रथम वर्ष बी.ए.

लडाइ

लडाई लडाई लडाई ,
न जाने यह कहाँ से आई
अरे यह किसने आग लगाई
जहाँ देखो आज हो रही है लडाई।
देश में या विदेश में, सारे जग पर यह है छाई,
यह लडाई होती क्या है, यह किसी की समझ में न
आई घरों मे देखा जाऐ तो, यह समस्या बडी ही
गंभीर हो है आई शादी हमने लडके लडकी की करवाई
परंतु दहेज के लिये हो गई लडाई।

लडकी हिन्दू थी, लडका था इसाई
दोनों ने आपनी मर्जी से शादी थी करतार
परंतु जालीमं समाज ने कर ली उनसे लडाई
चलो यह तो सिर्फ शादी की बात थी भाई
इस जालीम समाज तो करवा दी है हिन्दू-सिक्खो की
लडाई, जहाँ देखे आज धर्म के नाम पर हो रही है
लडाई नेता सोचते है. कुर्सी जितने की विथि हे सिर्फ
लडाई लडाई लडाई ।
इसीलिये अपने विरोधीदल से करते है हिंसात्मक
लडाई,
पर कुर्सी के वास्ते लडने की विधि उन्हे न आई ,
उन्होंनो हमेशा जीत के लिये न जाने कितने लोगों पर
छुरियाँ सलवाई सुना है यहाँ तो जमीन के टुकडे के लिये
भी होती है दो भाईयों मे लडाई उनका कहना है कि हर
समस्या की हल है सिर्फ लडाई लडाई लडाई ।
न जाने पर पडने लगी है इसकी महसूस परछाई लडाई
से इन मासूमो को बचालो मेरे सांइ वरना इसका अंत
बडा दुःख दायी होगा मेरे भाई ।
पर अब लगता है इस समाज को है थोडी सि अकल आई
अब लडाई की जगह पर लोग देने लगे है प्यार का दोहाई ।
नेताओ, दहेज के लोभियों और भाइयों की भी है
थोडी शर्म आई ,
अब कहने लगे है कि हम करेंगे नही किसी से लडाई
लडाइ लडाई ।

हरविन्दर सिंह,
प्रथम वर्ष बी.ए.

"पोथी पढ पढ जग मुवा, पंडित हूआ न कोइ ।
ढाई अच्छर प्रेम का, पढै सो पंडित होई ॥"

कबीरदास

इनसान

आज सुनाति हूँ तुमको इनसानो की कहानी,
बिकता यहाँ हर दिन इनसान है,
हर दिन गिरता इन पर तुफान है,
खुद मारता कल्डाडी अपने पैरों पर इनसान है।

आता कोई नया मंत्री है,
गिरती उस को कुर्सी हर बार है,
क्या कहे ये इनसान को सरकार है,
जो बदलती हर बार है।

वह सरकार कहती पेट्रोल बचाओं
जो चल नही सकती एक कदम भी पेट्रोल के बिना,
बताओ यह कैसी सरकार है।
थे करते वादे यहाँ
जो पूरे होते नहीं यहाँ।

क्या कहता इनसान के चुने मंत्रियों का
जो माँगते पैसे पर वोट है।

बनाते पाँच वर्षीय कार्यक्रम है
जिन्हे न जाने ये पूरा करते कितने पाँच सालो में,
बुलाते आदमियों को पैसों पर ये,
सुनाने के लिए भाषण अपने ये,
जो आवाज उठता इन के लिए
बन्द करते उसका रेशन ये
और क्या कहूँ ये इनसान है ।

जो लेते एडमिशन लाखों में
बिगडते कैरियर पैसो से
और क्या कहूँ ये इनसान हैं ।

नीरा साँलंकी
तृतीय वर्ष बी.एस.सी

"सब तीर्थों का तीर्थ यह, हृदय पवित्र बना लें हम,
आओ, यहाँ अजातशत्रु बन, सबको मित्र बना लें हम ।
रेखएँ प्रस्तुत हैं, अपने मन के चित्र बना लें हम,
सौ - सौ आदर्शों को लेकर, एक चरित्र बना ले हम ॥"

-- मैथिलीशरण गुप्त

अजीत के लतीफे

✦ रोबर्ट एक आदमी को पकडकर अजीत के पास लाता है।

रोबर्ट : बोस्स, इसको क्या करें?

अजीत : इसे 'रिवोल्विंग चेर पर बिढा दो।

रोबर्ट : क्यों बोस्स?

अजीत : हमें पता तो चले, चक्कर क्या है।

✦ रोबर्ट एक आदमी को अजीत के गोडौन में चुराते देखकर, उसे पकडके अजीत के पास लाता है।

रोबर्ट : बोस्स, इसका क्या करें?

अजीत : उसको 'वारनिश' में डाल दी।

रोबर्ट : क्यों बोस्स?

अजीत : ताकी वह अच्छी तरह से फिनिश हो जाय ।

✦ रोबर्ट एक आदमी को चुराते देखकर, अजीत के पास पकडकर लाता है सजा के लिए।

अजीत रोबर्ट से कहता है कि चोर के हाथों में भिन्न भिन्न रंग लगाओ ।

रोबर्ट : क्यों बोस्स?

अजीत : ताकी सबको पता तो चले कि वह रंगे हाथों पकडा गया!

✦ रोबर्ट अजीत के पास आकर उसे अपने जुडवा बच्चों के नाम रखने के लिए कहता है।

अजीत : एक का नाम 'पीटर' रखे ।

रोबर्ट : और दूसरे का बोस्स ?

अजीत : रिपीटर ।

✦ अजीत : रोबर्ट, तुम जाकर हरशाद मेहता की डायरी चोरी करो।

रोबर्ट : क्यों बोस्स?

अजीत : ताकी हमें भी पता चले 'बुलशिट' क्या होता है।

✦ अजीत रोबर्ट से कहता है कि गडदार (Traitor) को लिक्विड ओक्सिजन (Liquid Oxygen) के चेम्बर में उछाल दो।

रोबर्ट : क्यों बोस्स?

अजीत : बेवकूफ ! ओकसिजन उसे मरने नहीं देगा और लिकविड उसे जीने नहीं देगा।

"केवल एक सुनहरी यौज है जिसे स्त्रियाँ नापसंद करती है, और वह है खामोशी ।"

- मेरी लिटल

✦ अजीत बहुत कोशिश करता है जेम्स बोन्ड को अपने गेन्ग में शामिल करने के लेकिन हर बार जब शामिल होने के लिए कहता तो बेन्ड जवाब देता 'नेवर'!

एक बार काबुल में अजीत रहते समय, जेम्स बोन्ड भी वहाँ शूटिंग कर रहा था। तब रोबर्ट से अजीत कहता है कि बन्दूक तैयार रखें।

रोबर्ट : क्यों बोस्स?

अजीत : इस बार, बोन्ड विल `Never say never again'!

✦ अजीत एक आदमी का खून करता है। वहा रोबर्ट से कहता है - इस आदमी को हीरो होन्डा की टेन्क में डाल दो ।

रोबर्ट (ताजुब होकर) : क्यों बोस्स?

अजीत : फील इट, शार्ट इट, फरगेट इट!

✦ अजीत : रोबर्ट, मोना का हाथ काट दो।

रोबर्ट : क्यों बोस्स?

अजीत : उसको 'टैपिंग' नहीं आती। कम से कम शोर्टहेन्ड तो आयेगी!

जाहिद एच. जवली
II बी.ए

सूक्त

''हमें स्वयं से या दूसरों सें सौ प्रतिशत नम्रता को आशा नहीं करनी चाहीए जैसे कि हम किसी से सौ प्रतिशत सर्वज्ञ होने की आशा नहीं करते
- माइकेल डयूरी

Always Wishing You the Best

PB

PRINTERS BANGALORE

(The Institutional Printers)

No. 62, Taj Complex, Meenakshi Koil Street,
Shivaji Nagar, Bangalore - 560 051.

For your needs in

Printing, Designing & Publication

★ Letter Press ★ Offset ★ DTP ★ Screen

Contact
Phone : 5512918

With Best Compliments From

OLYMPIC SPORTS

House of Quality Sports Goods

85/A, K.H. Road, (Double Road), BANGALORE - 560 027.
Phone : 2220571, 2234341
(We have *No Branches*)

With Best Compliments From

MY MASTER

PRINTERS AND PUBLISHERS

'K' 5th Street Cross
Narayana Pillai Street
Bangalore - 560 001
Phone : 5512918


Right Place for Publishing Your Educational Books



With Best Compliments From :

M/S. DUTTA SCIENTIFIC WORKS (MADRAS)

38, Prithvi Buildings, Kempegowda Road,
(Behind Bank of Baroda), P.B. No. 9927, Bangalore - 560 009

Phone : 2267019 & 2262590




MANUFACTURERS & DEALERS OF SCIENTIFIC INSTRUMENTS,
GLASSWARES, CHEMICALS & ELECTRONIC INSTRUMENTS.

With

Best

Compliments

From :



Shree Raghavendra Enterprises

STOCKISTS IN : **SHANKAR CEMENT, CORAMANDAL & PRIYA CEMENT**

A.C. PIPES, A.C. SHEETS & SANITORY FITTINGS ETC.

Main Road, S.G. Palya, D.R. College Post, Bangalore - 560 029

Phone : 633681 Office : 5535190

With Best Compliments From

Sorabh Cement Limited

Manufacturers of Arawali Brand
Portland Cement '43' Grade

Opposite Railway Station,
Neemkathana - 332713.
Dist. Sikkar (Rajasthan).

A MARK OF YOUR FAITH

With Best Compliment of

Estd : 1961


6621395
Tele : 601012
641765 - R

Omprakash Trading Corporation

Shop No : 13, 40 Laxmi Complex
K.R. Road, Fort, Bangalore - 2.

Dealers in : *Scientific Instruments, Laboratory Chemicals and Glass wares.*


Stockist of : *Blue Star Slides & Coverslip*
SDS, NICE & LOBA Chemicals





"Winning Combinations from Microhard"

a) Quality Computers
b) Effective Networking
c) High Performance Softwares
d) Efficient service



Activities

COMPUTER HARDWARE
COMPUTER SOFTWARE
COMPUTER MAINTENANCE
COMPUTER NETWORKING
HARDWARE TRAINING
COMPUTER PERIPHERALS

SOURCE QUALITY FROM MICROHARD


73/1 Airport Road Domlur, Bangalore
Phone : 2237820, 647497, 5592381, 568085
FAX 5545844, TLX 0845-2050

With Best Compliments From

S. H. Krishnamurthy

SRI MANJUNATHA BRICKS

(Suppliers of Building Materials)



Factory :
11th Mile,
Sakalavara Village,
Bannerghatta Road,
Bangalore.

Office :
No. 17, Ist Main Road,
S.G. Palya, D.R.C. College Post,
Bangalore-560 029.
Phone : 5535190



Beat them or Join them with SIB's Corporate Financing

South Indian Bank has attractive Corporate Financing schemes to suit your financing requirements. So it won't be long before you join the big league.

We have set up a specialised Corporate Banking Division at our head office to serve you better. We move fast attending to your needs, solving your problems quickly. With a sound deposit base of over Rs. 1000 crores, and 64 years of banking experience, we have the second largest branch network in India among private sector banks with 309 branches.

Our schemes include:

- Term Loans
- Working Capital Finance
- Non-Fund Based Facilities
- Export and Import Financing
- Bridge Loans against Capital Issues.

The South Indian Bank Ltd

CORPORATE BANKING DIVISION
Head Office: SIB House, P.B.No. 28,
Thrissur - 680 001 Kerala
Telex: 0887 203 Fax: 04

YOUR INTEREST ABOVE EVERYTHIN

CB / 17

Chairman : K. Chenan Varghese

METRO CONTACT BRANCHES: ● BOMBAY-Fort. Ph: 2611209 ● CALCUTTA - Dacres Lane. Ph: 2486601 ● NEW DELHI - Connaught Place. Ph:311585 ● MADRAS - George Town. Ph: 583153 ● AHMEDABAD-Ashram Road. Ph: 461858 ● HYDERABAD - Abids. Ph: 231196 ● BANGALORE-Avenue Road. Ph: 216466 ● INDUSTRIAL FINANCE BRANCH, COIMBATOE. Ph: 215722 ● OVERSEAS BRANCH, ERNAKULAM Ph: 362826

OTHER MAJOR BRANCHES: ● Pune Ph: 640461, 658110 ● Salem Ph: 52080 ● Madurai Ph: 22967, 24497 ● Tuticorin Ph: 21693 ● Trichy Ph: 25507, 33652 ● Erode Ph: 78447, 23957 ● Patna Ph: 264343 ● Panaji-Goa Ph: 45130 ● Surat Ph: 632605, 632614 ● Visakhapatnam Ph: 63727 ● Mysore Ph: 24979 ● Mangalore Ph: 34069 ● Thiruvananthapuram Ph: 61747, 67819 ● Kottayam Ph: 567173, 566930 ● Palakkad Ph: 26655, 24008 ● Kozhikode Ph: 65880 ● Kannur Ph: 6842

CT Library
0007933 6
M73.2 C461/1994